ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರ ಕಥೆಗಳು: ಒಂದು ಅಧ್ಯಯನ

ಕನ್ನಡ ಎಂ.ಫಿಲ್. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

ಸಂಶೋಧಕರು
ಸಿಂಧು ಎಚ್.ಆರ್
ನೋಂದಣಿ ಸಂಖ್ಯೆ : ಕೆ.ಆರ್.ಎಸ್.ಎಮ್.ಕೆ.ಎಸ್-೦೦೬೩೦

ಮಾರ್ಗದರ್ಶಕರು
ಡಾ॥ ಪಿ. ಬೆಟ್ಟೇಗೌಡ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ವಿಜಯನಗರ, ಮೈಸೂರು.

ಅಧ್ಯಯನ ಕೇಂದ್ರ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ

1064

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೨-೨೦೧೩

1064

AKSHARA GRANTHALAYA
ACC.NO. 048872

1064

1064

ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರ ಕಥೆಗಳು: ಒಂದು ಅಧ್ಯಯನ

ಕನ್ನಡ ಎಂ.ಫಿಲ್. ಪದವಿಗಾಗಿ
ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರಪಡಿಸಿದ
'ಎಂ.ಫಿಲ್. ನಿಬಂಧ'

ಸಂಶೋಧಕರು
ಸಿಂಧು ಎಚ್.ಆರ್
ನೋಂದಣಿ ಸಂಖ್ಯೆ : ಕೆ.ಆರ್.ಎಸ್.ಎಮ್.ಕೆ.ಎಸ್-೦೦೬೩೦

ಮಾರ್ಗದರ್ಶಕರು
ಡಾ॥ ಪಿ. ಬೆಟ್ಟೇಗೌಡ
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ವಿಜಯನಗರ, ಮೈಸೂರು.

ಅಧ್ಯಯನ ಕೇಂದ್ರ
ಎಂ.ಎಲ್. ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ
ಕರ್ನಾಟಕ ಸಂಘ (ರಿ), ಮಂಡ್ಯ

ಕನ್ನಡ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೧೨-೨೦೧೩

8K0.9
SIN b
048872

ದೃಢೀಕರಣ ಪತ್ರ

'ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರ ಕಥೆಗಳು: ಒಂದು ಅಧ್ಯಯನ' ಎಂಬ ವಿಷಯದ ಮೇಲೆ ಈ ನಿಬಂಧವನ್ನು ಕನ್ನಡ ವಿಶ್ವವಿದ್ಯಾನಿಲಯದ **ಎಂ.ಫಿಲ್ (ಕನ್ನಡ) ಪದವಿಗೆ** ವಿದ್ಯಾರ್ಥಿಯಾದ **ಸಿಂಧು.ಎಚ್.ಆರ್** ಅವರು ನನ್ನ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಯಲ್ಲಿ ಬರೆದು ಒಪ್ಪಿಸುತ್ತಿದ್ದಾರೆಂದು ಹಾಗೂ ಈ ವಿಷಯದ ಬಗ್ಗೆ ಬೇರೆ ಯಾರಿಗೂ ನಾನು ಮಾರ್ಗದರ್ಶನ ಮಾಡಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರ ಸಹಿ

(ಡಾ॥ ಪಿ. ಬೆಟ್ಟೇಗೌಡ)
ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ
ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಜಯನಗರ, ಮೈಸೂರು.

ಡಾ॥. ಪಿ. ಬೆಟ್ಟೇಗೌಡ
ಸಹ ಪ್ರಾಧ್ಯಾಪಕರು
ಸರ್ಕಾರಿ ಮಹಿಳಾ ಕಾಲೇಜು,
ವಿಜಯನಗರ, ಮೈಸೂರು.

ದಿನಾಂಕ : 18/2/2012.
ಸ್ಥಳ : ಮಂಡ್ಯ

ಪ್ರಮಾಣ ಪತ್ರ

'ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರ ಕಥೆಗಳು: ಒಂದು ಅಧ್ಯಯನ' ಎಂಬ ವಿಷಯದ ಮೇಲೆ ಈ ನಿಬಂಧವನ್ನು **ಡಾ॥ ಪಿ. ಬೆಟ್ಟೇಗೌಡ** ಅವರ ಮಾರ್ಗದರ್ಶನದಲ್ಲಿ ನನ್ನ ಸಂಶೋಧನೆಯ ಫಲವಾಗಿ ರಚಿಸಲ್ಪಟ್ಟು ಕನ್ನಡ ವಿಶ್ವವಿದ್ಯಾನಿಲಯದ **ಎಂ.ಫಿಲ್. (ಕನ್ನಡ) ಪದವಿ**ಗೆ ಅರ್ಪಿಸುತ್ತಿದ್ದೇನೆ. ಈ ನಿಬಂಧವನ್ನು ಹಿಂದಿನ ವರ್ಷಗಳಲ್ಲಿ ಯಾರೂ ಇಲ್ಲಿಯವರೆಗೆ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿಲ್ಲವೆಂದು ನಾನು ಇಲ್ಲಿ ಪ್ರಮಾಣೀಕರಿಸುತ್ತಿದ್ದೇನೆ.

ಸಿಂಧು ಹೆಚ್.ಆರ್.

ಸಿಂಧು ಹೆಚ್.ಆರ್.
ಎಂ.ಫಿಲ್. ವಿದ್ಯಾರ್ಥಿ
ನೋಂದಣಿ ಸಂಖ್ಯೆ:
ಕೆ.ಆರ್.ಎಸ್.ಎಂ.ಕೆ.ಎಸ್-೦೦೬೩೦

ದಿನಾಂಕ: ೨೬-೭-೨೦೧೩
ಸ್ಥಳ : ಮಂಡ್ಯ

ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರ ಕಥೆಗಳು; ಒಂದು ಅಧ್ಯಯನ

ಪರಿವಿಡಿ

ಅಧ್ಯಾಯ ೧. ಉದ್ದೇಶ ಮತ್ತು ವ್ಯಾಪ್ತಿ ೧-೪

ಅಧ್ಯಾಯ ೨. ಸಣ್ಣ ಕಥೆಗಳ ಹುಟ್ಟು ಮತ್ತು ಬೆಳವಣಿಗೆ ೫-೯

ಅಧ್ಯಾಯ ೩. ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರ ಬದುಕು ಮತ್ತು ಬರಹ ೧೦-೧೨

ಅಧ್ಯಾಯ ೪. ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರ ಕಥೆಗಳ ವಿಶ್ಲೇಷಣೆ ೧೩-೬೬

೪.೧ ಸಾಮಾಜಿಕ ಚಿತ್ರಣ

೪.೨ ಕೌಟುಂಬಿಕ ಚಿತ್ರಣ

೪.೩ ಹೆಣ್ಣಿನ ಬದುಕು

೪.೪ ರೈತಾಪಿ ಬದುಕು

ಅಧ್ಯಾಯ ೫. ಭಾಷೆ ಮತ್ತು ಅಭಿವ್ಯಕ್ತಿ ೬೭-೬೯

ಅಧ್ಯಾಯ ೬ ಉಪಸಂಹಾರ ೭೦-೭೧

ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರ ಕೃತಿಗಳು

ಪರಾಮರ್ಶನ ಗ್ರಂಥಗಳು

ಅಧ್ಯಾಯ-೧

ಉದ್ದೇಶ ಮತ್ತು ವ್ಯಾಪ್ತಿ

ಸಣ್ಣ ಕಥೆ ಒಂದು ಸೃಜನಶೀಲವಾದುದು. ಅದು ನಿತ್ಯ ನಿರಂತರವಾಗಿ ನಡೆಯುತ್ತಾ ಬಂದಿದೆ. ಆಧುನಿಕ ಕನ್ನಡ ಸಣ್ಣ ಕಥಾ ಸಾಹಿತ್ಯ, ಕನ್ನಡದ ಪ್ರಾಚೀನ ಅಭಿಜಾತ ಕಥಾ ಪರಂಪರೆಯ ಪ್ರೇರಣೆ ಮತ್ತು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಬಂದುದಾಗಿದೆ. ಅದರಲ್ಲಿ ವೈವಿಧ್ಯತೆ ಉಂಟಾಗಿ ಸಣ್ಣ ಕಥೆ ಬರಹಗಾರರ ಮುಖ್ಯ ಮಾಧ್ಯಮವಾಯಿತು. ಹ್ಯೂ ವಾಕರನು ಹೇಳುವ ಪ್ರಕಾರ "ಇಂಗ್ಲಿಷ್ ಸಾಹಿತ್ಯದಲ್ಲಿ ಸಣ್ಣ ಕತೆಗಳು ೧೯ನೇ ಶತಮಾನದಲ್ಲಿಯೇ ತಮ್ಮ ಪ್ರಾಬಲ್ಯದ ಸ್ಥಾನವನ್ನು ಮುಟ್ಟಿದ್ದವು"[೧]. ಎಂಬ ಅಭಿಪ್ರಾಯವನ್ನು ತಿಳಿಸಿದ್ದಾನೆ. ಪಾಶ್ಚಾತ್ಯ ಸಾಹಿತ್ಯದ ಪ್ರಭಾವ ಮತ್ತು ದೇಶೀಯ ಸತ್ವವನ್ನು ತಮ್ಮದಾಗಿಸಿಕೊಂಡ ಕವಿಗಳು ಸಣ್ಣಕಥೆಯ ರಚನೆಯಲ್ಲಿ ತೊಡಗಿದರು. ಇದರಿಂದ ಸಣ್ಣಕಥೆಯಲ್ಲಿ ವೈವಿಧ್ಯತೆ ಕಾಣಿಸಿಕೊಂಡು ಜೀವಂತಿಕೆಯನ್ನು ಪಡೆದುಕೊಂಡಿತು. ಓದುಗರ ಮೆಚ್ಚುಗೆಯ ಪ್ರಕಾರವಾಗಿ ಹೀಗೆ ಹುಟ್ಟಿಕೊಂಡ ಸಾಹಿತ್ಯವನ್ನು ನವೋದಯ, ಪ್ರಗತಿಶೀಲ, ನವ್ಯ, ಬಂಡಾಯ-ದಲಿತ ಎಂಬುದಾಗಿ ವಿಭಾಗ ಮಾಡಿಕೊಂಡೆವು. ಮೊದಲು 'ಪಂಜೆ ಮಂಗೇಶರಾಯ' ಅವರಿಂದ ಪ್ರಾರಂಭಗೊಂಡು, ಇಂದಿನವರೆಗೆ ಎಲ್ಲಾ ಕವಿಗಳು ಕಥೆಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುತ್ತಾ ವಿಪುಲವಾದ ಕಥಾ ಸಾಹಿತ್ಯ ಸೃಷ್ಟಿಗೆ ಕಾರಣರಾಗಿದ್ದಾರೆ.

ಬೊಮ್ಮನಾಯಕನಹಳ್ಳಿ ಕೃಷ್ಣಪ್ಪನವರು ಹೊಸ ತಲೆಮಾರಿನ ಕಥೆಗಾರರಾಗಿ ಬರವಣಿಗೆಯನ್ನು ಆರಂಭಿಸಿ ಯಾವುದೇ ತತ್ವ ಪಂಥ, ಚಿಂತನೆಗೆ ಅಂಟಿಕೊಳ್ಳದೆ ತಮ್ಮ ಅನುಭವದಿಂದ ಬಂದ, ತಾವು ಕಂಡು ಕೇಳಿದ ವಿಚಾರಗಳನ್ನು ತಮ್ಮ ಸಾಹಿತ್ಯ ರಚನೆಯಲ್ಲಿ ತೋರಿದ್ದಾರೆ. ಒಬ್ಬ ರೈತಾಪಿ ಕುಟುಂಬದಿಂದ ಬಂದ ಕೃಷ್ಣಪ್ಪ ಅವರು ಕೃಷಿ ಕ್ಷೇತ್ರದ ನೊರೆಂಟು ಸಂಕಟ ಸಮಸ್ಯೆಗಳ ಬಗ್ಗೆ ಚೆನ್ನಾಗಿ ಅರಿತುಕೊಂಡುವ ಅವೆಲ್ಲವನ್ನು ತಮ್ಮ ಕಥೆಗಳಲ್ಲಿ ವಸ್ತುವನ್ನಾಗಿಸಿ ಕೊಂಡು ಹೊರಟದ್ದು, ಅವರ ಗ್ರಾಮೀಣ ಜೀವನದ ಬಗೆಗಿನ ಕಾಳಜಿಯನ್ನು ವ್ಯಕ್ತಪಡಿಸುತ್ತದೆ. ಕೃಷ್ಣಪ್ಪ ಅವರ ಕಥೆಗಳ ಬಗ್ಗೆ ಹೆಚ್.ಎಸ್. ಪಾರ್ವತಿಯವರು "ಪ್ರೇಮ ತ್ರಿಕೋನದ ಕತೆಗಳಿಲ್ಲದೆ ಕತೆಗಾರರು ಹಳ್ಳಿಯ ಜನಜೀವನಕ್ಕೆ ಒತ್ತು ಕೊಟ್ಟಿದ್ದಾರೆ". ಎಂದು ಅಭಿಪ್ರಾಯ ಪಟ್ಟಿದ್ದಾರೆ. ಹೀಗೆ ತಮ್ಮದೇ ಆದ ವಿಶಿಷ್ಟ ದಾರಿಯಲ್ಲಿ ಬೆಳೆದು ಬಂದ ಕೃಷ್ಣಪ್ಪನವರು ತಮ್ಮ ಕಥಾ ಸಾಹಿತ್ಯಕ್ಕೆ ಹೆಚ್ಚು ಒತ್ತು ಕೊಟ್ಟಿದ್ದಾರೆ.

ಕೃಷ್ಣಪ್ಪ ಅವರ ಕಥಾ ಸಾಹಿತ್ಯ ವಿಸ್ತಾರವಾದುದು. ವಸ್ತು ವಿಚಾರಗಳಲ್ಲಿ ವೈವಿಧ್ಯತೆಯನ್ನು ಹೊಂದಿರುವಂಥದ್ದು. ಡಾ॥ ಬಂಜಗೆರೆ ಜಯಪ್ರಕಾಶ್‌ರವರು ಹೇಳುವಂತೆ ಕೃಷ್ಣಪ್ಪ ಒಬ್ಬ ವಿಶಿಷ್ಟ ಕವಿ. ಕಥೆಗಾರ. ಗ್ರಾಮೀಣ ಸಮಾಜದ ಒಳ ಹೊರಗುಗಳನ್ನು ಮನಮುಟ್ಟುವಂತೆ, ತಮ್ಮ ಕಥೆಗಳಲ್ಲಿ ತಮ್ಮ ಸೃಜನ ಶೀಲತೆಯನ್ನು ತೋರಿಸಿದ್ದಾರೆ. ಆದ್ದರಿಂದ ಅವರ ಕಥೆಗಳ ಬಗ್ಗೆ ಯಾವುದೇ ಅಧ್ಯಯನ ನಡೆದಿಲ್ಲವಾದ್ದರಿಂದ ಅವರ 'ಬಯಲು ಸೀಮೆಯ ಕತೆಗಳು' ಎಂಬ ಕೃತಿಯನ್ನು ಸಮಗ್ರವಾಗಿ ಅದರಲ್ಲಿರುವ ಸಮಾಜ, ಜೀವನ ಚಿತ್ರಣ, ಹೆಣ್ಣಿನ ಬದುಕು, ರೈತನ ಜೀವನ, ಎಲ್ಲವನ್ನು ಅಧ್ಯಯನ ಮಾಡಿ ಅವರ ಚಿಂತನೆ, ನಿಲುವು, ಆಸಕ್ತಿ, ತತ್ವಗಳನ್ನು ಅನಾವರಣಗೊಳಿಸುವುದು ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

'ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರ ಕತೆಗಳು: ಒಂದು ಅಧ್ಯಯನ' ಎಂಬ ನಿಬಂಧವು ಮುಖ್ಯವಾಗಿ ಆಧುನಿಕ ಕನ್ನಡ ಸಣ್ಣ ಕಥೆಯ ಹುಟ್ಟು, ಬೆಳವಣಿಗೆ ಪ್ರೇರಣೆ, ಕೃಷ್ಣಪ್ಪ ಅವರ ಬದುಕು-ಬರಹ ಅವರ ಕಥಾಸಾಹಿತ್ಯವನ್ನು ಕುರಿತು ವಿಷಯ ವಿಶ್ಲೇಷಣೆ ವ್ಯಾಪ್ತಿಯನ್ನು ಹೊಂದಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣ ಕತೆಯ ಮೂಲ, ಪ್ರಭಾವ, ಅದರ ಬೆಳವಣಿಗೆಯನ್ನು ಹಾಗೆಯೇ ಆಯಾ ಕಾಲಘಟ್ಟಗಳಿಗೆ ಸ್ಪಂದಿಸಿದ, ಪ್ರಮುಖ ಕವಿಗಳು ಮುಂತಾದ ಅಂಶಗಳನ್ನು ಪರಿಚಯಿಸಲಾಗಿದೆ. ಹೊಸ ತಲೆಮಾರಿನ ಕಥಾ ಸಾಹಿತ್ಯದಲ್ಲಿ ಮುಖ್ಯವಾಗಿ ಕಂಡು ಬರುವ ಕೃಷ್ಣಪ್ಪ ಅವರ ಬದುಕನ್ನು ಕುರಿತಂತೆ ಅವರ ಹುಟ್ಟು, ಬೆಳವಣಿಗೆ, ವಿದ್ಯಾಭ್ಯಾಸ, ಸಾಹಿತ್ಯ ರಚನೆ, ಬರವಣಿಗೆಗೆ ಇದ್ದ ಸಾಂಸ್ಕೃತಿಕ, ಸಾಮಾಜಿಕ ಹಿನ್ನೆಲೆ, ಪ್ರಶಸ್ತಿ ಗೌರವಗಳು, ಸನ್ಮಾನಗಳು ಅವರಿಗಾದ ಸ್ಫೂರ್ತಿ, ಪ್ರೇರಣೆಗಳು ಮುಂತಾದ ಅಂಶಗಳನ್ನು ಅನಾವರಣಗೊಳಿಸಲಾಗಿದೆ.

'ಕೃಷ್ಣಪ್ಪ ಅವರ ಕಥೆಗಳ ವಿಶ್ಲೇಷಣೆ' ಅಧ್ಯಯನ ಕೇಂದ್ರ ಭಾಗವಾಗಿದ್ದು, ಮುಖ್ಯವಾಗಿ ಅವರ ಕಥೆಗಳನ್ನು, ಸಮಾಜ, ಹಳ್ಳಿಯ ಪ್ರಕೃತಿ, ಮಾನವ ಸ್ವಭಾವ, ಪ್ರೀತಿ, ತಾರತಮ್ಯ, ಹೆಣ್ಣಿನ ಬದುಕು ತುಳಿತ, ಹೋರಾಟ, ರೈತನ ಜೀವನ, ನೋವು-ನಲಿವು ಸಂಘರ್ಷ ಮುಂತಾದ ವಸ್ತು ವೈವಿಧ್ಯತೆಯನ್ನು ಒಳಗೊಂಡ ಅಂಶಗಳನ್ನು ಉಪ ಅಧ್ಯಾಯಗಳಾಗಿ ಮಾಡಿಕೊಂಡು ವಿಶ್ಲೇಷಣೆ ಮಾಡಲಾಗಿದೆ.

ಗ್ರಾಮೀಣ ಪರಿಸರವನ್ನು ವಸ್ತುವಾಗಿಸಿಕೊಂಡು ಅಲ್ಲಿ ಬದುಕುವ ಜನರ ನೋವು ನಲಿವು, ಸಾಮಾಜಿಕ ಸಂಘರ್ಷ, ಕೆಳವರ್ಗದವರ ಶೋಷಣೆ, ತಾವು ಹುಟ್ಟಿ ಬೆಳೆದ ಊರಿನ ಬಗ್ಗೆ, ಭೂಮಿಯ ಬಗ್ಗೆ ಇರುವ ಇಂದಿನ ಯುವ ಪೀಳಿಗೆಯ ನಿರ್ಲಕ್ಷ್ಯದ ಮನೋಭಾವ; ಸ್ವಾರ್ಥ, ಅಲ್ಲಿಯ ಸಂಬಂಧಗಳ ಜೊತೆಗಿನ ವಿರುದ್ಧವಾದ ಭಾವನೆಗಳ ಜೊತೆಗೆ ಆಧುನಿಕತೆಯ ಪ್ರಭಾವದಿಂದ ಆಗುತ್ತಿರುವ ಬದಲಾವಣೆಯಿಂದ ಗ್ರಾಮೀಣ ಜೀವನದ ಮೇಲೆ ಆಗುತ್ತಿರುವ ಪರಿಣಾಮ, ಪ್ರಸ್ತುತದಲ್ಲಿ ಶಿಕ್ಷಣ ಕಲಿತರೂ ಕೂಡ ಗ್ರಾಮೀಣದಲ್ಲಿರುವ ಮೂಢನಂಬಿಕೆಗಳನ್ನು ಕೈ ಬಿಡಲು ಸಾಧ್ಯವಾಗದೆ, ಆಚರಿಸಿಕೊಂಡು ಬರುತ್ತಿರುವುದು. ಇದರಿಂದ ವ್ಯವಸ್ಥೆಯೊಳಗಿನ ಸಾಂಪ್ರದಾಯಿಕ ಹಿಡಿತಗಳನ್ನು ಗುರುತಿಸುವಲ್ಲಿ ಲೇಖಕರ ಧೋರಣೆಯನ್ನು ವಿವೇಚಿಸಲಾಗಿದೆ. ಹೀಗೆ ಮುಂದುವರಿದರೆ ಸಮಾಜ ಯಾವ ಸ್ಥಿತಿಗೆ ತಲುಪಬಹುದೆಂಬ ಎಚ್ಚರಿಕೆಯ ದನಿಗಳನ್ನು ಇವರ ಕಥೆಗಳಲ್ಲಿ ಗುರುತಿಸಬಹುದಾಗಿದೆ.

'ಹುಟ್ಟುತ್ತಾ ಅಣ್ಣ-ತಮ್ಮಂದಿರು, ಬೆಳೆಯುತ್ತಾ ದಾಯಾದಿಗಳು' ಎಂಬ ಹಿರಿಯರ ಗಾದೆಯಂತೆ ಕುಟುಂಬದಲ್ಲಿ ದ್ವೇಷ, ಅಸೂಯೆ, ಶೋಷಣೆಯನ್ನು ಕಾಣಲಾಗುತ್ತದೆ. ತಾವು ಹುಟ್ಟಿ ಬೆಳೆದ ಬಾಲ್ಯದ ನೆನಪಿನ ಅನುಭವಗಳಿಂದ ಸಮಾಜದ ರೀತಿನೀತಿಯನ್ನು ಕತೆಗಳಲ್ಲಿ ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಗ್ರಾಮೀಣ ಜೀವನದ ಕೌಟುಂಬಿಕ ಕಲಹಗಳು, ಸಂಘರ್ಷ ಮುಂತಾದವನ್ನು ನೇರವಾಗಿ ಯಾವುದೇ ಕಥನ ತಂತ್ರವಿಲ್ಲದೆ ಸಹಜವಾಗಿ ರಚಿಸಿದ್ದಾರೆ. ಆ ಜೀವನದಲ್ಲೂ ಬದುಕಿನ ಏರಿಳಿತಗಳು ಅದರೊಳಗೆ ಉಸಿರಾಡುವ ಕ್ರೌರ್ಯ, ಅಸಹಾಯಕತೆಯನ್ನು ತಮ್ಮ ಕಥೆಗಳ ಮೂಲಕ ಎತ್ತಿ ಹಿಡಿದಿರುವುದನ್ನು ಗುರುತಿಸಲಾಗಿದೆ.

ಇವರ ಕಥೆಗಳಲ್ಲಿ ಶತಶತಮಾನದಿಂದಲೂ ಶೋಚನೀಯ ಸ್ಥಿತಿಯಲ್ಲಿ ಬದುಕು ನಡೆಸುವ ಹೆಣ್ಣಿನ ಜೀವನವನ್ನು ಕಾಣಬಹುದು. ಉತ್ತಮ ಸ್ಥಾನಮಾನಗಳಿದ್ದರೂ, ಹೆಣ್ಣನ್ನು ನಿಕೃಷ್ಟವಾಗಿ ಕಾಣುವ, ಗಂಡಿನ ಅಡಿಯಾಳಾಗಿ ಬದುಕುವ ಹೆಣ್ಣಿನ ಸ್ಥಿತಿಯನ್ನು ಗುರುತಿಸಬಹುದು. "ಹೆಣ್ಣಿಗೆ ಹೆಣ್ಣೆ ಶತ್ರು" ಎಂಬಂತೆ ಹೆಣ್ಣಿನಿಂದ ಮತ್ತೊಬ್ಬ ಹೆಣ್ಣಿನ ನಿಂದನೆ ಅಪವಾದಗಳ, ಸರಮಾಲೆಗಳನ್ನು ಮುಖ್ಯವಾಗಿ

ಗುರುತಿಸಬಹುದು. ಇಂದಿಗೂ ಹೆಣ್ಣಿಗೆ ಆಗುತ್ತಿರುವ ಮೋಸ, ವಂಚನೆ, ವರದಕ್ಷಿಣೆಯಂತಹ ಕೆಟ್ಟ ಪದ್ಧತಿಗಳಿಂದ ಸಾವಿಗೆ ಬಲಿಯಾಗುವುದನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಅವುಗಳಿಂದ ಸಮಾಜಕ್ಕೆ ಒದಗುವ ಸಮಸ್ಯೆಗಳನ್ನು ಮೇಲ್ವರ್ಗದವರ ಕಾಮುಕತೆಗೆ ಬಲಿಯಾಗಿ ಬದುಕುತ್ತಿರುವ ಹೆಣ್ಣಿನ ಜೀವನವನ್ನು ಚಿತ್ರಿಸಿದ್ದಾರೆ.

ದೇಶದ ಬೆನ್ನಲುಬು ರೈತ. ಆತ ಒಂದು ಶಕ್ತಿಯಿದ್ದಂತೆ, ಅವನು ಪ್ರಸ್ತುತದಲ್ಲಿ ಯಾವ ರೀತಿಯಲ್ಲಿ ಬದುಕು ನಡೆಸುತ್ತಿದ್ದಾನೆ, ಅವನ ಸಮಸ್ಯೆಗಳಿಗೆ ಸರ್ಕಾರ ಕೊಡುವ ಪರಿಹಾರ, ಹಿಂದೆ ದುಡಿದು ಬದುಕುತ್ತಿದ್ದ ರೈತನ ಸ್ಥಿತಿಗೂ, ಇಂದಿನ ರೈತನಿಗೂ ಇರುವ ವ್ಯತ್ಯಾಸವನ್ನು ಕಾಣಲಾಗುತ್ತದೆ. ಬದುಕಿನಲ್ಲಿ ನೆಲೆ ಕಾಣಲು ಸಾಧ್ಯವಾಗದೆ ಕಂಗಲಾಗಿರುವ ರೈತನ ಆತ್ಮಹತ್ಯೆಯ ಘಟನೆಗಳು ಎಲ್ಲವೂ ಮುಂದಿನ ದಿನಗಳಲ್ಲಿ ಸಮಾಜಕ್ಕೆ ಒದಗಬಹುದಾದ ಆತಂಕವನ್ನು ವ್ಯಕ್ತಪಡಿಸಿರುವುದನ್ನು ಗುರುತಿಸಲಾಗಿದೆ.

ಹಾಗೆಯೇ ಎಲ್ಲರು ಪ್ರಸಿದ್ಧ ಕಥೆಗಾರರನ್ನು ಆಯ್ಕೆ ಮಾಡಿಕೊಂಡು ಅವರ ಕಥೆಗಳ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಆದರೆ ಒಬ್ಬ ಹಳ್ಳಿಗಾಡಿನಲ್ಲಿ ಹುಟ್ಟಿ ಬೆಳೆದ, ಅಲ್ಲಿ ಜೀವನವನ್ನು ಸಾಹಿತ್ಯದ ಮೂಲಕ ಕಟ್ಟಿಕೊಟ್ಟಿರುವ, ಕೃಷ್ಣಪ್ಪ ಅವರ ಸಾಹಿತ್ಯವನ್ನು ಯಾರು ಸಹ ಇದುವರೆಗೂ ಗುರುತಿಸುವ ಕೆಲಸ ಮಾಡಿಲ್ಲ. ಮೌನವಾಗಿದ್ದ ಅವರ ಕಥಾಸಾಹಿತ್ಯವನ್ನು ಗುರುತಿಸಿ, ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಮೊದಲ ಪ್ರಯತ್ನ ನನ್ನದಾಗಿದೆ. ಅದನ್ನು ಆಯ್ಕೆ ಮಾಡಿಕೊಂಡ ಕಾರಣ ಪ್ರಸ್ತುತ ಗ್ರಾಮೀಣ ಸಮಾಜದ ಜೀವನ, ಕೌಟುಂಬಿಕ ಜೀವನ ಹಾಗೂ ದೇಶದ ಬೆನ್ನೆಲುಬು ರೈತನ ಸ್ಥಿತಿ,ಅವನ ಬದುಕು ಅಲ್ಲಿನ ಪರಿಸರ ಗ್ರಾಮೀಣ ಮಹಿಳೆಯ ಹೋರಾಟದ ಜೀವನ–ಹೀಗೆ ಎಲ್ಲವನ್ನು ವಾಸ್ತವಕ್ಕೆ ಹತ್ತಿರವಾಗುವಂತೆ ತಮ್ಮ ಸರಳ ಆಡುನುಡಿಯಲ್ಲಿ ತಿಳಿಸಿರುವುದನ್ನು, ಎಲ್ಲರಿಗೂ ಪರಿಚಯಿಸುವುದು ನನ್ನ ಅಧ್ಯಯನದ ಉದ್ದೇಶವಾಗಿದೆ. ಕೃಷ್ಣಪ್ಪ ಅವರಿಗೆ ಗ್ರಾಮೀಣ ಜೀವನದ ಮೇಲಿರುವ ಪ್ರೀತಿ, ವಿಶ್ವಾಸ,ಅಭಿಮಾನ ಅವರ ಸೃಜನಶೀಲತೆಯನ್ನು ಗುರುತಿಸುವುದು ಈ ಅಧ್ಯಯನದ ಉದ್ದೇಶಗಳಲ್ಲಿ ಒಂದು.

ಅವರ ಬಯಲು ಸೀಮೆಯ ಕಥೆಗಳು ಎಂಬ ಸಮಗ್ರ ಕೃತಿಯಲ್ಲಿ ಕೆಲವೊಂದು ಕಥೆಗಳನ್ನು ಬಿಟ್ಟು ಮಿಕ್ಕೆಲ್ಲವನ್ನು ನನ್ನ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದೇನೆ. ಕಾರಣ ಗ್ರಾಮೀಣ ಜೀವನದಲ್ಲಿ ಆಧುನಿಕತೆ ಪ್ರವೇಶ ಮಾಡಿರುವುದರಿಂದ, ಆದರಿಂದ ಆಗುತ್ತಿರುವ ಬದಲಾವಣೆಯನ್ನು ಅವುಗಳಿಂದ ಸಮಾಜಕ್ಕೆ ಒದಗುವ, ದುಸ್ಥಿತಿಯನ್ನು ತಿಳಿಸುವ ಕಥೆಗಳನ್ನು ಎಲ್ಲರು ತಿಳಿದು ಎಚ್ಚರಗೊಳ್ಳುವ ಮನಸ್ಸನ್ನು, ಕಾಣುವ ಉದ್ದೇಶದಿಂದ ಅಂತಹ ಕಥೆಗಳನ್ನು ಆಯ್ಕೆ ಮಾಡಿಕೊಂಡಿದ್ದೇನೆ.

ಒಟ್ಟಾರೆಯಾಗಿ ಈ ನಿಬಂಧವು ಸಣ್ಣ ಕಥೆಯ ಹುಟ್ಟು ಬೆಳವಣಿಗೆ, ಕೃಷ್ಣಪ್ಪ ಅವರ ಪರಿಚಯ ಮತ್ತು ಅವರ ಸಣ್ಣ ಕತೆಯ ವಿಶ್ಲೇಷಣೆಯನ್ನು ಒಳಗೊಂಡಿದ್ದು, ಅವರ ಸೃಜನಶೀಲತೆ, ಗ್ರಾಮೀಣ ಜೀವನದ ಮೇಲಿರುವ ಅಭಿಮಾನ, ಕಾಯಕ ನಿಷ್ಠೆ ಮುಂತಾದ ವಿಚಾರಗಳನ್ನು ಅನಾವರಣಗೊಳಿಸುತ್ತದೆ.

ಅಡಿಟಿಪ್ಪಣಿಗಳು

೧. ಉದ್ಧೃತ : ವರದರಾಜ ಹುಯಿಲಗೋಳ– ಕನ್ನಡ ಸಾಹಿತ್ಯದಲ್ಲಿ ಸಣ್ಣಕತೆಯ ಸ್ಥಾನ
ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಪುಟ,೨೪.

ಪ್ರಕಟಣೆ– ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಅಧ್ಯಾಯ – ೨
ಸಣ್ಣ ಕಥೆಯ ಹುಟ್ಟು ಮತ್ತು ಬೆಳವಣಿಗೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಣ್ಣ ಕಥೆ ಒಂದು ಪ್ರಮುಖ ಪ್ರಕಾರ. ಪ್ರಾಚೀನ ಸಾಹಿತ್ಯಕ್ಕೆ ಸಂಸ್ಕೃತದ ಪ್ರಭಾವವಿದ್ದಂತೆ, ಹೊಸಗನ್ನಡ ಸಾಹಿತ್ಯದ ಮೇಲೆ ಪಾಶ್ಚಾತ್ಯ ಸಾಹಿತ್ಯದ ಪ್ರಭಾವವಿದೆ. ಹಾಗೆಯೆ ಸಣ್ಣಕಥೆ ವಿಶಿಷ್ಠ ಪ್ರಕಾರವಾಗಿ ಕನ್ನಡದಲ್ಲಿ ಮೂಡಿ ಬಂದಿದ್ದು ಪಾಶ್ಚಾತ್ಯ ಸಾಹಿತ್ಯದ ಪ್ರಭಾವದಿಂದ ಎನ್ನಬೇಕು. ಹೊಸಗನ್ನಡದಲ್ಲಿ ಈವರೆಗೆ ಬಂದಿರುವ ಸಣ್ಣ ಕಥೆಗಳ ಸಂಖ್ಯೆಯನ್ನು ಹೇಳುವುದು ಕೂಡ ಪ್ರಯಾಸದ ಕೆಲಸವಾಗಿದೆ. ಹಾಗೆಯೇ ಸಣ್ಣ ಕಥೆಯ ಚರಿತ್ರೆಯು ಆಧುನಿಕ ಕನ್ನಡ ಕಾದಂಬರಿಯ ಚರಿತ್ರೆಯನ್ನೇ ಬಹುಮಟ್ಟಿಗೆ ಹೋಲುತ್ತದೆ ಎನ್ನಬಹುದು.

೧೯೦೦ರಲ್ಲಿ 'ಸುವಾಸಿನಿ' ಮಾಸ ಪತ್ರಿಕೆಯಲ್ಲಿ ಪಂಜೆ ಮಂಗೇಶರಾಯರ 'ನನ್ನ ಚಿಕ್ಕ ತಾಯಿ', 'ನನ್ನ ಚಿಕ್ಕ ತಂದೆ', ಎಂಬ ಎರಡು ಕಥೆಗಳು ಪ್ರಕಟವಾದವು. ಪಂಜೆಯವರು, ಎಂ.ಎನ್. ಕಾಮತರು, ಕೆರೂರು ವಾಸುದೇವಾಚಾರ್ಯರು, ಪ್ರಾರಂಭದಲ್ಲಿ ಕಥೆಗಳನ್ನು ಬರೆದವರು. ಕಾಮತರು ಇಂಗ್ಲೀಷ್ ಭಾಷೆಯಲ್ಲಿ ಪ್ರಸಿದ್ಧ ಪತ್ತೇದಾರ, 'ಷರ್ಲಾಕ್ ಹೋಮ್ಸ್' ನಾಯಕನಾದ ಕಥೆಗಳಲ್ಲಿ ಕೆಲವನ್ನು ಕನ್ನಡಕ್ಕೆ ಅನುವಾದಿಸಿದರು. ಆದರೆ ಸಣ್ಣ ಕಥೆಗೆ ಒಂದು ಸ್ವರೂಪವನ್ನು ತಂದು ಕೊಟ್ಟು, ಅದನ್ನು ಗಂಭೀರವಾದ ಜೀವನ ಚಿಂತನೆಯ ಮಾಧ್ಯಮವನ್ನಾಗಿ ಮಾಡಿ, ಭಾಷೆಯನ್ನು ಅದಕ್ಕೆ ಹದಗೊಳಿಸಿದವರು 'ಶ್ರೀನಿವಾಸರು'. ಅವರ ಮೊದಲನೆಯ ಕಥಾ ಸಂಗ್ರಹ 'ಕೆಲವು ಸಣ್ಣಕಥೆಗಳು.' ೧೯೧೧ರಿಂದ ೧೯೨೦ ರವರೆಗೆ ಬರೆದ ಕಥೆಗಳು ಇಲ್ಲಿ ಪ್ರಕಟವಾದವು. ಅವರ ಮೊದಲ ಕಥೆಗಳು 'ರಂಗಪ್ಪನ ಮದುವೆ' ಮತ್ತು 'ರಂಗಪ್ಪನ ದೀಪಾವಳಿ', ಜೀವನವನ್ನು ಗಂಭೀರವಾಗಿ ಕಂಡು ಮನುಷ್ಯ ಮುಟ್ಟಬಹುದಾದ, ಹಿರಿಮೆಯ ಶಿಖರಗಳನ್ನು ಚಿತ್ರಿಸಿದ ಮಾಸ್ತಿಯವರು ಪ್ರಾರಂಭದಲ್ಲಿಯೇ, ವಿಡಂಬನೆ ಇಲ್ಲದ ನವಿರು ಹಾಸ್ಯ ಸ್ವರೂಪವನ್ನು ಸಣ್ಣ ಕಥೆಗೆ ತಂದುಕೊಟ್ಟರು. ಸುಮಾರು ಅರವತ್ತು ವರ್ಷಗಳಲ್ಲಿ ಮಾಸ್ತಿ ಎಪ್ಪತ್ತೈದು ಕಥೆಗಳನ್ನು ಬರೆದ್ದಾರೆ. 'ಗೌತಮಿ ಹೇಳಿದ ಕಥೆ', 'ಕೃಷ್ಣ ಮೂರ್ತಿಯ ಹೆಂಡತಿ', 'ವೆಂಕಟಿಗನ ಹೆಂಡತಿ', 'ಒಂದು ಹಳೆಯ ಕಥೆ', 'ವೆಂಕಟಶಾಮಿಯ ಪ್ರಣಯ', 'ಮಸುಮತ್ತಿ', 'ಮೊಸರಿನ ಮಂಗಮ್ಮ', 'ಕವಿಯ ಬಾಳ ಕೊನೆಯ ದಿನ', ಮೊದಲಾದ ಸೊಗಸಾದ ಕಥೆಗಳನ್ನು ಕೊಟ್ಟಿದ್ದಾರೆ. ಮನುಷ್ಯ ಪ್ರಯತ್ನಿಸಿದರೆ ಬಹು ಎತ್ತರಕ್ಕೆ ಏರಬಹುದು. ಪರಿಶುದ್ಧವಾದ ಹಿರಿದಾದ ಬಾಳನ್ನು ಬಾಳಬಹುದು ಎಂಬುದು ಇವರ ದೃಢ ನಂಬಿಕೆ.

"ದೇವರು ಮನುಷ್ಯನನ್ನು ನಿರ್ಮಿಸಿದನು. ಮನುಷ್ಯನು ತನ್ನ ಮನಸ್ಸಿನಿಂದ ಕಥೆಯನ್ನು ಹುಟ್ಟಿಸಿದನು"[೧]. ಎಂಬ ಮಾತಿಗೆ ಪೂರಕವಾಗಿ ಸಣ್ಣ ಕಥೆಯು ಮನುಷ್ಯನ ಉಗಮದೊಂದಿಗೆ ಬಂದಿದೆ ಎನ್ನಬಹುದು. ಭಾವಗೀತೆಯಂತೆ ಸಣ್ಣ ಕಥೆಯೂ ಸಮೃದ್ಧಿಯಾದ ಬೆಳೆಯನ್ನು ಕಂಡಿದೆ. ಸಾಮಾನ್ಯವಾಗಿ ಕಥೆಗಾರರೆಲ್ಲ ಮನುಷ್ಯನ ಹಿರಿಮೆಯನ್ನು ಬಾಳಿನ ಮೌಲ್ಯಗಳನ್ನು ಬೆಳಗಿಸಲು ಈ ಮಾಧ್ಯಮವನ್ನು ಬಳಸಿಕೊಂಡಿದ್ದಾರೆ ಎನ್ನಬಹುದು. ಆದರ್ಶ ದೃಷ್ಟಿಯಿಂದ ಕಥೆಗಳನ್ನು ಬರೆದ ಕುವೆಂಪು 'ಧನ್ವಂತರಿಯ ಚಿಕಿತ್ಸೆ' ಯಂತಹ ಕಥೆಯಲ್ಲಿ ಭಾರತದ ಬಡವನ ಘೋರ ಕಷ್ಟವನ್ನು ಮನ ಮುಟ್ಟುವಂತೆ ಚಿತ್ರಿಸಿದ್ದಾರೆ. ಶ್ರೀನಿವಾಸರಂತೆ ಬರೆದವರಲ್ಲಿ ಆನಂದ ಅವರು ಒಬ್ಬರು. ಆನಂದರ ಕಥೆಗಳಲ್ಲಿ ಭಾವ ತೀವ್ರತೆಯುಂಟು. ದುಃಖ–ನಲಿವು, ಅನುರಾಗ, ಎಲ್ಲಾ ತೀಕ್ಷ್ಣ 'ನಾನು ಕೊಂದ ಹುಡುಗಿ', 'ಚೊಚ್ಚಲು ಸಂಭ್ರಮ'. 'ಮಾಟಗಾತಿ', 'ಹೆಂಡತಿಯ ಕಾಗದ', ಮೊದಲಾದ ಕಥೆಗಳನ್ನು ರಚಿಸಿದ್ದಾರೆ. ಸಾಮಾನ್ಯವಾಗಿ ಇವರ ಕಥೆ

ಹೇಗೆ ಮುಕ್ತಾಯವಾಗುತ್ತದೆ ಎಂದು ಊಹಿಸುವುದಕ್ಕೆ ಆಗುವುದಿಲ್ಲ. ಓದುಗರಿಗೊಂದು ಆಶ್ಚರ್ಯ ಕಾದಿರುತ್ತದೆ.

ಬಾಳಿನಲ್ಲಿರುವ ಸೌಂದರ್ಯ, ಮನುಷ್ಯನಲ್ಲಿ ಪ್ರಕಟವಾಗಬಹುದಾದ ಹಿರಿಮೆ ಇವನ್ನು ಪ್ರತಿಬಿಂಬಿಸಿ ಓದುಗರ ಅನುಕಂಪವನ್ನು ಎಚ್ಚರಿಸುವ ಮಾಧ್ಯಮವನ್ನಾಗಿ ಅನೇಕರು ಸಣ್ಣಕಥೆಯನ್ನು ಬಳಸಿದ್ದಾರೆ. ಜಿ.ಪಿ.ರಾಜರತ್ನಂ, ಕೃಷ್ಣ ಕುಮಾರ ಕಲ್ಲೂರ್, ಸಿ.ಕೆ. ನಾಗರಾಜರಾವ್, ಕೊಡಗಿನ ಗೌರಮ್ಮ, ಶ್ಯಾಮಲಾದೇವಿ, ಚದುರಂಗ, ಮಿರ್ಜಿ ಅಣ್ಣಾರಾಯ, ಮೊದಲಾದವರು ಈ ಮಾರ್ಗದಲ್ಲಿ ಸಣ್ಣ ಕಥೆಗಳನ್ನು ರಚಿಸಿದ್ದಾರೆ.

ಕಥಾ ಸಾಹಿತ್ಯದಲ್ಲಿ ಮುಖ್ಯವಾಗಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಮತ್ತು ಬಾಗಲೋಡಿ ದೇವರಾವ್, ಹಳ್ಳಿಯ ಜೀವನವನ್ನು ಸಣ್ಣ ಕಥೆಯ ಜಗತ್ತಿಗೆ ಬಹು ಮಟ್ಟಿಗೆ ತಂದು ಕೊಟ್ಟವರು. ಗೊರೂರರು, 'ಮಲ್ಲಿಗೆ ಹಳ್ಳಿಯಲ್ಲಿ ಬಯಲಾಟ', 'ಗಂಡು ಬೀರಿ ಹೊಸಬಿ', 'ಬೆಸ್ತರ ಕರಿಯ', 'ನಾಯಬಾಲ', ಮುಂತಾದ ಕಥೆಗಳನ್ನು ಕೊಟ್ಟಿದ್ದಾರೆ. ಅ.ನ.ಕೃಷ್ಣರಾಯ, ತ.ರಾ.ಸು. ಬಸವರಾಜ ಕಟ್ಟೀಮನಿ, ನಿರಂಜನ, ಒಳ್ಳೆಯ ಕಥೆಗಳನ್ನು ರಚಿಸಿದ್ದಾರೆ. 'ಎರಡು ಮುಖ' ತ.ರಾ.ಸು. ಅವರ ಕಲಾವಂತಿಕೆಗೆ ಸಾಕ್ಷಿಯಾಗಿದೆ. ನಿರಂಜನರ 'ರಕ್ತ ಸರೋವರ' ಮತ್ತು 'ಸಂಧಿಕಾಲ' ಮೊದಲ ಕಥಾ ಸಂಕಲನಗಳು. ಇಲ್ಲಿನ ಕಥೆಗಳಲ್ಲಿ ಬಡವರಿಗೆ ಸಮಾಜದಲ್ಲಿ ಮೂಕರಾದವರಿಗೆ ಆಗುತ್ತಿರುವ ಕ್ರೂರ ಅನ್ಯಾಯವನ್ನು ಎತ್ತಿ ಹಿಡಿಯುವ ಕೆಲಸ ಮಾಡಿದ್ದಾರೆ.

ನವ್ಯ ಕಥಾ ಸಾಹಿತ್ಯದಲ್ಲಿ 'ಆವೇ ಮರೀಯಾ' ಬರೆದ ರಾಜಲಕ್ಷ್ಮೀ ಎನ್.ರಾವ್, 'ಸೆರಗಿನ ಕೆಂಡ' ಬರೆದ ರಾಮಚಂದ್ರ ಶರ್ಮ, 'ನಲ್ಲಿಯಲ್ಲಿ ನೀರು ಬಂದಿತು'. ಬರೆದ ಕೆ.ಸದಾಶಿವ ಅವರು ಕನ್ನಡದಲ್ಲಿ ನವ್ಯ ಕಥೆಯ ಆದ್ಯ ಪ್ರವರ್ತಕರು ಎಂದು ಹೇಳಬಹುದು. ಹಾಗೆಯೇ ಅನಂತ ಮೂರ್ತಿಯವರ 'ಪ್ರಕೃತಿ' ಎಂಬುದು ಪ್ರಸಿದ್ಧ ಕಥೆ. 'ನವಿಲುಗಳು', 'ಪ್ರಶ್ನೆ', 'ಖೋಜರಾಜ', 'ಕ್ಲಿಪ್‌ಜಾಯಿಂಟ್', 'ಕಾರ್ತೀಕ', 'ಘಟಶ್ರಾದ್ಧ' ಮುಂತಾದ ಕಥೆಗಳನ್ನು ಬರೆದಿದ್ದಾರೆ. ಲಂಕೇಶರು ಹಲವು ಸಾಹಿತ್ಯ ಪ್ರಕಾರವನ್ನು ಬಳಸಿದ್ದರೂ ಅವರಿಗೆ ಸಾಹಿತ್ಯದಲ್ಲಿ ಸಣ್ಣ ಕಥೆಯ ಮಾಧ್ಯಮ ಮುಖ್ಯವಾದದ್ದು ಎಂದು ತಿಳಿದು ಬರುತ್ತದೆ. 'ರೊಟ್ಟಿ' ಕಥೆಯಲ್ಲಿ ಊರಿಗೆ ಹೋಗಲು ಬಂದ ಹೆಂಗಸೊಬ್ಬಳ ಬಳಿ ಒಬ್ಬ ನಿಂತಿದ್ದಾನೆ. "ಜ್ವರದಿಂದ ಸೋತು ಹೋಗಿದ್ದ ಮುಖ ಕಣ್ಣುಗಳ ಸುತ್ತ ದೊಡ್ಡ ಕಂದಕಗಳು, ಲೆಕ್ಕವಿಲ್ಲದಷ್ಟು ಗೆರೆಗಳು, ಮುಖದ ತುಂಬ ಕೋಪ, ನೋವು" ಕ್ರಮೇಣ ಅವನ ಕಣ್ಣಲ್ಲಿದ್ದುದು ಜ್ವರವಲ್ಲ, ಬೇಸರವಲ್ಲ, ಹಸಿವೆಯೆಂದು ತಿಳಿಯುತ್ತದೆ. ಹಾಗೆಯೇ 'ಕಲ್ಲು ಕರಗುವ ಸಮಯ' ಮತ್ತು ಇತರ ಕಥೆಗಳ ಸಂಕಲನದ ಕಥೆಗಳು ಹಿಂದಿನ ಕಥೆಗಳಿಗಿಂತ ತೀರ ಭಿನ್ನ ಎನ್ನುವುದನ್ನು ಕಥೆಗಾರರು ಗುರುತಿಸಿದ್ದಾರೆ. ಶಾಂತಿನಾಥ ದೇಸಾಯಿಯವರು ನವ್ಯ ಕಾಲಘಟ್ಟದಲ್ಲಿ ಪ್ರಮುಖರಾಗಿ ಕಾಣಿಸಿಕೊಳ್ಳುತ್ತಾರೆ. 'ಕ್ಷಿತಿಜ' ಕಥಾ ಸಂಕಲನ ಇವರ ಕಥಾ ಸಾಹಿತ್ಯದಲ್ಲಿ ಮುಖ್ಯವಾದುದ್ದು. ಒಂದೆರಡು ಸಂಕಲನಗಳನ್ನು ಹೊರ ತಂದಿದ್ದರೂ ಕಥೆಯ ಮಾಧ್ಯಮವನ್ನು ಸಮರ್ಥವಾಗಿ ಬಳಸಿಕೊಂಡಿರುವ ನವ್ಯ ಕಥೆಗಾರರೆಂದು ಗುರುತಿಸಬಹುದು. ಗಿರಡ್ಡಿ ಗೋವಿಂದರಾಜರ 'ಆ ಮುಖಾ ಈ ಮುಖಾ' ಐದು ಕಥೆಗಳನ್ನು ಒಳಗೊಂಡ ಪ್ರಮುಖ ಕಥಾ ಸಂಕಲನವಾಗಿದೆ.

'ನಲ್ಲಿಯಲ್ಲಿ ನೀರು ಬಂದಿತು' ಕಥೆಯಲ್ಲಿ ನವ್ಯದ ದಾರಿಯನ್ನು ಸೂಚಿಸಿದ ಕೆ.ಸದಾಶಿವ ಅವರು 'ಅಪರಿಚಿತರು' ಎಂಬ ಒಳ್ಳೆಯ ಸಂಗ್ರಹವನ್ನು ಪ್ರಕಟಿಸಿದರು. ಸಂಕೇತಗಳನ್ನು ಬಳಿಸಿಕೊಂಡು ಸ್ಪಷ್ಟವಾದ, ಸರಳತೆಯಿಂದ ಕೂಡಿದ ಕಥೆಗಳನ್ನು ರಚಿಸಿದ್ದಾರೆ. ವೀಣಾ ಎಲ್ಬುರ್ಗಿಯವರು 'ಮುಳ್ಳುಗಳು' ಮತ್ತು 'ಕೊನೆಯ ದಾರಿ' ಕಥಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ತಮ್ಮ ಕಥೆಗಳಲ್ಲಿ ಹೊರ ಜಗತ್ತನ್ನು ಪಾತ್ರಗಳ

ಮನಸ್ಸಿನಿಂದ ನೋಡುವ ಪ್ರಯತ್ನವನ್ನು ಮಾಡಿದ್ದಾರೆ. 'ಮಳೆ ಬಂದಾಗ' ಕಥೆಯಲ್ಲಿ ಒಬ್ಬ ಯುವತಿ ಚಿತ್ರ ಬರೆಯಲು ಹೊರಟಿದ್ದಾಳೆ. ಕಥೆಯಲ್ಲಿ ನೇರವಾಗಿ ಕಾಲಿಡದ ಅಪರಿಚಿತ, ಅವಳ ಮನಸ್ಸಿನಲ್ಲಿ ಹೇಗೆ ನೆಲೆಸಿದ್ದಾನೆ ಎಂಬುದು ಅನಾವರಣಗೊಂಡಿದೆ. ಹಾಗೆಯೇ ಇವರ ಕಥೆಗಳಲ್ಲಿ ಭರವಸೆ ಎಂಬುದು ಎದ್ದು ಕಾಣುತ್ತದೆ.

ನವ್ಯ-ನವ್ಯೋತ್ತರ ಎಂದು ಗೆರೆ ಎಳೆಯುವುದು ಎಷ್ಟು ಕಷ್ಟ ಎಂಬುದು ಸಣ್ಣ ಕಥೆಯ ಕ್ಷೇತ್ರದಲ್ಲಿ ಸ್ಪಷ್ಟವಾಗುತ್ತದೆ. ಅಥವಾ ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನವ್ಯ ಕಥಾ ಸಾಹಿತ್ಯದ ಕಾಲದಲ್ಲಿ ನವ್ಯದ ಮನೋಧರ್ಮವನ್ನು ಪ್ರಕಟಿಸಿದರೂ, ಕಥೆಯನ್ನು ವ್ಯಕ್ತಿತ್ವದ ರಿಂಗಣದಾಚೆ ಜಗ್ಗುತ್ತಿದ್ದ ಕಥೆಗಾರರು ಬರೆದರು. ಪೂರ್ಣಚಂದ್ರತೇಜಸ್ವಿ ಬರೆದಿರುವುದು ಕಡಿಮೆ, ಆದರೆ ಅವರ ಎರಡು ಸಂಕಲನಗಳು ಗಮನಾರ್ಹವಾದವು. 'ಹುಲಿಯೂರಿನ ಸರಹದ್ದು' ಕಥೆಯಿಂದ ಹೆಸರು ಗಳಿಸಿದ ಅವರು 'ಅಬಚೂರಿನ ಪೋಸ್ಟಾಫೀಸು' ಸಂಕಲನದಲ್ಲಿಯೂ ಉತ್ತಮವಾದ ಕಥೆಗಳನ್ನು ಕೊಟ್ಟಿದ್ದಾರೆ. ಅವರ ಕಥೆಗಳ ಪಾತ್ರಗಳನ್ನು ಸಮಾಜದ ಆವರಣದಲ್ಲಿ ಕಾಣಬಹುದು. ಬೆಸಗರಹಳ್ಳಿ ರಾಮಣ್ಣ ಅವರ 'ಗರ್ಜನೆ' ಸಂಕಲನದ ಮೊದಲನೆ ಕಥೆ 'ಜೀತ' ಜೀತಪದ್ಧತಿಯ ಕ್ರೂರತೆಯನ್ನು ಎತ್ತಿ ತೋರುತ್ತದೆ. ದೇವನೂರು ಮಹಾದೇವರ 'ದ್ಯಾವನೂರು' ಆಡುಮಾತಿನಲ್ಲೇ ಬರೆದ ಕಥೆಗಳನ್ನೊಳಗೊಂಡಿದೆ. 'ಮಬ್ಬು ಜಾರಿದ ಕಣಿವೆಗಳಲ್ಲಿ,' 'ಕಾಡು ಗಿಡಗಳು' ಕಥೆಗಳನ್ನು ಬರೆದ ಜೀ.ಶಂ.ಪ ಪ್ರಗತಿಶೀಲ ಸಾಹಿತ್ಯದ ಕೆಲವು ಕೃತಿಗಳಲ್ಲಿ ಕಂಡ ಜಾನಪದ ಸತ್ವವನ್ನು ನೆನಪಿಗೆ ತರುತ್ತಾರೆ.

ಸಣ್ಣ ಕಥೆಗಳಲ್ಲಿ ಹಾಸ್ಯದ ಕಥೆಗಳನ್ನು ಸಹ ಕೆಲವರು ರಚಿಸಿದ್ದಾರೆ. ಟೀಕೆ, ಆಕ್ಷೇಪಣೆಗಳಿಲ್ಲದೆ, ಮಮತೆಯ ತೇಳು ಲೇಪ ಇರುವ ಕಥೆಗಳನ್ನು ಶ್ರೀನಿವಾಸರು, ಆನಂದರು ಮತ್ತು ಅಶ್ವತ್ಥರು ಬರೆದರು. 'ರಂಗಪ್ಪನ ದೀಪಾವಳಿ', 'ರಂಗಪ್ಪನ ಕೋರ್ಟ್‌ಷಿಪ್' ಶ್ರೀನಿವಾಸರ ತಿಳಿಹಾಸ್ಯದ ಕಥೆಗಳಾಗಿವೆ. ಕೃಷ್ಣಶಾಸ್ತ್ರಿಗಳ 'ಅಗ್ಗದ ಮದುವೆ' ಯಲ್ಲಿ ವಿಷಾದದ ಅಂಚಿನಲ್ಲಿ ನಿಂತ ಹಾಸ್ಯವನ್ನು ಕಾಣಬಹುದು. ಈ ಕ್ಷೇತ್ರಾದಲ್ಲಿ ಪಡುಕೋಣೆ ರಮಾನಂದರಾಯರು, ಸಿ.ಕೆ. ವೆಂಕಟರಾಮಯ್ಯ ಮುಂತಾದವರನ್ನು ಗುರುತಿಸ ಬಹುದಾಗಿದೆ. ವಿಡಂಬನೆಯಿಂದ ಕೂಡಿದ ಕಥೆಗಳನ್ನು ಸಹ ಕಾಣುತ್ತೇವೆ. ಮುಖ್ಯವಾಗಿ ಇದರಲ್ಲಿ ಹೆಸರುವಾಸಿಯಾದವರು 'ಬೀಚಿ'. ಇವರು ವಿಡಂಬನೆಯ ಅಲಗನ್ನು ತೀರ ಮೊನಚು ಮಾಡದೆ, ಸಾರ್ಥಕ ಸಣ್ಣ ಕಥೆಗಳನ್ನು ಹನಿಗವಿತೆಗಳನ್ನು ಬರೆದಿದ್ದಾರೆ. ಹಾಗೆಯೇ ಟಿ. ಸುನಂದಮ್ಮನವರು ಅನೇಕ ಹಾಸ್ಯದ ಕಥೆಗಳನ್ನು ರಚಿಸಿದ್ದಾರೆ.

ಸಣ್ಣ ಕಥೆಯ ಪ್ರಕಾರವನ್ನು ದಲಿತ-ಬಂಡಾಯ ಬರಹಗಾರರು ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾರೆ. ಈ ಮಾಧ್ಯಮ ಎಷ್ಟರ ಮಟ್ಟಿಗೆ ಅವರ ವಶವಾಗಿದೆ ಎಂದರೆ ದೇವನೂರು ಮಹಾದೇವ, ಬೊಳುವಾರು ಮಹಮದ್ ಕುಂಞ, ಮೊದಲಾದವರು ಪಂಥವನ್ನು ಮೀರಿ ಕನ್ನಡದ ಇಂದಿನ ಪ್ರಮುಖ ಕಥೆಗಾರರ ಪಂಕ್ತಿಯಲ್ಲಿ ನಿಂತರು. ಬೆಸಗರಹಳ್ಳಿ ರಾಮಣ್ಣ, ಕುಂ. ವೀರಭದ್ರಪ್ಪ, ಚನ್ನಣ್ಣ ವಾಲೀಕಾರ, ಬರಗೂರು ರಾಮಚಂದ್ರಪ್ಪ, ಅರವಿಂದ ಮಾಲಗತ್ತಿ, ಅಬ್ದುಲ್ ರಷೀದ್, ಕಾಳೇಗೌಡ ನಾಗವಾರ ಮೊದಲಾದವರ ರೂಪದಲ್ಲಿ ಬಂಡಾಯ ದಲಿತ ಪಂಥ ಎಷ್ಟು ಮಂದಿ ಒಳ್ಳೆಯ ಕಥೆಗಾರರನ್ನು ಕೊಟ್ಟಿದೆ ಎಂದು ತಿಳಿಯಬಹುದು. ಪ್ರಗತಿಶೀಲ ಸಾಹಿತಿಗಳಿಗೂ ಸಣ್ಣ ಕಥೆಯು ಮುಖ್ಯ ಮಾಧ್ಯಮವಾದರೂ ನಾಲ್ಕೈದು ಮಂದಿ ಒಳ್ಳೆಯ ಕಥೆಗಾರರು ಮಾತ್ರ ರೂಪುಗೊಂಡದ್ದೇಕೆ ಎಂದು ಅಚ್ಚರಿಯಾಗುತ್ತದೆ.

ಕನ್ನಡ ಸಣ್ಣ ಕಥೆಗಳ ಚರಿತ್ರೆಯಲ್ಲಿ ಮರೆಯದ ಸಂಗತಿಯೆಂದರೆ ಮಹಿಳೆಯರು ಕನ್ನಡ ಸಾಹಿತ್ಯಕ್ಕೆ ಮಾಡಿದ ತಮ್ಮ ಕಲಾಸೇವೆ. ಶ್ಯಾಮಲಾದೇವಿಯವರು 'ಹೂ ಬಿಸಿಲಲ್ಲಿ', ಗೌರಮ್ಮನವರ 'ಕಂಬನಿ'ಯಲ್ಲಿ

ವಿಶೇಷವಾದ ಕಲಾ ಕೌಶಲ್ಯವನ್ನು ತೋರಿಸಿದ್ದಾರೆ. ಇವರಿಬ್ಬರಲ್ಲದೆ, ಆರ್.ಕಲ್ಯಾಣಮ್ಮ, ವಾಸಂತಿದೇವಿ ಪಡುಕೋಣೆ ಮುಂತಾದ ಅನೇಕ ಕಥೆಗಾರ್ತಿಯರಿದ್ದಾರೆ. ಇವೆರೆಲ್ಲರ ಕಥಾ ಸಂಗ್ರಹವೊಂದು 'ರಂಗವಲ್ಲಿ' ಎಂಬ ಹೆಸರಿನಿಂದ ಹೊರಟಿದೆ. ಮಹಿಳೆಯರು ಕನ್ನಡ ಸಾಹಿತ್ಯದ ಕಥಾ ವಿಭಾಗದಲ್ಲಿ ತೋರಿಸಿದ ಆಸಕ್ತಿಯನ್ನು ಉಳಿದ ಯಾವ ವಿಭಾಗಗಳಲ್ಲಿಯೂ ತೋರಿಸಿಲ್ಲ. ಇದರಿಂದ ಕನ್ನಡ ಕಥಾ ಸಾಹಿತ್ಯಕ್ಕೆ ಅಪಾರವಾದ ಆನಂದವಿದೆ, ಗೌರವವಿದೆ. ಶ್ರೀನಿವಾಸರು 'ರಂಗವಲ್ಲಿ'ಗೆ ಮುನ್ನುಡಿಯನ್ನು ಬರೆಯುತ್ತಾ ಹೆಣ್ಣಿಗೆ ಉತ್ತಮವಾದ ಸ್ಥಾನವನ್ನು ಕೊಟ್ಟಿದ್ದಾರೆ. "ಹೆಣ್ಣಿನ ಬಾಳನ್ನು ಕುರಿತು ಹೆಣ್ಣಿನ ಅನುಭವದಿಂದ ಮಾತ್ರ ಹೇಳಬಹುದಾದ ಅಭಿಪ್ರಾಯವಿರುತ್ತದೆ. ಹೆಣ್ಣಿನ ದೃಷ್ಟಿಯ ಆ ಅಭಿಪ್ರಾಯವನ್ನು ಸಮಾಜವು ಗಣನಗೆ ತೆಗೆದುಕೊಳ್ಳಬೇಕಾಗುತ್ತದೆ. ಈ ಕಾರಣದಿಂದ ನಾನು ನಮ್ಮ ಸೋದರಿಯರು ಬರೆದಿರುವ ಕಥೆಗಳಿಗೆ ಸಾಹಿತ್ಯದಲ್ಲಿ ಬಹುಮುಖ್ಯವಾದ ಒಂದು ಸ್ಥಾನವನ್ನು ಕೊಡುತ್ತೇನೆ".[೨] ಎಂದು ಹೇಳಿದ್ದಾರೆ. ಮಹಿಳಾ ಕಥೆಗಾರರಲ್ಲಿ ವೈದೇಹಿಯವರನ್ನು ಮುಖ್ಯವಾಗಿ ಗುರುತಿಸಬಹುದು. ಅವರು ಬದುಕಿನ ಉತ್ಸಾಹ, ಲವಲವಿಕೆ, ಪುಟಿಯುವ ಅಥವಾ ಪುಟಿಯಲು ಅಡ್ಡವಾಗುವ ಶಕ್ತಿಗಳ ಕಥೆಗಳನ್ನು ಹೇಳುತ್ತಾರೆ. ನೇಮಿಚಂದ್ರ ಅವರ 'ಮತ್ತೆ ಬರೆದ ಕತೆಗಳು' ಸಂಕಲನದ ಸಂವೇದನಾ ಸೂಕ್ಷ್ಮತೆ, ಸಂಯಮ, ಮನಸ್ಸಿನ ವ್ಯಾಪಾರಗಳ ವಿಶ್ಲೇಷಣೆ ವಿಶಿಷ್ಟವಾದವು. ಕೆ.ಎಂ. ವಿಜಯಲಕ್ಷ್ಮೀ, ವೀಣಾ ಶಾಂತೇಶ್ವರ, ಮೊದಲಾದವರು ಸಣ್ಣ ಕಥೆಗೆ ಉತ್ತಮವಾದ ಕೊಡುಗೆ ನೀಡಿದ್ದಾರೆ.

"ಸಣ್ಣ ಕಥೆಯಲ್ಲಿ ಮಾತಿನ ಬಳಕೆ ಅತ್ಯಂತ ಮಿತವಾಗಿರಬೇಕು. ಇದು ಮಿಂಚು, ಒಮ್ಮೆ ಹೊಳೆದು ನಮ್ಮ ಸುತ್ತಮುತ್ತಲಿನ ಪ್ರದೇಶವನ್ನು ಕ್ಷಣ ಕಾಣಿಸಿ ಮರೆಯಾದಂತೆ. ಹೊಳೆಯುವ ನೀರಿನ ಹನಿ ಸೂರ್ಯನ ಕಲ್ಪನೆ ಮಾಡಿಕೊಡುವಂತೆ ಕಥೆ ಜೀವನವನ್ನು ಕಾಣುವ ಒಂದು ರೀತಿಯನ್ನೇ ಪ್ರತಿಬಿಂಬಿಸಬಲ್ಲದು ಎಂಬುದನ್ನು ಮಾಸ್ತಿ, ಕೃಷ್ಣಶಾಸ್ತ್ರಿಗಳು ಮೊದಲಾದವರು ತೋರಿಸಿದ್ದಾರೆ"[೩]

ಇತ್ತೀಚಿಗೆ ಕನ್ನಡದ ಸಣ್ಣಕಥೆಯಲ್ಲಿ ಹೊಸ ದನಿಗಳು ಕೇಳಿ ಬರುತ್ತಿವೆ. ಹಳೆಯ ರೀತಿಯನ್ನು ಬಿಟ್ಟು ಹೊಸದಾರಿಯನ್ನು ಹುಡುಕಲು ಅಲ್ಲಲ್ಲಿ ಪ್ರಯತ್ನಗಳು ನಡೆದಿವೆ. ಈ ಪ್ರಯತ್ನಗಳಿಗೆಲ್ಲ ಒಂದು ನಿಶ್ಚಿತ ಸ್ವರೂಪ ಇನ್ನೂ ಬರಬೇಕಾಗಿದೆ. ಹೊಸ ಸಾಹಿತ್ಯವನ್ನು ನಿರ್ಮಿಸಬೇಕೆಂಬ ಹಂಬಲವುಳ್ಳ ಕೆಲವು ಪ್ರಾಮಾಣಿಕವಾದ ಕಥೆಗಾರರು ಈ ದಿಕ್ಕಿನಲ್ಲಿ ದುಡಿಯುತ್ತಿದ್ದಾರೆ. ಶ್ರೀನಿವಾಸರು ಕಥೆಗಳನ್ನು ಬರೆಯಲು ಪ್ರಾರಂಭಿಸಿದಾಗಿನ ಕಾಲ ಹೊಸಗನ್ನಡ ಸಾಹಿತ್ಯಕ್ಕೆ ವಸಂತ ಕಾಲವಾಗಿತ್ತು. ಹಾಗೆಯೇ ಸಾಹಿತ್ಯದ ಸ್ಪರ್ಶವನ್ನು ಪಡೆಯದ ಜೀವನ ಮೂಕವಾಗಿತ್ತು. ಶ್ರೀನಿವಾಸರಂತ ಉತ್ತಮ ಪ್ರತಿಭೆಯ ಲೇಖಕರು ಆ ಒಂದು ಜೀವನಕ್ಕೆ ಅಭಿವ್ಯಕ್ತಿಯನ್ನು ತಂದುಕೊಟ್ಟಿದ್ದಾರೆ. ಅಂದಿನಿಂದ ಇಂದಿನವರೆಗೂ ಸಣ್ಣ ಕಥೆಗಳು ಹುಟ್ಟುತ್ತಲೇ ಇವೆ.

ಈ ನೆಲೆಯಲ್ಲಿ ಹೊಸ ತಲೆಮಾರಿನ ಅನೇಕ ಕಥೆಗಾರರು ಉತ್ತಮ ಕಥೆಗಳನ್ನು ನೀಡುತ್ತಿದ್ದಾರೆ. ಅವರಲ್ಲಿ ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರನ್ನು ಪ್ರಮುಖವಾಗಿ ಗುರುತಿಸಬಹುದು. ಗ್ರಾಮೀಣ ಪ್ರದೇಶದಲ್ಲಿ ಹುಟ್ಟಿ, ಬೆಳೆದು, ಕಂಡು ಕೇಳಿದ, ಸಂಗತಿಗಳನ್ನು ಅಲ್ಲಿನ ಜೀವನ ಚಿತ್ರಗಳನ್ನು ತಮ್ಮ ಕಥೆಗಳ ಮೂಲಕ ನೀಡಿದ್ದಾರೆ. ಪ್ರಸ್ತುತ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳು, ಅದರಲ್ಲೂ ಗ್ರಾಮೀಣ ಜೀವನದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ತಮ್ಮ ಕಥೆಗಳಲ್ಲಿ ಎತ್ತಿ ಹಿಡಿದಿದ್ದಾರೆ. ಇದಲ್ಲದೆ ಅನೇಕ ಲೇಖನಗಳು, ಕವನಸಂಕಲನ, ನೀಳ್ಗತೆ , ಶಿಶುಪ್ರಾಸಗಳು, ಮಕ್ಕಳ ಕಥೆಗಳು, ಮಕ್ಕಳ ಕವಿತೆಗಳು ಮುಂತಾದ ಕ್ಷೇತ್ರಾದಲ್ಲಿ ಸಾಹಿತ್ಯ ಕೃಷಿ ನಡೆಸುತ್ತಿದ್ದಾರೆ.

ಅಡಿ ಟಿಪ್ಪಣಿಗಳು

೧. ಉದ್ಧೃತ– ವರದರಾಜ ಹುಯಿಲಗೋಳ–ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆಯ ಸ್ಥಾನ:
ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಪುಟ ೨೩, ಪ್ರಕಟಣೆ–ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨. ಉದ್ಧೃತ– ವರದರಾಜ ಹುಯಿಲಗೋಳ–ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆಯ ಸ್ಥಾನ:
ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ, ಪುಟ ೨೫, ಪ್ರಕಟಣೆ–ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩. ಎಲ್.ಎಸ್.ಶೇಷಗಿರಿರಾವ್, ಹೊಸಗನ್ನಡ ಸಾಹಿತ್ಯ ಚರಿತ್ರೆ:
ಅಂಕಿತ ಪ್ರಕಾಶನ ಬೆಂಗಳೂರು. ಪುಟ.೧೮೫

ಅಧ್ಯಾಯ-೩
ಬದುಕು ಬರಹ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರನ್ನು ಹೊಸ ತಲೆಮಾರಿನ ಕಥೆಗಾರರಲ್ಲಿ ಗುರುತಿಸಬಹುದಾಗಿದೆ. ಯಾವುದೇ ಪಂಥ ಅಥವಾ ಘಟ್ಟಕ್ಕೂ ಸೀಮಿತಗೊಳ್ಳದೆ, ಹಳ್ಳಿ ಬದುಕಿನಲ್ಲಿ ಬದುಕುತ್ತಿರುವ ಇವರು ತಾವು ಕಂಡು ಕೇಳಿದ ಹಲವಾರು ಸಂಗತಿಗಳನ್ನು ತಮ್ಮ ಕಥೆಗಳಲ್ಲಿ ಚಿತ್ರಿಸಿದ್ದಾರೆ. ಕಥೆ, ಕವನ, ನೀಳ್ಗತೆ, ಮಕ್ಕಳ ಸಾಹಿತ್ಯ, ಶಿಶುಪ್ರಾಸ ಮುಂತಾದ ಪ್ರಕಾರಗಳಲ್ಲಿ ಸಾಹಿತ್ಯ ರಚಿಸಿದ್ದಾರೆ.

ಚನ್ನಪಟ್ಟಣ ತಾಲ್ಲೂಕಿನ ಬೊಮ್ಮನಾಯಕನಹಳ್ಳಿ ಶ್ರೀ ಚಿಕ್ಕತಿಮ್ಮೇಗೌಡ ಮತ್ತು ರಂಗಮ್ಮ ಅವರ ನಾಲ್ಕನೇ ಪುತ್ರರಾಗಿ ೪-೫-೧೯೫೫ ರಲ್ಲಿ ಜನಿಸಿದರು. ಐದು ಜನ ಸಹೋದರರು ಮತ್ತು ಇಬ್ಬರು ಸಹೋದರಿಯರ ಜೊತೆ ಹುಟ್ಟಿ ಬೆಳೆದ ಇವರು ಪ್ರಾಥಮಿಕ ಶಿಕ್ಷಣವನ್ನು ಹುಟ್ಟೂರಿನಲ್ಲಿಯೇ ಮುಗಿಸಿದರು. ಮಾಧ್ಯಮಿಕ ಶಿಕ್ಷಣವನ್ನು ಕೆಸ್ತೂರಿನ ಸರ್ಕಾರಿ ಶಾಲೆಯಲ್ಲಿ, ಪದವಿ ಪೂರ್ವ ಶಿಕ್ಷಣವನ್ನು ಮದ್ದೂರಿನ ಅರ್ಜುನಪುರಿ ಕಾಲೇಜಿನಲ್ಲಿ, ಪದವಿ ವ್ಯಾಸಂಗವನ್ನು ಭಾರತಿ ಕಾಲೇಜಿನಲ್ಲಿ ಪಡೆದರು. ವಿದ್ಯಾರ್ಥಿ ದಿಶೆಯಲ್ಲಿಯೇ ಸಾಹಿತ್ಯದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದರು. ಕಥೆ, ಕವನ, ಚುಟುಕು, ಲೇಖನಗಳನ್ನು ಬರೆಯುವ ಹವ್ಯಾಸವನ್ನು ರೂಢಿಸಿಕೊಂಡಿದ್ದರು. ೪-೫-೧೯೮೨ ರಲ್ಲಿ ಕೃಷ್ಣಪ್ಪ ಅವರು ಶಾಂತ ಎಂಬುವರನ್ನು ವಿವಾಹವಾಗಿ ಪುರುಷೋತ್ತಮ, ಪೂಜಾ, ಪಾರ್ಥಸಾರಥಿ ಎಂಬ ಮಕ್ಕಳೊಂದಿಗೆ ಜೀವನ ನಡೆಸುತ್ತಿದ್ದು, ಇಂದಿಗೂ ಸಾಹಿತ್ಯ ರಚನೆಯಲ್ಲಿ ತೊಡಗಿದ್ದಾರೆ.

ಕೃಷ್ಣಪ್ಪ ಅವರ ಸಾಹಿತ್ಯ ರಚನೆಗೆ ಮೂಲ ಪ್ರೇರಣೆ ಅವರೇ ಹೇಳುವಂತೆ, ಅವರ ತಂದೆ ಚಿಕ್ಕತಿಮ್ಮೇಗೌಡರು. ಅವರಿಗೆ ಪುನರ್ ಜನ್ಮದ ಮೇಲೆ ನಂಬಿಕೆಯಿತ್ತು. ಅವರು ಯಾವಾಗಲೂ ರಾಮಾಯಣ, ಮಹಾಭಾರತ, ಶಿವಲೀಲಾಮೃತದ ಕಥೆಗಳ ಬಗ್ಗೆ ಹೇಳುತ್ತಿದ್ದರು. ಭಕ್ತಿ ಪಂಥದಲ್ಲೂ ಅವರಿಗೆ ನಂಬಿಕೆಯಿತ್ತು. ಅವರು ಶಂಕರಚಾರ್ಯರ ಭಕ್ತರಾಗಿದ್ದರು. ಜೊತೆಗೆ ಗುರುದೀಕ್ಷೆ ತೆಗೆದುಕೊಂಡಿದ್ದರು. ಅವರ ಬಾಯಲ್ಲಿ ಯಾವಾಗಲೂ ಭಕ್ತರ ಕಥೆಗಳು ಯಥೇಚ್ಚವಾಗಿ ಬರುತ್ತಿದ್ದವು. ಹಲವಾರು ಯಾತ್ರಾ ಸ್ಥಳಗಳ ಬಗ್ಗೆ ನೋಡಿ ಓದಿ ತಿಳಿದಿದ್ದರು. ಹಾಗಾಗಿ ಅಲ್ಲಿಯ ಕಥೆಗಳನ್ನು ಭಕ್ತಿ ಪೂರ್ವಕವಾಗಿ ಹೇಳುತ್ತಿದ್ದರು. ಶಿವಲೀಲಾಮೃತದ ಕಥೆಗಳು, ಪಂಡರಾಪುರದ ಮಹಾತ್ಮೆ, ತಿರುಪತಿದರ್ಶನದ ಮಹಾತ್ಮೆಗಳನ್ನು ಹೇಳುವಾಗ ತನ್ಮಯರಾಗುತ್ತಿದ್ದರು. ಅವರಿಗೆ ದೇವರಲ್ಲಿ ಅಪಾರವಾದ ನಂಬಿಕೆಯಿತ್ತು. ಅವರು ಹೇಳುವಾಗ ನಾನು ಎಷ್ಟೊಂದು ತನ್ಮಯನಾಗುತ್ತಿದ್ದೆನೆಂದರೆ, ಅಲ್ಲಿಯ ಪಾತ್ರಗಳು ನನಗೆ ಗೊತ್ತಿಲ್ಲದ ಹಾಗೆ ನನ್ನ ಸ್ಮೃತಿಪಟಲದ ಮೇಲೆ ಅಚ್ಚೊತ್ತುತ್ತಿದ್ದವು. ಅಷ್ಟೇ ಅಲ್ಲದೆ ಪೌರಾಣಿಕ ಸಿನಿಮಾಗಳಿಗೂ ಕರೆದೊಯ್ಯುತ್ತಿದ್ದರು. ಸತ್ಯ ಹರಿಶ್ಚಂದ್ರನಂತೆ ಬಾಳಬೇಕೆನ್ನುತ್ತಿದ್ದರು. ಆದರೂ ಅವರನ್ನು ಅತಿ ಹೆಚ್ಚು ಆಕರ್ಷಿಸಿದ ಸಿನಿಮಾ ಎಂದರೆ 'ಸಂತ ತುಕಾರಾಮ' ಆ ಪಾತ್ರದಲ್ಲಿ ತಲ್ಲೀನರಾಗುತ್ತಿದ್ದರು. ಮನೆಯಲ್ಲಿ ಬಡತನವಿದ್ದರೂ ದೇಹಿ ಎಂದು ಬಂದವರಿಗೆ, ಅನ್ನ ಬಟ್ಟೆಗಳನ್ನು ಇಲ್ಲವೆ ಹಣವನ್ನು ದಾನ ಮಾಡುತ್ತಿದ್ದರು. ಅವರೇ ನಾನು ಕತೆಗಾರನಾಗಲು ಮೂಲ ಪ್ರೇರಣೆ. ತಾಯಿ ರಂಗಮ್ಮ ಚಿಕ್ಕಿಂದಿನಲ್ಲೇ ಹೊಲದಲ್ಲಿ ಕೆಲಸ ಮಾಡುವಾಗ ಕಾಲಹರಣ ಮಾಡದಂತೆ ಕಥೆ ಹೇಳುತ್ತಿದ್ದರು.

ಮಾಧ್ಯಮಿಕ ಶಾಲೆಗೆ ಸೇರಿದ ನಂತರ ಅಷ್ಟರಲ್ಲಾಗಲೇ ಕಥೆಗಳನ್ನು ಓದಿ ಅರ್ಥ ಮಾಡಿಕೊಳ್ಳುವಷ್ಟು ಜ್ಞಾನ ಪಡೆದಿದ್ದರು. ವಿಕ್ರಮ ಬೇತಾಳ, ರಾಮಾಯಣ, ಇನ್ನೂ ಹಲವಾರು ಕಥೆಗಳನ್ನು

ಓದಿ ಮುಗಿಸಿದ್ದರು. ಅ.ನ. ಕೃಷ್ಣರಾಯರ ಕಾದಂಬರಿ, ತ್ರಿವೇಣಿಯವರ ಕಾದಂಬರಿ ಮತ್ತು ಎನ್.ನರಸಿಂಹಯ್ಯ ಅವರ ಪತ್ತೇದಾರಿ ಕಾದಂಬರಿಗಳನ್ನು ಓದುತ್ತಿದ್ದರು. ಮದ್ದೂರಿನಲ್ಲಿ ಪದವಿ ಪೂರ್ವ ಕಾಲೇಜಿಗೆ ಸೇರಿದಾಗ ಅಲ್ಲಿನ ಕನ್ನಡ ಉಪನ್ಯಾಸಕರಾದ ಸಿ.ಪಿ.ನಾಗರಾಜು ಅವರ ಪರಿಚಯದಿಂದ ಜೀವನದಲ್ಲಿ ಯಾವ ರೀತಿ ಬದುಕಬೇಕೆಂದು ತಿಳಿದುಕೊಂಡರು. ಅದರಿಂದ ತಿಳಿದ ಪಾಠ ಇವರ ಮುಂದಿನ ದಿನಗಳಿಗೆ ಹೆಚ್ಚು ಪ್ರೇರಕವಾಯಿತು.

ದ್ವಿತೀಯ ಪಿಯುಸಿಯಲ್ಲಿ ಓದುತ್ತಿದ್ದಾಗ, ಸದಾಶಿವ ಎಣ್ಣೆಹೊಳೆ ಯವರು ಉಪನ್ಯಾಸಕರಾಗಿದ್ದರು. ಅಷ್ಟೊತ್ತಿಗಾಗಲೇ ಅವರು ಕೃತಿ ರಚಿಸಿ ವಿಮರ್ಶಕರಾಗಿದ್ದರಿಂದ, ಅವರ ಒಡನಾಟದಿಂದ ಕಥೆ ಬರೆಯಬೇಕೆಂಬ ಹಂಬಲ ಕೃಷ್ಣಪ್ಪ ಅವರಿಗೆ ಹೆಚ್ಚಾಯಿತು. ಹಾಗೆಯೇ ಭಾರತಿ ಕಾಲೇಜಿನ ಕನ್ನಡ ಉಪನ್ಯಾಸಕರಾದ ಜಿವಿಡಿ ಎಂದೇ ಹೆಸರಾದ ಜಿ.ವಿ. ದಾಸೇಗೌಡರಿಂದ ಮತ್ತಷ್ಟು ಅನುಭವ ಪಡೆದರು. ತಂದೆ ಕೊಡುತ್ತಿದ್ದ ಹತ್ತು ರೂಪಾಯಿಯಿಂದ ಮೈಸೂರಿಗೆ ಹೋಗಿ ಬರುತ್ತಿದ್ದರು. ಸದಾಶಿವ ಎಣ್ಣೆಹೊಳೆ ಜೊತೆಗಿನ ಬಾಂಧವ್ಯ ಒಡನಾಟ ಹೆಚ್ಚಾಗಿ, ನೆಲಮನೆ ಪ್ರಕಾಶನದಲ್ಲಿ ಕೆಲಸ ಮಾಡುತ್ತಿದ್ದವನ ಪರಿಚಯದಿಂದ ಅವನ ಬಳಿ ಎಪ್ಪತ್ತರ ದಶಕದ ಬಂಡಾಯ ಸಾಹಿತ್ಯದ ಪುಸ್ತಕಗಳನ್ನು ಪಡೆದು ಓದುತ್ತಿದ್ದರು. ಪ್ರಸಾರಾಂಗದಲ್ಲಿ ಸಹಾಯಕ, ಸಂಶೋಧಕರಾಗಿ ಕೆಲಸ ಮಾಡುತ್ತಿದ್ದ ಸದಾಶಿವ ಅವರಿಂದ ಪರಿಚಯವಾದ ಹಿರಿಯ ಸಾಹಿತಿಗಳಾದ ಪ್ರಭುಶಂಕರ, ಜೀಶಂಪ, ರಾಗೌ, ಪಿ.ಕೆ.ರಾಜಶೇಖರ್ ಮೊದಲಾದವರ ಪರಿಚಯದಿಂದ ಕೃಷ್ಣಪ್ಪ ಅವರಲ್ಲಿ ಓದುವ ಬರೆಯುವ ಹಂಬಲ ಹೆಚ್ಚಾಗ ತೊಡಗಿತು.

ಕೃಷ್ಣಪ್ಪ ಅವರು ಪದವಿ ಹಂತದಲ್ಲಿ ಮೂರು ಕಥೆಗಳನ್ನು ಬರೆದು ಅವು 'ಜನಪ್ರಗತಿಯಲ್ಲಿ' ಪ್ರಕಟವಾಗಿದ್ದವು. ಅವುಗಳನ್ನು ಓದಿದ ತಮ್ಮ ಗುರುಗಳಾದ ಸದಾಶಿವ ಎಣ್ಣೆ ಹೊಳೆಯವರು ಚೆನ್ನಾಗಿ ಬರೆಯುತ್ತೀಯೆ ಇದನ್ನು ಮುಂದುವರಿಸು ಎಂದಾಗ ಮೂಡಿ ಬಂದುದೇ 'ಮಣ್ಣಿನ ಬದುಕು' ಕಥಾ ಸಂಕಲನ. ಇದು ೧೯೭೮ರಲ್ಲಿ ಪ್ರಕಟಗೊಂಡಿತು. ಸಿ.ಪಿ.ಕೆ ಅವರು ನಿಮ್ಮ ಭವಿಷ್ಯ ಉಜ್ವಲವಾಗಿದೆ. ಮುಂದುವರಿಸಿ ಹಳ್ಳಿಗಾಡಿನ ಸೊಗಡು ನಿಮ್ಮ ಕಥೆಗಳಲ್ಲಿ ಎದ್ದು ಕಾಣುತ್ತಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದೇ ವರ್ಷದಲ್ಲಿ 'ರಣಹದ್ದುಗಳು' ಪ್ರಕಟಗೊಂಡಿತು. ಹಾಗೆಯೇ ೧೯೮೧ರಲ್ಲಿ 'ಹೊಸೂರಿನ ಹಳೆಯ ತಲೆಗಳು', (ನೀಳ್ಗತೆ) ನಂತರ ೨೦೦೪ರಲ್ಲಿ 'ಒಂದು ಆತ್ಮಹತ್ಯೆಯ ಕತೆ' ಮತ್ತು ನೋವಂಚಿಕೊಂಡವರು (ಕವನಸಂಕಲನ) ಪ್ರಕಟಗೊಂಡಿತು.

ಕೃಷ್ಣಪ್ಪ ಅವರ ಕಥೆಗಳನ್ನು ಓದಿದ ಹೆಚ್.ಎಲ್.ಕೇಶವ ಮೂರ್ತಿ ಯವರು ರೈತ ಸತ್ತ ನಂತರ ರೈತನ ಹೆಂಡತಿ ಮಕ್ಕಳ ಗತಿಯೇನೆಂದು ಚಿಂತಿಸುತ್ತಿದ್ದೆ. ಆದರೆ ಈ ರೀತಿ ಸಂಸಾರವೇ ನಿರ್ನಾಮವಾಗುತ್ತದೆಂದು ಗೊತ್ತಿರಲಿಲ್ಲವೆಂದರು. ಹೆಚ್.ಎಸ್.ಪಾರ್ವತಿ ಯವರು ಪ್ರೇಮ ತ್ರಿಕೋನದ ಕತೆಗಳಿಲ್ಲದ ಹಳ್ಳಿಯ ಜನ ಜೀವನಕ್ಕೆ ಒತ್ತುಕೊಟ್ಟಿದ್ದಾರೆ ಎಂದಿದ್ದಾರೆ. ಡಾ.ಎಲ್.ಎನ್. ಮುಕುಂದರಾಜ್ ಅವರು ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರನ್ನು ರೈತ ಕವಿ ಎಂದಿದ್ದಾರೆ. ಡಾ॥ ಬಂಜಗೆರೆ ಜಯಪ್ರಕಾಶ ಅವರು ಒಬ್ಬ ವಿಶಿಷ್ಠ ಕವಿ ಕಥೆಗಾರ ಎಂದು ಅಭಿಪ್ರಾಯ ಪಟ್ಟಿದ್ದಾರೆ.

"೧೯೭೭ ರಿಂದ ೨೦೧೦ನೇ ಇಸವಿಯವರೆಗೆ ಬರೆದ ಎಲ್ಲಾ ಕಥೆಗಳು ಒಂದೇ ಕಡೆ 'ಬಯಲು ಸೀಮೆಯ ಕತೆಗಳು' ಎಂಬ ಹೆಸರಲ್ಲಿ ಸೇರಿಕೊಂಡಿವೆ. ಎಲ್ಲೋ ಬಿ.ಎ.ವರೆಗೆ ಓದಿ ಬೂದಿ ಮುಕ್ಕಿ ಹೊಲ ಕೆರೆಯುತ್ತಿದ್ದ ಹಳ್ಳಿ ಹೈದನೊಬ್ಬ ಕಥೆಗಾರನಾಗಿ, ಕವಿಯಾಗಿ, ಹೊರ ಹೊಮ್ಮಿದುದು ಬಹುಶಃ ಅವರ ತಂದೆ ತಾಯಿಗಾಗಲಿ, ಅಣ್ಣ ತಮ್ಮಂದಿರಿಗಾಗಲಿ, ಅಕ್ಕಂದಿರಿಗಾಗಲಿ ಗೊತ್ತಿಲ್ಲದ ಸಂಗತಿಯಾಗಿತ್ತು". ಇವರ

ಸಾಹಿತ್ಯದ ಮೇಲೆ ಕುವೆಂಪು, ಮಾಸ್ತಿ, ಬೆಸಗರಹಳ್ಳಿ ರಾಮಣ್ಣ, ರಾವ ಬಹದ್ದೂರ್, ಲಂಕೇಶ್, ಆಲನಹಳ್ಳಿ ಕೃಷ್ಣ ಅವರ ಕತೆಗಳ ಪ್ರಭಾವ ಆಗಿರುವುದನ್ನು ಕಾಣಬಹುದು.

ಕೃಷ್ಣಪ್ಪ ಅವರಿಗೆ ಸಂದ ಪ್ರಶಸ್ತಿ ಮತ್ತು ಗೌರವ ಸನ್ಮಾನಗಳು:

ಕೃಷ್ಣಪ್ಪ ಅವರಿಗೆ 'ಗಾಂಧಿಯ ನಾಡಲ್ಲಿ ಹುಟ್ಟಿದವರು' ಕೃತಿಗೆ ೨೦೦೬ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಪ್ರಶಸ್ತಿ ಲಭಿಸಿದೆ. ಮಳವಳ್ಳಿ ತಾಲ್ಲೋಕು 'ಧನಗೂರು ಮಠದ ಷಡಕ್ಷರಿ ಪ್ರಶಸ್ತಿ', ಮಂಡ್ಯ ಜಿಲ್ಲಾ ಚೈತನ್ಯ ಬಳಗದ ವತಿಯಿಂದ 'ಚೈತನ್ಯ ರತ್ನ ಪ್ರಶಸ್ತಿ (೨೦೦೯) ಮಂಡ್ಯ ನಗರ ತಾಲ್ಲೋಕು ಸಾಹಿತ್ಯ ಪರಿಷತ್ತುವತಿಯಿಂದ ಕಾವ್ಯ ಶ್ರೀ ಪ್ರಶಸ್ತಿ (೨೦೧೧), ವಿಶ್ವಮಾನವ ಟ್ರಸ್ಟ್ ರಾಮನಗರ, ಶ್ರೀ ವಿರಕ್ತ ಮಠದವತಿಯಿಂದ ವಿಶ್ವಮಾನವ ಶ್ರೀ ಪ್ರಶಸ್ತಿ ಲಭಿಸಿವೆ.

ಮತ್ತಿಕೆರೆಯಲ್ಲಿ ಹೋಬಳಿ ಸಾಹಿತ್ಯ ಸಮ್ಮೇಳನದಲ್ಲಿ ಸನ್ಮಾನ ೨೦೦೪ರಲ್ಲಿ, ಬೇವೂರು ಮಂಡ್ಯ ಗ್ರಾಮ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ, ರಾಮನಗರ ಜಿಲ್ಲೆ ೫೫ನೇ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಜಿಲ್ಲಾಧಿಕಾರಿಗಳಿಂದ ಸನ್ಮಾನ, ಮಂಡ್ಯ ತಾಲ್ಲೋಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಸನ್ಮಾನ ಚನ್ನಪಟ್ಟಣ ತಾಲ್ಲೋಕು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಹಾಗೂ ವಿಶ್ವಮಾನವ ಟ್ರಸ್ಟ್‌ರವರಿಂದ ಗೌರವಿಸಲ್ಪಟ್ಟಿದ್ದಾರೆ.

ಅಧ್ಯಾಯ-೪

ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರ ಕಥೆಗಳ ವಿಶ್ಲೇಷಣೆ

ಆಧುನಿಕ ಕನ್ನಡ ಸಾಹಿತ್ಯವು ಪಾಶ್ಚಾತ್ಯ ಮತ್ತು ದೇಶೀಯ ಪ್ರೇರಣೆ ಪ್ರಭಾವಗಳಿಗೆ ಒಳಗಾಗಿ ವಸ್ತು ವೈವಿಧ್ಯತೆಯನ್ನು ಪಡೆಯಿತ್ತು. ಸಣ್ಣಕಥೆಯ ಪ್ರಕಾರದಲ್ಲಿ ಗಮನಾರ್ಹವಾದ ಕೃಷಿ ನಡೆದು ಕವಿಗಳ ಮೆಚ್ಚುಗೆಗೆ ಪಾತ್ರವಾಯಿತು.ಪ್ರಾಚೀನ ಕಾಲದಿಂದಲೂ ಕಥೆ ಹೇಳುವ ಮತ್ತು ಕೇಳುವ ಎರಡು ಪದ್ಧತಿಗಳನ್ನು ಹಲವಾರು ಭಾಷೆಯಲ್ಲಿ ಕಾಣಲಾಗುತ್ತದೆ. ಮನುಷ್ಯನ ಉಗಮದೊಂದಿಗೆ ಸಣ್ಣ ಕಥೆಗಳು ಜನ್ಮವೆತ್ತಿ ಜೀವ ಸಂಕುಲಗಳ ಜೊತೆ ಜೊತೆಯಲ್ಲಿಯೇ ಕಥೆಗಳು ಬಂದಿರುವುದನ್ನು ಗುರುತಿಸಬಹುದು. ತಮ್ಮ ಅನುಭವದಿಂದ ತಾವು ಕಂಡು ಕೇಳಿದ ಸಂಗತಿಗಳನ್ನು, ಸಮಾಜದಲ್ಲಿ ಬದುಕುತ್ತಿರುವ ಮನುಷ್ಯನ ಜೀವನ ಚಿತ್ರಣಗಳನ್ನು ಸಾಹಿತ್ಯದಲ್ಲಿ ಬಿಂಬಿಸುವ ಕೆಲಸವಾದ್ದರಿಂದ ಈ ಪ್ರಕಾರ ಹುಟ್ಟಿಕೊಂಡಿತ್ತು. ಇದರಿಂದ ಕಥಾ ಸಾಹಿತಿಗಳು ಹುಟ್ಟಿಕೊಂಡರು ಎಂಬುವುದು ಗಮನಾರ್ಹವಾದ ಸಂಗತಿ. ಹಾಗೆಯೇ ಸಮಾಜ, ಪರಿಸರ, ವ್ಯಕ್ತಿ ಬದುಕಿನ ಏರಿಳಿತಗಳು, ಅನ್ಯಾಯ, ಕ್ರೌರ್ಯ ಅಸಹಾಯಕತೆ ಮುಂತಾದವು ಕಥೆಗಳಲ್ಲಿ ಕಾಣಿಸಿಕೊಂಡಿರುವುದನ್ನು ಗುರುತಿಸಬಹುದು.

ಕನ್ನಡದಲ್ಲಿ ಸಣ್ಣಕಥೆ ಮೊದಲ ಬಾರಿಗೆ ಪಂಜೆ ಅವರಿಂದ ರಚಿತವಾಗಿದೆ. ಆದರೆ ಅದಕ್ಕೆ ಒಂದು ಗಂಭೀರವಾದ ಸ್ವರೂಪವನ್ನು ತಂದು ಕೊಟ್ಟವರು ಶ್ರೀನಿವಾಸ ರು (ಮಾಸ್ತಿ). ಕುವೆಂಪು, ಕೆರೂರು ವಾಸುದೇವಾಚಾರ್ಯರು, ಎಂ.ಎನ್.ಕಾಮತರು, ಶಾಂತಿನಾಥದೇಸಾಯಿ, ಯು.ಆರ್. ಅನಂತಮೂರ್ತಿ, ಆನಂದ, ಕೆ.ಸದಾಶಿವ, ರಾಮಚಂದ್ರಶರ್ಮ, ಆಲನಹಳ್ಳಿ ಕೃಷ್ಣ, ಲಂಕೇಶ್ ಮುಂತಾದವರು ತಮ್ಮ ಕಥೆಗಳಲ್ಲಿ ಬದುಕಿನ ಚಿತ್ರಣ, ನೋವು-ಹತಾಶೆ, ಪ್ರೀತಿ, ಸ್ವಾರ್ಥ ಸಮಾಜ ಪರಿಸರವನ್ನು ವಸ್ತುವಾಗಿಸಿಕೊಂಡು ಕಥೆಗಳನ್ನು ರಚಿಸಿದ್ದಾರೆ.

ಹೊಸ ತಲೆಮಾರಿನ ಕಥೆಗಾರರಲ್ಲಿ ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರು ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡುವ ಕಥೆಗಳನ್ನು ರಚಿಸಿದ್ದಾರೆ. ಸಮಾಜದಲ್ಲಿ ಆಗುತ್ತಿರುವ ಬದಲಾವಣೆಯಿಂದ ಮುಂದೆ ಆಗುವ ಪರಿಣಾಮವನ್ನು ತಮ್ಮ ಕಥೆಯಲ್ಲಿ ನೀಡಿರುವುದು ಗಮನಾರ್ಹವಾದ ಸಂಗತಿಯಾಗುತ್ತದೆ. ಈ ಬಗೆಗಿನ ಕಥೆಗಳ ಸಂಖ್ಯೆ ಐವತ್ತಕ್ಕೂ ಹೆಚ್ಚು. ಆದ್ದರಿಂದ ಇವರ ಕಥೆಗಳನ್ನು ಸಾಮಾಜಿಕ ಚಿತ್ರಣ, ಕೌಟುಂಬಿಕ ಚಿತ್ರಣ, ಹೆಣ್ಣಿನ ಬದುಕು ಮತ್ತು ರೈತಾಪಿ ಬದುಕನ್ನು ಚಿತ್ರಿಸುವ ಕಥೆಗಳು ಎಂಬಂತೆ ವಿಭಾಗಿಸಿಕೊಂಡು ಅಧ್ಯಯನ ಮಾಡುವುದು ಹೆಚ್ಚು ಔಚಿತ್ಯವಾಗಿ ಕಾಣುತ್ತದೆ.

೪.೧ ಸಾಮಾಜಿಕ ಚಿತ್ರಣ

ಸಮಾಜದಲ್ಲಿ ಬದುಕು ನಡೆಸುತ್ತಿರುವ ಮನುಷ್ಯ ಅದಕ್ಕೆ ಕಂಟಕವಾಗದೆ ಆದರ್ಶವಾಗಿರಬೇಕು. ಸಮಾಜದಲ್ಲಿ ಧರ್ಮ, ದೇವರು, ಜಾತಿ, ನಂಬಿಕೆ, ರೂಢಿ, ಸಂಪ್ರದಾಯ, ಆಚಾರ ವಿಚಾರಗಳನ್ನು ತಲತಲಾಂತರದಿಂದಲ್ಲೂ ಕಾಣುತ್ತಿದ್ದೇವೆ. ಆದರೆ ಇಂದು ಸಮಾಜದಲ್ಲಿ ಬದಲಾವಣೆಯನ್ನು ಬಯಸುತ್ತಿರುವ ಮನುಷ್ಯ, ಎಲ್ಲವನ್ನು ಎಲ್ಲರನ್ನು ಕಡೆಗಣಿಸುತ್ತಿದ್ದಾನೆ. ಗ್ರಾಮೀಣ ಜೀವನದಲ್ಲಿ ಆಗುತ್ತಿರುವ ಬದಲಾವಣೆಯಿಂದ ಸಮಾಜಕ್ಕೆ ಒದುಗುವ ಕೆಡುಕು, ಅನ್ಯಾಯವನ್ನು ಲೇಖಕರು ಖಂಡಿಸಿದ್ದಾರೆ. ಮನುಷ್ಯ

ಪ್ರಯೋಜನಕ್ಕೆ ಬಾರದ ಎಲೆ, ಸೌದೆಯಾಗದೆ ಕಿಡಿಯಾಗುವ ಕಟ್ಟಿಗೆಯಾಗಬೇಕು. ಸಮಾಜದಲ್ಲಿ ಯಾವುದನ್ನೂ ನಿಕೃಷ್ಟವೆಂದು ಪರಿಗಣಿಸಬಾರದು ಎಂದಿದ್ದಾರೆ.

ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರು ತಮ್ಮ ಕಥೆಗಳಲ್ಲಿ ಗ್ರಾಮೀಣ ಪ್ರಪಂಚದ ನೋವು-ನಲಿವು, ಕಷ್ಟ-ಸುಖ, ಒಳಿತು-ಕೆಡುಕುಗಳ ಹಲವು ಮುಖಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ಗ್ರಾಮೀಣ ಸಮಾಜದಲ್ಲಿ ಬದುಕುತ್ತಿರುವ ಮನುಷ್ಯ ಆಧುನಿಕತೆಗೆ ಮಾರು ಹೋಗಿ ತಂದೆ ತಾಯಿಯ ಸಂಬಂಧಗಳ ಜೊತೆಗಿನ ಬಾಂಧವ್ಯ , ಪ್ರೀತಿ, ಆತ್ಮೀಯತೆಯನ್ನು ಕಳೆದುಕೊಳ್ಳುತ್ತಿರುವುದು ವಿಷಾದದ ಸಂಗತಿಯಾಗಿದೆ. ಸಾಹಿತ್ಯ ಮತ್ತು ಸಮಾಜದ ಸಂಬಂಧ ಅವಿನಾಭಾವವಾದುದು. ಸಾಮಾಜಿಕ ಅಂಶಗಳ ಅನಾವರಣವು ಎಲ್ಲಾ ಸಾಹಿತ್ಯದಲ್ಲೂ ಇರುತ್ತದೆ.

ಅಂತೆಯೇ ಗ್ರಾಮೀಣ ಪ್ರದೇಶದಲ್ಲೇ ಹುಟ್ಟಿ ಬೆಳೆದ ಕೃಷ್ಣಪ್ಪ ಅವರು ತಮ್ಮ ಕಥೆಗಳಲ್ಲೂ ಸಹ ಸಾಮಾಜಿಕ ಬದುಕನ್ನು ಪ್ರಧಾನವಾಗಿ ಚಿತ್ರಿಸಿದ್ದಾರೆ. ಗ್ರಾಮೀಣ ಸಮಾಜವನ್ನು ಸೂಕ್ಷ್ಮವಾಗಿ ಅವಲೋಕಿಸಿರುವ ಅವರು ಅಲ್ಲಿನ ಸಮಸ್ಯೆಗಳಾದ ಮೋಸ, ವಂಚನೆ, ಶೋಷಣೆ, ಆಚರಣೆ ಮುಂತಾದ ಅನೇಕ ಅಂಶಗಳನ್ನು ತಮ್ಮ ಕಥೆಗಳಲ್ಲಿ ಎತ್ತಿ ಹಿಡಿದಿದ್ದಾರೆ.

ಬದುಕನ್ನು ಹತ್ತಿರದಿಂದ ಕಂಡ ಅನುಭವವೇ ಕಥನವಾಗಿ ಬಂದಿರುವುದರಿಂದ ಇವೆಲ್ಲವೂ ವಾಸ್ತವವಾದಿ ನೆಲೆಗಟ್ಟಿನಲ್ಲಿ ನಿರೂಪಿತವಾಗಿವೆ ಎನ್ನಬಹುದಾಗಿದೆ. ಸಮಾಜಕ್ಕೆ ಎಷ್ಟು ಕೊಟ್ಟರು ಎನ್ನುವುದಕ್ಕಿಂತ ಏನು ಕೊಟ್ಟರು ಎಂಬಂತೆ ಇಂದಿನ ಯುವ ಪೀಳಿಗೆ ಸಮಾಜದಲ್ಲಿ ಆಧುನಿಕತೆಯನ್ನು ಬಯಸಿ ಬದಲಾವಣೆಯ ದಾರಿಯಲ್ಲಿ ಹೋಗುತ್ತಿರುವುದನ್ನು ಲೇಖಕರು ತಮ್ಮ ಕಥೆಗಳಲ್ಲಿ ತಿಳಿಸಿದ್ದಾರೆ. ಸಮಾಜ ಎಷ್ಟೇ ಮುಂದುವರಿದರೂ, ಗ್ರಾಮೀಣ ಜೀವನದಲ್ಲಿರುವ ಮೌಢ್ಯಗಳು, ಕಂದಾಚಾರ, ಕೆಳವರ್ಗದವರ ತುಳಿತ, ಹೆಣ್ಣಿನ ಶೋಷಣೆ, ಮುಂತಾದವನ್ನು ತಮ್ಮ ಕಥೆಗಳಲ್ಲಿ ಮನ ಮುಟ್ಟುವಂತೆ ಚಿತ್ರಿಸಿದ್ದಾರೆ. ಸಾಮಾಜಿಕವಾಗಿ ಗ್ರಾಮೀಣ ಜೀವನದಲ್ಲಿ ಕಾಣುವ ಅಂಶವೆಂದರೆ ಹಿಂದಿನ ತಲೆಮಾರಿನವರಿಗೂ, ಇಂದಿನ ತಲೆಮಾರಿನವರಿಗೂ ಇರುವ ವ್ಯತ್ಯಾಸ. ಯುವಕರು ಹಿರಿಯರನ್ನು ನಿರ್ಲಕ್ಷಿಸುತ್ತಿರುವುದು, ಮನುಷ್ಯ ಮತ್ತು ಭೂಮಿಯ ಸಂಬಂಧ, ಕೆಳವರ್ಗದವರ ಶೋಷಣೆ, ಸ್ವಾರ್ಥ ಅಸೂಯೆಯಿಂದ ಕೂಡಿದ ಮೇಲ್ವರ್ಗದವರು ಮುಗ್ಧ ರೈತನ ಏಳಿಗೆಯನ್ನು ಸಹಿಸದೆ ತುಳಿಯುವುದು, ಹಿಂದಿನಿಂದಲೂ ಆಚರಣೆಯಲ್ಲಿರುವ ಜಾತಿಪದ್ಧತಿ, ಕೆಳವರ್ಗದವರ ನೋವು-ಹತಾಶೆ, ಪ್ರಸ್ತುತ ಗ್ರಾಮೀಣ ಪ್ರದೇಶದಲ್ಲಿ ಆಗುತ್ತಿರುವ ಬದಲಾವಣೆಗಳು ಆದರಿಂದಾಗುತ್ತಿರುವ ಪರಿಣಾಮಗಳು, ಸಮಾಜ ಎಷ್ಟೇ ಬದಲಾವಣೆ ಕಂಡರೂ ಸಹ ಬಡವನ ಸ್ಥಿತಿ ಕೆಳಮಟ್ಟದಲ್ಲೇ ಇರುವುದನ್ನು ಚಿತ್ರಿಸಿದ್ದಾರೆ. ಗಂಡಿನ ಅಡಿಯಾಳಾಗಿ ಬದುಕುತ್ತಿರುವ ಹೆಣ್ಣಿನ ಬದುಕು, ಕೆಳವರ್ಗದವರ ನೋವು, ಸಂಕಟ ಬದುಕಿನ ಏರಿಳಿತಗಳು ಮೇಲ್ವರ್ಗದವರಿಂದ ಆಗುವ ಮೋಸ, ವಂಚನೆಗಳನ್ನು ಕಾಣಬಹುದು. ದೇಶದ ಬೆನ್ನುಲುಬಂತೆ ಇದ್ದ ರೈತನ ಸ್ಥಿತಿ ಇಂದು ಶೋಚನೀಯ ಪರಿಸ್ಥಿತಿಗೆ ಬಂದು ನಿಂತಿರುವುದನ್ನು ಕೃಷ್ಣಪ್ಪನವರ ಕಥೆಗಳು ವಿವರಿಸುತ್ತವೆ.

ಒಟ್ಟಾರೆ ಕೃಷ್ಣಪ್ಪ ಅವರ ಕಥೆಗಳನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಅವರ ಕಥೆಗಳಲ್ಲಿ ಕಂಡು ಬರುವ ಸಾಮಾಜಿಕ ಅಂಶಗಳು ಪ್ರಸ್ತುತ ಸಮಾಜದ ನೈಜ ಚಿತ್ರಣಗಳಾಗಿದ್ದು, ಅದರಿಂದ ಸಮಾಜದಲ್ಲಿರುವ ಅನೇಕರು ಹೇಗೆ ಧಾರುಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ ಎಂಬುದನ್ನು ತಿಳಿಸಿಕೊಡುವುದರ ಮೂಲಕ ಶೋಷಣೆ, ಮೋಸ, ವಂಚನೆಗಳು ನಿಂತು ಆರೋಗ್ಯಕರ ಸಮಾಜವನ್ನು ಕಾಣುವ ಆಸೆಯನ್ನೂ ವ್ಯಕ್ತಪಡಿಸುತ್ತಾರೆ.

ಗ್ರಾಮೀಣ ಸಮಾಜದಲ್ಲಿ ಬದುಕುತ್ತಿರುವ ಮನುಷ್ಯ ಇಂದು ಬದಲಾವಣೆಯ ಹಾದಿಯಲ್ಲಿದ್ದಾನೆ. ಆಧುನಿಕತೆಯ ಮೋಹಕ್ಕೆ ಸಿಲುಕಿ ಸಾಕಿ ಬೆಳೆಸಿದ ತಂದೆ-ತಾಯಿಯರನ್ನು, ತಾತ-ಮುತ್ತಾತರ ಕಾಲದಿಂದ ಉಳಿಸಿಕೊಂಡು ಬಂದ ಭೂಮಿಯನ್ನು ನೋಡುವ ಮನೋಭಾವ ಇಂದಿನ ಯುವಕರಲ್ಲಿ ಬದಲಾಗಿದೆ. ಕೃಷ್ಣಪ್ಪ ಅವರ **'ಮಗ ಬರುತ್ತಾನೆ'** ಕಥೆಯಲ್ಲಿ ಗೌಡನ ಮಗ ನಗರದ ಆಕರ್ಷಣೆಗೆ ಒಳಗಾಗಿ ಕೆಲಸಕ್ಕೆ ಸೇರುತ್ತಾನೆ. ಆತ ಬರುತ್ತಾನೆ ಎಂಬ ನಿರೀಕ್ಷೆಯಲ್ಲಿದ್ದ ತಂದೆಗೆ ಅದು ಹುಸಿಯಾದಾಗ ಆಗುವ ನೋವು, ಹತಾಶೆಯನ್ನು ಲೇಖಕರು ಪರಿಣಾಮಕಾರಿಯಾಗಿ ತಿಳಿಸಿದ್ದಾರೆ. ಹಿಂದಿನ ಜನ ಭೂಮಿಯೆಂದರೆ ಬೇಸಾಯ ಮಾಡಿ, ಭೂಮಿಯನ್ನೇ ದೇವರೆಂದು ನಂಬಿ ಜೀವನ ಸಾಗಿಸುತ್ತಿದ್ದರು. ಭೂಮಿಯ ಜೊತೆ ಉತ್ತಮವಾದ ಸಂಬಂಧವನ್ನು ಹೊಂದಿದ್ದರು. ಇಂದಿನ ಮಕ್ಕಳಿಗೆ ಭೂಮಿಯನ್ನು ಉತ್ತು ಬಿತ್ತುವುದಿರಲಿ, ಅದನ್ನು ನೋಡುವ ವ್ಯವಸಾಯ ಮಾಡುವ ಆಸಕ್ತಿ ಸುತಾರಂ ಇಲ್ಲವಾಗಿದೆ. ಆಧುನಿಕತೆಯನ್ನು ಬಯಸುತ್ತಿರುವ ಯುವ ಜನಾಂಗ, ಭೂಮಿಯನ್ನು ಮಾರಾಟ ಮಾಡಿ ನಗರದ ಕಡೆಗೆ ಧಾವಿಸುತ್ತಿರುವುದನ್ನು ಕಾಣಬಹುದಾಗಿದೆ. ಆದರೆ ಈ ರೀತಿ ಕೆಲಸಕ್ಕೆ ಸೇರಿ ದುಡಿಯುವುದು ಮಣ್ಣಿನ ಮಕ್ಕಳಿಗೆ ಸಮ್ಮತವಲ್ಲ ಅದಕ್ಕೆ ಅವರು "ಹಿರಿಮಗ ಓದಿ ಕೆಲಸಕ್ಕೆ ಸೇರುವ ದರ್ದಾದರೂ ಏನಿತ್ತು? ಒಂದು ಸಾರಿ ಸರಿಯಾಗಿ ಬೆಳೆದರೆ ಇಡೀ ಊರಿಗೆ ವರ್ಷಕ್ಕಾಗಿ ಉಳಿಯುವಷ್ಟು ದಿನಸಿ ಮನೆ ತುಂಬುತ್ತಿತ್ತು. ಅಂತಾದ್ರಲ್ಲಿ ಸರ್ಕಾರಿಚಾಕ್ರಿ ಮಾಡಿ ಸಂಬಳ ತಂದು ಹೊಟ್ಟೆ ಹೊರೆಯುವುದೆ? ನೆನೆಸಿಕೊಳ್ಳೋದೆ ಅವಮಾನ" ಎನ್ನುತ್ತಾರೆ.

ಈ ಮಾತುಗಳನ್ನು ಗಮನಿಸಿದಾಗ ಹಣಕ್ಕಾಗಿ ಇನ್ನೊಬ್ಬರ ಅಡಿಯಾಳಾಗಿ ದುಡಿಯುವುದರ ಬದಲು ತಮ್ಮದೇ ಭೂಮಿಯಲ್ಲಿ ಬೇಸಾಯ ಮಾಡಿ ಇಡೀ ಊರಿಗಾಗುವಷ್ಟು ಬೆಳೆಯುವ, ರಾಜನಂತೆ ಬದುಕುವ ಆಸೆಯು ವ್ಯಕ್ತವಾಗುತ್ತದೆ. ಹಿಂದಿನವರು ಭೂಮಿಯಲ್ಲಿ ಬೆಳೆ ತೆಗೆದರೆ ವರ್ಷಾನುಗಟ್ಟಲೆ ತಿಂದು ಉಳಿಯುವಷ್ಟು ಬೆಳೆದು ಸ್ವಾತಂತ್ರ್ಯ ಮತ್ತು ಅಭಿಮಾನದಿಂದ ಬದುಕುತ್ತಿದ್ದರು.

ಇಂದು ಯುವಕರು ನಗರ ಪ್ರದೇಶಗಳಲ್ಲಿ ಕಸ ಗುಡಿಸುವ ಕೆಲಸವಾದರೂ ಸರಿ ಅಲ್ಲಿ ಬದುಕಲು ಬಯಸುತ್ತಿದ್ದಾರೆ. ಗ್ರಾಮೀಣ ಜೀವನವೆಂದರೆ ತಿರಸ್ಕಾರದ ಭಾವನೆ ಉಂಟಾಗುತ್ತಿರುವುದನ್ನು ಇಂದು ಕಾಣಲಾಗುತ್ತಿದೆ. ಹಿಂದಿನವರಿಗೆ ಸರ್ಕಾರಿ ಚಾಕ್ರಿ ಎಂದರೆ ಅವಮಾನದ ಸಂಗತಿಯಾಗಿತ್ತು. ಗ್ರಾಮೀಣ ಯುವಕರಿಗೆ ನಗರದ ಮೇಲಿರುವ ಅಕ್ಕರೆ ಆಸೆ ತಾವು ಹುಟ್ಟಿ ಬೆಳೆದ ಊರ ಬಗ್ಗೆ ಇಲ್ಲವಾಗಿದೆ. ಇಂದಿನ ಯುವ ಪೀಳಿಗೆ ಭೂಮಿಯನ್ನು ನೋಡದೆ ವ್ಯವಸಾಯ ಮಾಡದೆ ಅದನ್ನು ಮಾರಿ ನಗರದ ಕಡೆ ಹೋಗುತ್ತಿರುವುದರಿಂದ, ಮುಂದೊಂದು ದಿನ ಸಮಾಜದಲ್ಲಿ ಆಹಾರದ ಸಮಸ್ಯೆ ಉದ್ಭವಿಸಿ ಸಮಾಜ ಅವನತಿಯ ಅಂಚಿಗೆ ಬರಬಹುದೆಂಬ ಆತಂಕವನ್ನು ಲೇಖಕರು ತಮ್ಮ ಈ ಕಥೆಯಲ್ಲಿ ವ್ಯಕ್ತಪಡಿಸುತ್ತಾರೆ.

ಬಾಲ್ಯದಿಂದ ಸಾಕಿ ಬೆಳೆಸಿದ ತಂದೆ ತಾಯಿಯರನ್ನು ನೋಡದೆ ನಿರ್ಲಕ್ಷ್ಯ ಮಾಡುತ್ತಿರುವ ಇಂದಿನ ಮಕ್ಕಳು ಆಧುನಿಕತೆಗೆ ಸಿಕ್ಕಿ ಎಲ್ಲರನ್ನು ಎಲ್ಲವನ್ನು ಸಹ ಮರೆಯುತ್ತಿದ್ದಾರೆ. ಹಿಂದಿನವರಲ್ಲಿ ಇದ್ದಂತಹ ಪ್ರೀತಿ, ವಾತ್ಸಲ್ಯ, ಆತ್ಮೀಯತೆ ಸಂಬಂಧಗಳ ನಡುವೆ ಇರುವ ಬಾಂಧವ್ಯವನ್ನು ಚರಿತ್ರೆಯಿಂದ ಕೇಳಿ ತಿಳಿಯಬಹುದೇ ಹೊರತು ಇಂದು ಕಾಣಲು ಸಾಧ್ಯವಾಗುತ್ತಿಲ್ಲ. "ನಿನ್ಗೆ ಗ್ಯಾನ ಬೇಡ್ವೇನೋ, ನಮ್ಮೊಲ ಮನೆ ದನಕರ ಏನಾದೋ ಅಂತ. ಅವನೆಲ್ಲೋದ್ನೋ ಆ ದರವೇಸಿ ನನ್ಮಗ ವತ್ತಾರೆ ಕೋಳಿ ಕೂಗುವಾಗೋದ್ರೆ ಬಂದ್ರೇ ಬಂದ ಇಲ್ದೇರೆ ಇಲ್ಲ. ಇದೇನ್ ಒಕ್ಕಲಿಗನ ಬದುಕೇನ್ಲಾ? ನೀನಾರೂ ಚಾಕ್ರಿ ಬುಟ್ಟುಟ್ಟು ಊರಲ್ಲಿದ್ಕೊಂಡು ಜಮೀನ್ ನೋಡ್ಲಾ ಅಂದ್ರೆ ನಾಕಾಣೆ ಸಂಬಳಕ್ಕೊಗಿ" ಎಂದು ರೇಗಿದಾಗ

ಮಗನಿಂದ ಬಂದ ಉತ್ತರ "ಯಾರಿಗ್ಬೇಕಪ್ಪ ಈ ಭೂಮಿ ಕಾಣೆ"? ಈ ಉತ್ತರದಿಂದ ಗೌಡನಿಗೆ ಆಘಾತವಾಗುತ್ತದೆ.

ತನ್ನ ನಂತರ ತನ್ನ ಮಕ್ಕಳು ಜಮೀನನ್ನು ಕಾಪಾಡುತ್ತಾರೆ ಎಂಬ ನಂಬಿಕೆಯ ಗೋಪುರ ಕುಸಿಯುತ್ತದೆ. ಇತ್ತ ಮನೆಯಲ್ಲಿರುವ ಮಗನಿಗೂ ಸಹ ತಂದೆಯ ಬಗ್ಗೆ ಗೌರವವಾಗಲಿ ಭೂಮಿಯ ಮೇಲೆ ಆಸೆಯಾಗಲಿ ಇಲ್ಲ. ಇದರಿಂದ ನೊಂದ ಗೌಡ ಅದೇ ನೋವಲ್ಲಿ ಸಾವನ್ನಪ್ಪುತ್ತಾನೆ. ಆಧುನಿಕತೆಯತ್ತ ಮುಖ ಮಾಡುತ್ತಿರುವ ಹಳ್ಳಿಗಳಲ್ಲಿ ಬದುಕುತ್ತಿರುವ ಎರಡು ತಲೆಮಾರುಗಳ ವಿರುದ್ಧ ಧೋರಣೆಗಳ ಚಿತ್ರಣವನ್ನು ಕಾಣಬಹುದಾಗಿದೆ. ಇಲ್ಲಿ ಕಥೆಗಾರರು ಹಳ್ಳಿಗಳು ಬದಲಾವಣೆಗೊಂಡು ತಮ್ಮ ಸತ್ಯವನ್ನು ಕಳೆದುಕೊಳ್ಳುತ್ತಿರುವುದರ ಬಗ್ಗೆ ಆತಂಕ ವ್ಯಕ್ತಪಡಿಸಿ ಎಚ್ಚರಿಕೆಯನ್ನು ನೀಡಿದ್ದಾರೆ.

'ಗತ್ಯಂತರ' ಕಥೆಯಲ್ಲಿ ಬರುವ ಭೂಮಿಗೌಡರ ಸ್ಥಿತಿಯು ಸಹ ಅಸಹಾಯಕ ಪರಿಸ್ಥಿತಿಯಲ್ಲಿ ಇರುವುದನ್ನು ಕಾಣಬಹುದು. ಸಾಕಿ ಬೆಳೆಸಿದ ಮಕ್ಕಳನ್ನು ವಿದ್ಯಾವಂತರಾಗಿ ಮಾಡಬೇಕೆಂಬ ಕನಸು ಕಂಡ ಗೌಡರು ಓದದೆ ತಿರುಗಾಡಿಕೊಂಡು ಜೀವನ ಸಾಗಿಸುತ್ತಿದ್ದ ಮಗನನ್ನು ನೋಡಿ ಬೇಸರಗೊಳ್ಳುತ್ತಾರೆ. ಹಾಗೂ ಹೀಗೂ ತಕ್ಕ ಮಟ್ಟಿಗೆ ವಿದ್ಯಾವಂತ ಹೆಣ್ಣನ್ನು ತಂದು ಮದುವೆ ಮಾಡಿದ ಮೇಲೆ 'ಅಲ್ಪ ವಿದ್ಯೆ ಮಹಾ ಗರ್ವಿ' ಎಂಬಂತೆ ಸೊಸೆಯ ಆರ್ಭಟ ಹೆಚ್ಚಾಯಿತು. ಮನೆಯ ವಾತಾವರಣವೇ ಬದಲಾಯಿತು. ಮಗ ಹೆಂಡತಿಯ ಮಾತು ಕೇಳಿ ತನಗೆ ಪಾಲು ಕೊಡಬೇಕೆಂದು ಕೇಳಿದ. ಮಾತಿನಿಂದ ಭೂಮಿಗೌಡರ ಅಸ್ತಿತ್ವವೇ ಕಳಚಿದಂತಾಯಿತು.

ಗ್ರಾಮೀಣ ಸಮಾಜದಲ್ಲಿ ಓದಿ ವಿದ್ಯಾವಂತರಾಗದೆ ಇಲ್ಲ ಬೇಸಾಯಗಾರರೂ ಆಗದೆ ನಾಜೂಕಿನ ಜೀವನ ಬಯಸುತ್ತಿರುವ ಯುವಕರು ತಂದೆ ತಾಯಿ ಸಂಬಂಧಗಳ ಬಗ್ಗೆ ಪ್ರೀತಿ ವಿಶ್ವಾಸ ಬಾಂಧವ್ಯ ಕಡಿಮೆಯಾಗಿ ನಗರದ ಕಡೆ ಮುಖ ಮಾಡಿರುವುದು ವಿಷಾದದ ಸಂಗತಿಯಾಗಿದೆ. ಗ್ರಾಮೀಣರು ಹೇಳುವಂತೆ ಹೆಣ್ಣಿಗೆ ಶಿಕ್ಷಣ ಕೊಟ್ಟರೆ, ಕಡಿವಾಣವಿಲ್ಲದ ಕುದುರೆಯಂತೆ ದಿಕ್ಕಾಪಾಲಾಗಿ ಹೋಗುತ್ತಾಳೆ. ಆದ್ದರಿಂದಲೇ ಹಿಂದಿನವರು ಹೆಣ್ಣನ್ನು ಕೆಳಮಟ್ಟದಲ್ಲಿ ಇಟ್ಟಿದ್ದುದು ಭೂಮಿ ಗೌಡರ ಸೊಸೆ ಇದಕ್ಕೆ ಉದಾಹರಣೆಯಾಗುತ್ತಾಳೆ. ನಾಜೂಕಿನ ಜೀವನದಿಂದ ತಂದೆಯಿಂದ ಮಗನನ್ನು ದೂರ ಮಾಡುವ ಆಲೋಚನೆಗಳು ಇಂದಿನವರಲ್ಲಿ ಕಾಣಬಹುದು. ಇಂದಿನ ಮಕ್ಕಳಿಗೆ "ವತ್ತಾರೆ ಎದ್ದರೆ ಸ್ನಾನ ಮಡಿ ಆಗಲೇಬೇಕು. ತಲೆಗೆ ಶ್ಯಾಂಪು, ಸೋಪುಗಳು, ನಂತರ ಇಸ್ತ್ರಿ ಮಾಡಿದ ಗರಿಗರಿಯಾದ ಬಟ್ಟೆ ಕೆಲಸವಿರಲಿ, ಇಲ್ಲದಿರಲಿ, ಬೆಳಗಿನ ಬಸ್ಸಿಡಿದು ಪೇಟೆಗೆ ಹೋಗುವುದು ಬರುವುದು ಏನೋ ಅರ್ಜೆಂಟ್ ಕೆಲಸ ಇದೆ ಎಂದು ಆತುರಾತುರವಾಗಿ ಓಡುವುದು".

ಈ ಮಾತುಗಳನ್ನು ಗಮನಿಸಿದಾಗ ಇಂದಿನ ಜನಾಂಗ ತಾವು ಹುಟ್ಟಿ ಬೆಳೆದ ಊರಿನಲ್ಲಿ ಜೀವಿಸದೆ ನಗರದ ಕಡೆ ಆಕರ್ಷಣೆಗೊಳ್ಳುತ್ತಿರುವುದನ್ನು ನೋಡಿದರೆ ಮುಂದೆ ಹಳ್ಳಿಗಳ ಸ್ಥಿತಿ ಏನಾಗಬಹುದೆಂಬ ಭೀತಿ ಮೂಡುತ್ತದೆ ಎಂಬುದನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

ಗ್ರಾಮೀಣರಲ್ಲಿ ಸಾಕಿ ಬೆಳೆಸಿದ ಮಕ್ಕಳು ವಯಸ್ಸಾದ ತಂದೆ ತಾಯಿಗಳಿಗೆ ಆಶ್ರಯದಾತರಾಗದೆ ಆಧುನಿಕತೆಯ ಕಡೆ ಮುಖ ಮಾಡಿ ತಮ್ಮ ಸುಖ ಜೀವನವನ್ನು ನೋಡಿಕೊಳ್ಳುತ್ತಿದ್ದಾರೆ. ಹಿಂದೆಲ್ಲಾ ಎಂಟತ್ತು ಮಕ್ಕಳಿರುತ್ತಿದ್ದರು. ಆದರೆ ಈಗ ಒಂದೋ ಎರಡೋ ಮಕ್ಕಳು ಅವರೇ ಆಸರೆಯಾಗಬೇಕು

ಸತ್ತರೆ ಅವರೇ ಕೊಳ್ಳಿ ಹಿಡಿಯಬೇಕು ಎಂಬೆಲ್ಲಾ ನಂಬಿಕೆಗಳನ್ನು ಕಟ್ಟಿಕೊಂಡು ಬದುಕುತ್ತಿದ್ದರು. ಇಂದಿನ ಯುವಗ್ರಾಮೀಣರು ತಾವೂ ಮುದುಕರಾಗುತ್ತೇವೆ ಎಂಬುದನ್ನು ಮರೆತು ವರ್ತಿಸುತ್ತಾರೆ.

"ಪಟ್ಟಣದಲ್ಲಾದರೆ ಯಾವುದಾದರೂ ವೃದ್ಧಾಶ್ರಮದಲ್ಲೋ ಮತ್ತೆಲ್ಲೋ ದಾಖಲಾಗುತ್ತಾರೆ ಆದರೆ ಹಳ್ಳಿಗಳಲ್ಲಿ ಅಂತಹ ಯಾವುದೇ ವ್ಯವಸ್ಥೆಗಳಿಲ್ಲ ಹಾಗಾಗಿ ಮಕ್ಕಳನ್ನೇ ನಂಬಿ ಬದುಕಬೇಕು. ಮಕ್ಕಳೇನಾದರೂ ಕೈ ಕೊಟ್ಟರೆ ಹರಶಿವ ಎಂದು ಸಾಯಬೇಕು. ಅದು ಬಿಟ್ಟರೆ ಬೇರೇನೂ ಗತಿಯಿಲ್ಲ. ಅದಕ್ಕಾಗಿಯೇ ಸರ್ಕಾರ ಶಾಸನವೊಂದನ್ನು ತರಬೇಕು. ಮಕ್ಕಳು ಪಾಲು ಬೇಕೆಂದಾಗ ಮಕ್ಕಳಿಗೆ ಕೊಡುವಷ್ಟು ಹಣ, ಒಡವೆ, ವಸ್ತ್ರ, ಜಮೀನು, ದನ, ಕರು, ಕುರಿ, ಎಲ್ಲವನ್ನು ಮುದಿ ತಂದೆ ತಾಯಿಗಳಿಗೂ ಕೊಡಬೇಕು. ಆ ಆಸ್ತಿಯನ್ನು ಮಕ್ಕಳೇ ಎಂದಿಲ್ಲ ಯಾರಾದರೂ ಆ ಮುದಿ ತಂದೆ ತಾಯಿಗಳನ್ನು ಜೋಪಾನ ಮಾಡುವವರಿಗೆ ಸತ್ತ ಮೇಲೆ ಅವರಿಗೆ ಸೇರುವಂತೆ ಶಾಸನ ತರಬೇಕು". ಆಗ ಈ ರೀತಿಯ ಸಮಸ್ಯೆಗೆ ಪರಿಹಾರ ಸಿಗಬಹುದೆಂಬ ನಿರೀಕ್ಷೆಯನ್ನು ಲೇಖಕರು ವ್ಯಕ್ತಪಡಿಸುತ್ತಾರೆ. ಗ್ರಾಮೀಣ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಯಿಂದ ತಂದೆ ಮಕ್ಕಳಲ್ಲಿ ಆತ್ಮೀಯತೆ ಪ್ರೀತಿ, ವಾತ್ಸಲ್ಯ ಕಡಿಮೆಯಾಗಿ ದೇವರು, ಧರ್ಮ ನಂಬಿಕೆ, ಆಚರಣೆ ಎಲ್ಲವೂ ಕಣ್ಮರೆಯಾಗುತ್ತಿರುವುದು, ಗ್ರಾಮೀಣರಲ್ಲಿ ರೈತನ ನಿಲುವು ಹಿಂದೆಲ್ಲಾ ಭೂಮಿ ತಾಯಿಗೆ, ಬೆಳೆಗಳಿಗೆ ಊರಲ್ಲಿರುವ ಎಲ್ಲಾ ದೇವರಿಗೂ ಶಾಂತಿ ಮಾಡಿಸುತ್ತಿದ್ದರು. ಇಂದು ಅದು ಯಾರಿಗೂ ಬೇಡವಾಗಿದೆ. ರೈತನಾಗಿ ಹುಟ್ಟಬಾರದು, ಹುಟ್ಟಿದ ಮೇಲೆ ಭೂಮಿ ತಾಯಿ ಮರೆಯಬಾರದು ಎಂಬ ಮಾತು ಪ್ರಸ್ತುತಕ್ಕೆ ಕನ್ನಡಿ ಹಿಡಿದಂತಿದೆ.

ಮಗನ ಮಾತಿನಿಂದ ನೊಂದ ಗೌಡರು ಭೂಮಿಯ ಮೇಲಿನ ಅಭಿಮಾನದಿಂದ ಮನದಲ್ಲಿ ಭೂಮಿತಾಯಿ ಗೇದೋರು ಯಾರೂ ಹಾಳಾಗಿಲ್ಲ ಎಂದುಕೊಳ್ಳುತ್ತಾ ಇಬ್ಬರು ಗಂಡು ಮಕ್ಕಳಿದ್ದರೂ ತಂದೆಯ ಬಗ್ಗೆ ಪ್ರೀತಿ, ಗೌರವವಾಗಲಿ, ಭೂಮಿಯ ಬಗ್ಗೆ ಆಸೆಯಾಗಲಿ ಇಲ್ಲದಿರುವುದು ಸಮಾಜಕ್ಕೆ ಕಂಟಕದಂತೆ ಎಂದೆನಿಸುತ್ತದೆ. "ಯಾರಿಗ್ಬೇಕಪ್ಪಾ ಇವೆಲ್ಲಾ? ಈಗ ಮಳೆ ಬೆಳೆ ಇಲ್ದೆ ಬೆಳೆಗೆಲ್ಲಾ ರೋಗ ವಡಿತಾದೆ. ಸುಮ್ನೆ ಇವೆಲ್ಲಾನೂ ನೋಡ್ಕೊಂಡು ಕೂತ್ಗೊಳ್ಳೋದ್ರ ಬದ್ಲು ಬಂದಷ್ಟಕ್ಕೆ ಹರಾಜಾಕ್ಬಿಟ್ಟು ಬೆಂಗಳೂರ್‌ನಲ್ಲೋಗಿ ಸೈಟ್ ತಕ್ಕೊಂಡು ಮನೆ ಕಟ್ಟಿಸ್ಬುಟ್ರೆ ಕುಂತದ್‌ತಾವೇ ಬಾಡಿಗೆ ಬತ್ತದೆ. ಯಾರ್ ಇವೆಲ್ಲಾನೂ ನೋಡ್ಕೋತ್ತಾರೆ". ಈ ಮಾತುಗಳನ್ನು ಗಮನಿಸಿದಾಗ ಯುವಕರನ್ನು ಎಷ್ಟರ ಮಟ್ಟಿಗೆ ಆಧುನಿಕತೆ ಸೆಳೆಯುತ್ತದೆಂಬುದು ತಿಳಿಯುತ್ತದೆ. ಇದೇ ಮುಂದೊಂದು ದಿನ ಹಳ್ಳಿಗಳು ಕಣ್ಮರೆಯಾಗುವ ಪ್ರಸಂಗವನ್ನು ಎದುರಿಸಬೇಕಾಗುತ್ತದೆ.

ಭೂಮಿಗೌಡರಿಗೆ ಮಕ್ಕಳಾಡಿದ ಮಾತಿನಿಂದ ತಾವು ನಂಬಿಕೊಂಡು ಬಂದ ಭೂಮಿಯ ಮೇಲಿನ ಅಭಿಮಾನದಿಂದ. ಎಲ್ಲರನ್ನು ಬಡಿದು ಬೆಂಕಿಗೆ ಹಾಕುವಷ್ಟು ಆಕ್ರೋಶ ಹುಟ್ಟುತ್ತದೆ. ತಾವು ಹಿಂದಿನಿಂದ ಉಳಿಸಿಕೊಂಡು ಬಂದ ಭೂಮಿಯ ಮೇಲೆ ತಮ್ಮ ಜೀವವನ್ನೆ ಇಟ್ಟು ಬದುಕು ನಡೆಸುತ್ತಿದ್ದವರು. ಭೂಮಿಗೌಡರಂತಹ ಎಷ್ಟೋ ಕುಟುಂಬಗಳು ಈ ರೀತಿಯ ಪರಿಸ್ಥಿತಿಯಿಂದ ಬದುಕು ಸಾಗಿಸುತ್ತಿರುವುದನ್ನು ಪ್ರಸ್ತುತದಲ್ಲಿ ಕಾಣಬಹುದು. ಯುವ ಜನಾಂಗದಿಂದ ಆಗುತ್ತಿರುವ ಬದಲಾವಣೆಯಿಂದ ಗ್ರಾಮೀಣರ ಬದುಕು ಮುಂದಿನ ದಿನಗಳಲ್ಲಿ ಯಾವ ಅವಸ್ಥೆಗೆ ಬರಬಹುದೆಂಬ ಆತಂಕವನ್ನು ವ್ಯಕ್ತಪಡಿಸಿದ್ದಾರೆ.

ಗ್ರಾಮೀಣ ಸಮಾಜದಲ್ಲಿ ಜನರು ಜಾಗತೀಕರಣದ ದಳ್ಳುರಿಗೆ ಸಿಕ್ಕಿ ಜೀವನ ಅಸ್ತ ವ್ಯಸ್ತವಾಗುತ್ತಿದೆ. ಜೊತೆಗೆ ಇದರಿಂದ ತಮ್ಮ ತನವನ್ನೆ ಕಳೆದುಕೊಳ್ಳುತ್ತಿರುವುದು, ಸಾಯಲೂ ಆಗದೆ ಬದುಕಲೂ ಆಗದೆ ಜೀವನ ನಡೆಸುತ್ತಿರುವ ಗ್ರಾಮೀಣರ ಬದುಕಲ್ಲಿ ಆಚಾರ-ವಿಚಾರ ಗಾಳಿಯ ಪಾಲಾಗಿ ಹಳ್ಳಿಯಲ್ಲಿ ಹುಟ್ಟಿದ

ಯುವಕರು ನಾಗರೀಕತೆಯ ತುತ್ತ ತುದಿ ತಲುಪಲೂ ಆಗದೆ, ತಲುಪದಿರಲೂ ಆಗದೆ ಜೀವನದುದ್ದಕ್ಕೂ ಅಲೆದು ಕೊನೆಗೆ ಸಾವಿಗೆ ಶರಣಾಗುವ ಸನ್ನಿವೇಶವನ್ನು **'ಬದಲಾದ ಬದುಕು'** ಕಥೆಯಲ್ಲಿ ತಿಳಿಸಿದ್ದಾರೆ.

ಹಳ್ಳಿಯ ಮುಗ್ಧ ದೈವ ಭಕ್ತನಾದ ದಾಸೇಗೌಡ ಹುಟ್ಟಿನಿಂದ ಭೂಮಿತಾಯಿ ದೇವರನ್ನು ನಂಬಿಕೊಂಡು ಜೀವನ ನಡೆಸುತ್ತಿದ್ದ ಹೆಂಡತಿಯ ಮೇರೆಗೆ ಮಕ್ಕಳಿಗೆ ಇಂಗ್ಲೀಷ್ ಶಿಕ್ಷಣದಿಂದ ದೊಡ್ಡ ಕೆಲಸಕ್ಕೆ ಸೇರುತ್ತಾನೆಂದುಕೊಂಡವನಿಗೆ ದುಡಿದು ಸಂಪಾದಿಸುವ ವಯಸ್ಸಿನಲ್ಲಿ ಮದುವೆಯಾಗಿ ಬಂದದ್ದು ನುಂಗಲಾರದ ತುತ್ತಾಯಿತು. ಕುಲವಿಲ್ಲ, ಜಾತಿಯಿಲ್ಲ ಎಲ್ಲವು ಬೇಸರವಾಗ ತೊಡಗಿತು.

ತಾತ ಮುತ್ತಾತರ ಕಾಲದಿಂದ ಉಳಿಸಿಕೊಂಡು ಬಂದ ಭೂಮಿಯನ್ನು ಕಾಪಾಡುತ್ತಾರೆ ಎಂಬ ಕನಸು ಕಂಡ ತಂದೆ ತಾಯಿಗೆ ಇಂದಿನ ಮಕ್ಕಳು ಆಧುನಿಕತೆಯ ನಾಜೂಕಿನ ಜೀವನವನ್ನು ಬಯಸುತ್ತಾರೆ. ತಂದೆಯ ಮಾತಿನಿಂದ ಆಧುನಿಕ ಕೃಷಿಯಲ್ಲಿ ಹೊಸ ತಳಿಯ ಧಾನ್ಯ ಬೆಳೆಯಲು ಪ್ರಾರಂಭಿಸಿ ಎಲ್ಲವೂ ನಾಶವಾಗಿ ಯಾವುದೂ ಕೈ ಹತ್ತದೆ ಬ್ಯಾಂಕಿನ ಸಾಲದಲ್ಲಿ ಮುಳುಗಿ ಹೋದ ಮಗನನ್ನು ನೋಡಿ ದಾಸೇಗೌಡನಿಗೆ ಬರಸಿಡಿಲು ಬಡಿದಂತಾಯಿತು.

ಗ್ರಾಮೀಣರಲ್ಲಿ ಹಿಂದೆಲ್ಲಾ ಬೆಳೆ ಬೆಳೆದರೆ ವರ್ಷಾನುಗಟ್ಟಲೆ ತಿನ್ನುವಷ್ಟು ಬೆಳೆಯುವಷ್ಟು ಬೆಳೆಯನ್ನು ಉತ್ತಿ ಬಿತ್ತಿ ಬೆಳೆಯುತ್ತಿದ್ದರು. ಇಂದು ಆಧುನಿಕ ಬೇಸಾಯವನ್ನು ಉಪಯೋಗಿಸಿ ಅದರಿಂದ ನಷ್ಟವನ್ನು ಪಡೆಯುತ್ತಿರುವ ಯುವಕರನ್ನು ಕಾಣಬಹುದು. ಎಲ್ಲದರಲ್ಲೂ ಆಧುನಿಕತೆಯ ಪ್ರಭಾವದಿಂದಾಗಿ ಬಡ ರೈತನ ಸ್ಥಿತಿ ಯಾವ ಹಂತಕ್ಕೆ ತಲುಪಬಹುದೆಂಬ ವಿಷಾದವನ್ನು ದಾಸೇಗೌಡನ ಮಗನಲ್ಲಿ ಕಾಣಬಹುದು. ತನಗೆ ವ್ಯವಸಾಯ ತಕ್ಕದ್ದಲ್ಲ ಎಂದುಕೊಂಡು ಚಿಂತೆಗೀಡಾದ ವ್ಯವಸಾಯ ಮಾಡುವ ರೀತಿ ನೀತಿಯನ್ನೆ ಅರಿಯದ ಯುವಕ ಬ್ಯಾಂಕಿನ ಸಾಲದ ಚಿಂತೆಯಲ್ಲಿ ಹುಚ್ಚನಂತಾಗಿ ಕೊನೆಗೆ ಆತನ ಜೀವನವೇ ಮುಕ್ತಾಯವಾಗುತ್ತದೆ.

ಇಂದಿನ ಯುವ ಜನಾಂಗ ಜೀವನದ ಮಾರ್ಗವನ್ನು ತಿಳಿಯದೆ ಅಡ್ಡದಾರಿಯಲ್ಲಿ ಹೋಗುತ್ತಿರುವುದು ಮುಂದಿನ ಜೀವನಕ್ಕೂ ಮಾರಕವಾಗಿದೆ. ದಾಸೇಗೌಡನ ಮಗ ಓದಿ ವಿದ್ಯಾವಂತನಾಗಲಿಲ್ಲ, ಬೇಸಾಯ ಮಾಡಿ ರೈತನೂ ಆಗಲಿಲ್ಲ. ಕೊನೆಗೆ ಜೀವನವನ್ನು ಎದುರಿಸುವ, ಬದುಕುವ ದಾರಿಯನ್ನು ಅರಿಯದೆ ತನ್ನ ಪ್ರಾಣ ಕೊಡುತ್ತಿರುವುದನ್ನು ನೋಡಿದರೆ ಇಂದಿನ ತಂದೆ ತಾಯಿಯರಿಗೆ ತುಂಬಲಾರದ ನಷ್ಟವಾಗಿದೆ. ಹಿರಿಯ ಮಗನ ಸಾವು, ಇದ್ದ ಒಬ್ಬಳೇ ಮಗಳು ಜೊತೆಗಾರನ ಜೊತೆ ಹೋದದ್ದು, ಕಿರಿಯ ಮಗ, ಸೊಸೆ ಕಸಕ್ಕಿಂತ ಕಡೆಯಾಗಿ ಕಂಡದ್ದು, ಇದ್ದ ಭೂಮಿಯೆಲ್ಲಾ ಸಾಲಕ್ಕೆ ವಜಾವಾಗಿದ್ದು, ದಾಸೇಗೌಡನ ಜೀವನದಲ್ಲಿ ರೈತನಾಗಿ ಹುಟ್ಟಬಾರದು, ಎಂಬ ನೋವು ಹತಾಶೆ ಉಂಟಾಗುತ್ತದೆ.

ಇಂದಿನ ವಿದ್ಯಾವಂತರಲ್ಲಿ ಆಧುನಿಕತೆಯ ಅಮಲು ತಲೆಗೇರಿದೆ. ಅದರಿಂದ ಹೊರ ಬಂದರೆ ಜೀವನ ಸಾಕಾರವಾಗಬಹುದು ಇಲ್ಲವಾದರೆ ಅದರಿಂದ ಬದುಕನ್ನು ಕಳೆದುಕೊಳ್ಳುವ ಹಂತಕ್ಕೆ ಬರಬೇಕಾಗುತ್ತದೆ. ದಾಸೇಗೌಡನಂತಹ ಪರಿಸ್ಥಿತಿಯಲ್ಲಿ ಸಾಯಲು ಆಗದೆ ಬದುಕಲು ಆಗದೆ ಇರುವ ರೈತನನ್ನು ನಾವು ಇಂದಿಗೂ ಕಾಣುತ್ತಲೇ ಬಂದಿದ್ದೇವೆ.

ಗ್ರಾಮೀಣರು 'ಹಸು ಹಾಲು ಕೊಡುವಾಗ ಹಸಿರು ಹುಲ್ಲು, ಹಿಂಡಿ, ಬೂಸಾ ಎಲ್ಲಾ ಹಾಕಿ ಸಾಕುತ್ತಾರೆ. ಮುದಿಯಾದ ಮೇಲೆ ಕಸಕ್ಕಿಂತ ಕಡೆಯಾಗಿ ಕಾಣುತ್ತಾರಂ'. ಹಾಗೆಯೇ ಮಗನ ಮನೆ ಸೇರಿದ ದಾಸೇಗೌಡನ ಕತೆಯು ಹಾಗೆಯೇ ಆಯಿತು. ಸಾಕಿ ಬೆಳೆಸಿದ ಹೆತ್ತವರನ್ನು ನೋಡಿಕೊಳ್ಳಲು ಆಗದೆ ತಮ್ಮ

ಸುಖವನ್ನು ಬಯಸುತ್ತಿರುವ ಯುವ ಪೀಳಿಗೆ ಇದೇ ರೀತಿಯಾದರೆ, ಮುಂದೊಂದು ದಿನ ಸಮಾಜ ಅದಃಪತನದ ಹಾದಿ ಹಿಡಿಯುವುದರಲ್ಲಿ ಸಂದೇಹವೇ ಇಲ್ಲ.

ದೇವರು ಧರ್ಮ, ಪಾಪ ಪುಣ್ಯದ ಪ್ರಜ್ಞೆ ಇದ್ದುದರಿಂದ ಮಳೆ ಬೆಳೆಯಾಗಿ ಬದುಕು ಸಾಗಿಸುತ್ತಿದ್ದ ಗ್ರಾಮೀಣರಲ್ಲಿ ಇಂದು ಬದಲಾವಣೆಯ ಗಾಳಿ ಬೀಸಿ ರೈತನ ಸ್ಥಿತಿ ಕತ್ತರಿಗೆ ಸಿಕ್ಕ ಅಡಿಕೆಯಂತಾಗಿದೆ. ಹಳ್ಳಿಯ ಜನ ನಂಬಿಕೆಗೆ ಹೆಸರಾಗಿದ್ದರು. ಆದರೆ ಅವರಲ್ಲೂ ಸ್ವಾರ್ಥ, ಅಸೂಯೆ ಕೆಳವರ್ಗದವರ ತುಳಿತ, ಶೋಷಣೆ ತಾರತಮ್ಯ ಮನೆ ಮಾಡಿರುವುದನ್ನು **'ಹೀಗೊಂದು ಬದುಕು'** ಕಥೆಯಲ್ಲಿ ಕಾಣಬಹುದು.

ಮುಖ್ಯವಾಗಿ ಒಬ್ಬ ಮಧ್ಯಮ ವರ್ಗದ ಬಡರೈತನ ಏಳಿಗೆಯನ್ನು ಸಹಿಸದೆ ಅವನನ್ನು ತುಳಿದು ಬದುಕುವ ಮೇಲ್ವರ್ಗದವರ ದಬ್ಬಾಳಿಕೆಯನ್ನು **'ಹೀಗೊಂದು ಬದುಕು'** ಕಥೆಯಲ್ಲಿ ಕಾಣಲಾಗುತ್ತದೆ. ಭೂಮಿಯನ್ನು ನಂಬಿ ಭೂಮಿಯ ಮಗನಾಗಿ ದುಡಿಯುತ್ತಿದ್ದ, ಬಡರೈತ ಕಷ್ಟ ಪಟ್ಟು ದುಡಿದು ಕೂಡಿಟ್ಟ ಹಣದಿಂದ ಕೇವಲ ಮೂರು ಎಕ್ಕರೆ ಜಮೀನು ಕೊಂಡದ್ದಕ್ಕೆ, ಅದನ್ನು ಸಹಿಸದೆ ಮೋಸದ ದಾರಿಯಿಂದ ಅವನನ್ನು ಶೋಷಣೆಗೆ ಗುರಿಮಾಡುವುದನ್ನು ಲೇಖಕರು ಮನ ಮುಟ್ಟುವಂತೆ ತಿಳಿಸಿದ್ದಾರೆ. ಆರ್ಥಿಕ ಸಂಕಷ್ಟದಲ್ಲಿ ಸಿಲುಕಿದ ಬಡರೈತರ ಆಸ್ತಿ, ಪಾಸ್ತಿಗಳನ್ನು ಕಬಳಿಸುವ ಇಂತಹ ವಂಚಕರನ್ನು ಗ್ರಾಮೀಣ ಜೀವನದ ಇನ್ನೊಂದು ಮುಖವಾಗಿ ಗುರುತಿಸಬಹುದು. ಕೇವಲ ಭೂಮಿಯನ್ನೆ ನಂಬಿ ಬದುಕು ಸಾಗಿಸುತ್ತಿದ್ದ, ಗುದಿಗೆಪ್ಪ ಶೋಷಣೆಗೆ ಒಳಗಾಗುತ್ತಾನೆ. ಇಂತಹ ವ್ಯಕ್ತಿಗಳು ಇಂದಿಗೂ ಗ್ರಾಮೀಣ ಪ್ರಪಂಚದಲ್ಲಿ ಶ್ರೀಮಂತರ ದಬ್ಬಾಳಿಕೆ ದೌರ್ಜನ್ಯಕ್ಕೆ ಒಳಗಾಗಿ ಜೀವನ ನಡೆಸಿರುತ್ತಿರುವುದನ್ನು ಕಾಣಬಹುದು.

ನೆಮ್ಮದಿಯಿಂದ ಬದುಕುತ್ತಿದ್ದ ರೈತ ಗುದಿಗೆಪ್ಪನನ್ನು ಮುದ್ದೇಗೌಡನ ಕುಟುಂಬದವರು ಸಣ್ಣ ಕಾರಣ ಹುಡುಕಿ ಕೆದಕುತ್ತಾರೆ. ಗೊಬ್ಬರ ಹೊಡೆಯಲು ಹೊಲದಲ್ಲಿ ದಾರಿ ಬಿಡುವುದಿಲ್ಲ ಎಂದು ತಡೆಯುತ್ತಾರೆ. ಆಗ ಗುದಿಗೆಪ್ಪ "ಯಾಕಣ್ಣೋ? ಅಂದ ಯಾಕೆ ಅಂದ್ರೆ, ನಾವ್ಯಾಕಪ್ಪ ನಿನ್ಗೆ ಸುಮ್‌ಸುಮ್ನೆ ದಾರಿ ಕೊಡುವ ? ಈ ಜಮೀನೇನ್ ನಿಮ್ಮಪ್ಪಂದೇನ್ಲ"? 'ಅಪ್ಪನ್‌ಗಂಟ ಹೋಗ್ಬೇಡ ಕಣಣ್ಣೋ, ನನ್ನ ನಿನ್ನ ಸುದ್ದಿ ಮಾತಾಡು. ನಮ್ಮ ತಾತ ಮತ್ತಾತರ ಕಾಲದಿಂದ್ಲೂ ಇಲ್ಲೇ ಓಡಾಡ್ತಿದ್ದೋ. ಇವತ್ಯಾಕೆ ತೆವರಿ ಕತ್ತರಿಸಿ ಆಕಿದ್ದೀರಿ'?

'ಅಯ್ಯೋ, ನಮ್ ಜಮೀನು, ನಾವೇನಾರ ಮಾಡ್ಕೋತೀವಿ ನಿನಗ್ಯಾಕಪ್ಪ'? 'ಒಂದತ್ ಗಾಡಿ ಗೊಬ್ಬರ ಹೊಡ್ಕೊತೀವಿ, ಸುಮ್ನಿರಣ್ಣೋ?

"ಅವೆಲ್ಲಾ ನಮಗೊತ್ತಿಲ್ಲ, ಇನ್ನೊಂದ್ಸತಿ ಗಾಡಿ ಬಂದ್ರೆ ಆ ಮೇಲೆ ಚೆನ್ನಾಗಿರೊಲ್ಲ" ಸಮಾಜ ಜೀವಿಯಾದ ಮನುಷ್ಯ ಎಷ್ಟು ಸ್ವಾರ್ಥಿ ಎಂದರೆ ತಾನು ಬದುಕಲಾರ, ಬದುಕುವವರನ್ನು ಬಿಡಲಾರ ಎಂಬಂತೆ ಇಂದಿನ ಗ್ರಾಮೀಣರಲ್ಲಿ ಮನುಷ್ಯ ಮಾನವೀಯತೆಗೆ ಬೆಲೆ ಕೊಡದೆ, ಸ್ವಾರ್ಥತನದ ಜೀವನವನ್ನು ಬಯಸುತ್ತಿದ್ದಾನೆ. ತಾನು ತನ್ನ ಕುಟುಂಬ ಸುಖಕರವಾಗಿರಬೇಕು. ತಮಗಿಂತ ಕೆಳ ಮಟ್ಟದಲ್ಲಿರುವ ಜನರು ಬದುಕುವುದನ್ನು ಎಂದೂ ಬಯಸುವುದಿಲ್ಲ. ಇಂತಹ ವ್ಯಕ್ತಿಗಳು ಸಮಾಜದ ಅವನತಿಗೆ ಕಾರಣರಾಗುತ್ತಾರೆ ಎಂಬ ಮಾತು ಪ್ರಸ್ತುತಕ್ಕೆ ಕನ್ನಡಿ ಹಿಡಿದಂತಿದೆ. ಹಿರಿಯರಲ್ಲಿದ್ದ ಪ್ರೀತಿ, ವಾತ್ಸಲ್ಯ, ಬಾಂಧವ್ಯವನ್ನು ಇಂದಿನವರೆಲ್ಲ ಕಾಣಲು ಸಾಧ್ಯವಾಗುತ್ತಿಲ್ಲ. ಹಣದಾಸೆಯಿಂದ ಓದು ಬರಹಬಾರದ ಬಡ ರೈತನನ್ನು ತಮ್ಮ ಸ್ವಾರ್ಥದಿಂದ ಕಾನೂನನ್ನು ಹತ್ತಿಸಿ ಎಲ್ಲಾ ಖಾಲಿಯಾದ ಮೇಲೆ ಮೆಲ್ಲಗೆ ಜಾರಿಕೊಳ್ಳುವ ಇಂತಹ ಪುಡಾರಿಗಳನ್ನು ಗ್ರಾಮೀಣರಲ್ಲಿ ಕಾಣಬಹುದು. ಹಿರಿಯರ ಗಾದೆಯಂತೆ 'ಸಕ್ಕರೆ ಇದ್ದ ಕಡೆ ಇರುವೆ ದಾಳಿ ಮಾಡುವಂತೆ'

ಹಣ ಇರುವವರೆಗೆ ಹಿಂದೆ ಮುಂದೆ ತಿರುಗುತ್ತಿದ್ದ ಗೂಳಿಗೌಡ ಪುಟ್ಟರಾಮಣ್ಣನಂತಹವರು ಸಮಾಜದಲ್ಲಿ ಗುದಿಗೆಪ್ಪನಂತಹ ಕುಟುಂಬಗಳ ಜೊತೆ ಆಟವಾಡಿದವರು. ಇಂತಹವರನ್ನು ಗ್ರಾಮೀಣರಲ್ಲಿ ಇಂದಿಗೂ ಕಾಣಲಾಗುತ್ತಿದೆ. ಪ್ರತಿ ಹಂತದಲ್ಲೂ ತುಳಿತಕ್ಕೆ ಒಳಗಾದ ನೋವು, ಹತಾಶೆಯಿಂದ ಎಲ್ಲವನ್ನು ನೆನೆದು ತನ್ನ ಬದುಕಿನಲ್ಲಿ ಆಟವಾಡಿದ ಜನರಿಗೆ ಶಾಪ ಹಾಕಿ ವಿಷದ ಬಾಟಲಿನಿಂದ ತನ್ನ ಸಮಸ್ಯೆಗೆ ಪರಿಹಾರ ಕಂಡು ಕೊಳ್ಳುತ್ತಾನೆ.

ಸಮಾಜದಲ್ಲಿ ಸ್ವಾರ್ಥ, ಅಸೂಯೆ, ಮೋಸ, ವಂಚನೆಗಳೇ ಹೆಚ್ಚಾಗಿ ಇಂದು ಮನುಷ್ಯನ ಜೀವನ ದಿಕ್ಕು ಪಾಲಾಗುತ್ತಿದೆ. ಈ ರೀತಿಯ ಘಟನೆಗಳಿಂದ ಉತ್ತಮವಾದ ಸಮಾಜ ನಿರ್ಮಾಣವಾಗಲು ಸಾಧ್ಯವಿಲ್ಲ. ಮನುಷ್ಯ ಮನುಷ್ಯರಲ್ಲಿ ಪ್ರೀತಿ, ವಿಶ್ವಾಸ ಆತ್ಮೀಯತೆ ಕಡಿಮೆಯಾಗಿ ಗ್ರಾಮೀಣ ಸಮಾಜದಲ್ಲಿ ಒಡಕುಗಳು, ಉಂಟಾಗುವುದು ಮುಂದಿನ ಪೀಳಿಗೆ ಎದುರಿಸಬೇಕಾದ ಸಮಸ್ಯೆಯಾಗುತ್ತದೆ. ಆದ್ದರಿಂದ ದೀನ ದಲಿತರು ಬಡವರು ಈ ಶೋಷಣೆಗಳಿಂದ ಮುಕ್ತಿ ಪಡೆದಾಗ ಗ್ರಾಮೀಣರ ಬದುಕು ಹಸನಾಗುತ್ತದೆ.

ಸಮಾಜ ಎಷ್ಟೇ ಬದಲಾವಣೆ ಕಂಡರೂ ಸಹ ಬಡವನ ಸ್ಥಿತಿ ಚಿಂತಾಜನಕವಾಗಿದೆ. ಕಷ್ಟಪಟ್ಟು ಬದುಕು ಸಾಗಿಸುವ ಮಹಾದಾಸೆ ಹೊತ್ತ ಒಬ್ಬ ರೈತನನ್ನು ಮೇಲ್ವರ್ಗದವರು ಅವನ ಬದುಕಿನಲ್ಲಿ ಆಟವಾಡಿ ಅವನ ಸಾವಿಗೆ ಕಾರಣರಾಗುವ ದುಷ್ಟ ಶಕ್ತಿಗಳು ಸಮಾಜಕ್ಕೆ ಮಾರಕವಾಗಿದ್ದಾರೆ. ಭೂಮಿತಾಯಿಯ ಮಗನಾಗಿ ಹುಟ್ಟಿ, ಭೂಮಿಗಾಗಿ ಹೋರಾಡಿ ನೊಂದು ಪ್ರಾಣ ಕೊಡುವುದನ್ನು ನೋಡಬಹುದು. ಶ್ರೀಮಂತರ ಹಣವಂತರ ಈ ಶೋಷಣೆ ಅಂತ್ಯಗೊಂಡಾಗ. ಉತ್ತಮ ಸಮಾಜವನ್ನು ಕಾಣಲು ಸಾಧ್ಯ.

ಸಮಾಜದಲ್ಲಿ ಬದುಕುತ್ತಿರುವ ಮನುಷ್ಯ ಸಮಾಜಕ್ಕೆ ಆದರ್ಶ ವ್ಯಕ್ತಿಯಾಗಿ ಬಾಳಬೇಕು. ಹಾಗೆಯೇ ಯಾವುದನ್ನು ಕೆಟ್ಟದ್ದು ಎಂದು ತಿಳಿಯಬಾರದು. ಗ್ರಾಮೀಣ ಸಮಾಜದಲ್ಲಿ ಕಾಣುವ ಆಚಾರ–ವಿಚಾರಗಳು ನಂಬಿಕೆಗಳು ಆಚರಣೆಯಲ್ಲಿ ಇರುವಂತೆ ಜಾತೀಯತೆಯ ಭೂತ ಜೀವಂತವಾಗಿರುವುದನ್ನು ಕಾಣಬಹುದು. ಸಮಾಜ ಎಷ್ಟೇ ಬದಲಾವಣೆಗೊಂಡರೂ ಸಹ ಇಂತಹ ಪದ್ಧತಿಗಳು ಉಸಿರಾಡುತ್ತಲೇ ಇವೆ. ಗ್ರಾಮೀಣರಲ್ಲಿ ಇಂದಿಗೂ ಕೆಳವರ್ಗದವರ ಶೋಷಣೆ, ತಾರತಮ್ಯ, ದ್ವೇಷ, ಅಸೂಯೆ; ಜೀವನದುದ್ದಕ್ಕೂ ಮೇಲ್ವರ್ಗದವರ ಅಡಿಯಾಳಾಗಿ ಬದುಕುವ ರೀತಿಯನ್ನು ಕಾಣಬಹುದು. **'ಕದಡಿದ ನೀರು', ಮತ್ತು 'ಇದೆಂತಹ ಬದುಕು'** ಎಂಬ ಕಥೆಗಳಲ್ಲಿ ಮೇಲ್ವರ್ಗದವರು ಕೆಳವರ್ಗದವರನ್ನು ಹೇಗೆ ಶೋಷಿಸುತ್ತಾರೆ ಎಂಬುದನ್ನು ಚಿತ್ರಿಸಿದ್ದಾರೆ.

ಕೆರೆಗೂ ಊರಿಗೂ ಹೊಂದಿಕೊಂಡಂತೆ ಒಂದು ತೋಪು. ಆ ತೋಪಿನ ಪಕ್ಕ ಈಶ್ವರನ ಗುಡಿ. ಈಗ ಅದು ಇಸ್ಪೀಟ್, ಜಂಪ ಆಡುವ ಸೋಮಾರಿಗಳ ಸದನವಾಗಿದೆ. ಇಂತಹ ಊರಿನಲ್ಲಿರುವ ಜನರಿಗೆ ತಮ್ಮ ಊರೇ ಒಂದು ರಾಜ್ಯವೆಂದು ತಿಳಿದಿರುವುದನ್ನು ನೋಡಿದರೆ ಮರುಕ ಹುಟ್ಟುತ್ತದೆ. ಹಿಂದಿನಿಂದಲೂ ಆಚರಿಸಿಕೊಂಡು ಬಂದಿರುವ ಸಂಪ್ರದಾಯಗಳನ್ನು ತಿರಸ್ಕರಿಸುವ ಬದಲಾವಣೆಗೊಳ್ಳುವ ಮನಸ್ಸು ಅವರಲಿಲ್ಲ. ಶಿಕ್ಷಣ ಕಲಿತ ವ್ಯಕ್ತಿಯೊಬ್ಬ ಹಿಂದಿನಿಂದಲೂ ಆಚರಣೆಯಲ್ಲಿರುವ ಜಾತಿ ವ್ಯವಸ್ಥೆಯನ್ನು ವಿರೋಧಿಸಲು ಹೋಗಿ ವಿಫಲವಾಗುವುದನ್ನು 'ಕದಡಿದ ನೀರು' ಕಥೆಯಲ್ಲಿ ಕಾಣಬಹುದಾಗಿದೆ.

ಸಂಪ್ರದಾಯ, ರೂಢಿ ನಂಬಿಕೆಗಳ ಜೊತೆಯಲ್ಲಿಯೇ ಹುಟ್ಟಿ ಬೆಳೆದು, ಶಿಕ್ಷಣ ಕಲಿತ ಚಂದ್ರಪ್ಪ ವೈಚಾರಿಕವಾಗಿ ತಿಳಿಯುವ ಮನಸ್ಸು ಇದ್ದರೂ ತಾನು ಇಷ್ಟ ಪಟ್ಟ ದೇವಕಿಯನ್ನು ನಿರಾಕರಿಸುತ್ತಾನೆ. ಕಾರಣ ತನ್ನ ಅವಳ ಮಧ್ಯೆ ಜಾತಿ ಅಡ್ಡ ಬಂದಿದ್ದರಿಂದ. ಜಾತಿ ವ್ಯವಸ್ಥೆಯನ್ನು ಬಿಟ್ಟು ಎಲ್ಲರೂ

ಒಂದಾದಾಗ ಮಾತ್ರ ಹಳ್ಳಿಗಳ ಬದುಕು ಹಸನಾಗುತ್ತದೆ. ಊರಿನ ಕೆಳವರ್ಗದವನಾದ ದಾಸ ಮೇಲ್‌ವರ್ಗದವರ ಹೋಟೆಲಿನಲ್ಲಿ ಸರಿಸಮನಾಗಿ ಕುಳಿತು ಟೀ ಕುಡಿದಿದ್ದರಿಂದ ಅದು ಪಂಚಾಯ್ತಿಯಲ್ಲಿ ನ್ಯಾಯಕ್ಕೆ ಹೋಗುತ್ತದೆ. ಗೌಡ ಇದರಲ್ಲಿ ದಾಸನದೇ ತಪ್ಪು ಎಂದು ತೀರ್ಮಾನಿಸಿ ದಂಡ ಕೊಡಬೇಕೆಂದು ಹೇಳುತ್ತಾನೆ. ಇದರಿಂದ ನೊಂದ ದಾಸ ಆಕ್ರೋಶದಿಂದ ನಾನು ಕೊಡುವುದಿಲ್ಲ, ತೊಂದರೆ ಕೊಟ್ಟರೆ ಪೋಲಿಸ್‌ಗೆ ಕಂಪ್ಲೆಂಟ್ ಕೊಡ್ತೀನಿ ಎಂದು ಪ್ರತಿಭಟಿಸುತ್ತಾನೆ. ಆದರೆ ಅವನ ತಂದೆ ಈ ಜಾತಿ ವ್ಯವಸ್ಥೆಗೆ ಬದ್ಧನಾಗಿದ್ದು ಅದನ್ನು ಒಪ್ಪಿದ್ದಾನೆ. ಇವನ ಮಗನಾದ ದಾಸ ಅದು ಬದಲಾಗಬೇಕು, ಸಮಾನತೆ ಸಿಗಬೇಕೆಂಬ ಮನೋಭಾವ ಹೊಂದಿದ್ದಾನೆ.

ಗ್ರಾಮೀಣರಲ್ಲಿ ಜಾತಿಯೆಂಬುದು ಎಷ್ಟರ ಮಟ್ಟಿಗೆ ಪ್ರಭಾವ ಬೀರಿದೆ ಎಂಬುದನ್ನು ಕಾಣಲಾಗುತ್ತದೆ. ಆದಿಯಿಂದಲೂ ಕೆಳವರ್ಗದವರನ್ನು ನಿಕೃಷ್ಟವಾಗಿ ಕಾಣಲಾಗುತ್ತದೆ. ಇಂದು ಕೂಡ ಇದು ಸಮಾಜದ ಪ್ರಗತಿಗೆ ವಿರುದ್ಧವಾದುದು. ಈ ಜಾತಿ-ಜಾತಿ ನಡುವೆ ಇರುವ ಹೋರಾಟ ತೊಲಗಬೇಕು. ಅಂದು ಉತ್ತಮವಾದ ಸಮಾಜ ನಿರ್ಮಾಣವಾಗಲು ಸಾಧ್ಯ ಎಂಬ ಮಾತನ್ನು ಲೇಖಕರು ವ್ಯಕ್ತಪಡಿಸುತ್ತಾರೆ.

ಚಂದ್ರಪ್ಪ "ನಾನಿದನ್ನು ವಿರೋಧಿಸಬೇಕು ಇಲ್ಲದಿದ್ರೆ ಇದುವರೆಗೆ ಓದಿದುದೆಲ್ಲಾ ಪುಸ್ತಕದ ಬದಲನೇಕಾಯಿ ಆಗುತ್ತೆ" ಎಂದುಕೊಳ್ಳುತ್ತಾನೆ. ಇಲ್ಲವಾದರೆ ನಾನು ಓದಿದ್ದು ದಂಡವಾಗುತ್ತದೆ ಎಂದು ಕೊಳ್ಳುತ್ತಾನೆ.

ಕೆಳವರ್ಗದವರು ಪ್ರತಿ ಹಂತದಲ್ಲೂ ತುಳಿತಕ್ಕೆ ಒಳಗಾಗಿ ಬದುಕು ನಡೆಸುತ್ತಿದ್ದಾರೆ. ಊರಿನ ದಾಸ ಎಲ್ಲರ ಎದುರಿಗೆ ಎಲ್ಲರಿಂದ ಶೋಷಣೆಗೆ ಗುರಿಯಾದರೆ, ಎಲ್ಲೋ ಒಂದು ಕಡೆ ಹೊಲೆಯರ ಶಿವಿ ಊರಿನ ಗೌಡನ ಕಾಮುಕತೆಗೆ ಬಲಿಯಾಗುವುದನ್ನು ಕಾಣಬಹುದು. ಪ್ರತಿ ಹಂತದಲ್ಲೂ ಶೋಷಣೆಗೆ ತುಳಿತಕ್ಕೆ ಶರಣಾಗಿ, ಅಸಹಾಯಕ ಬದುಕು ಸಾಗಿಸುತ್ತಿರುವ ಕೆಳವರ್ಗದವರನ್ನು ಎಲ್ಲರಂತೆ ಅವರಿಗೆ ಉತ್ತಮವಾದ ಸ್ಥಾನಮಾನಗಳಿದ್ದರೂ, ಕಾನೂನಿನ ಬಲವಿದ್ದರೂ ರಕ್ಷಣೆ ಇಲ್ಲದಿರುವುದು ನೋಡಿದರೆ ಸಮಾಜ ಇನ್ನೂ ಅಂಧಕಾರದಲ್ಲೇ ಇದೆ ಎಂಬುದನ್ನು ತಿಳಿಯಬಹುದು. ಪಂಚಾಯ್ತಿಯಲ್ಲಿ ದಾಸನಿಗೆ ದಂಡ ಕಟ್ಟಲು ಹೇಳಿದಾಗ ಏನಾಗಬಹುದೆಂಬ ನಿರೀಕ್ಷೆಯಲ್ಲಿದ್ದ ಚಂದ್ರಪ್ಪ ಮನಸ್ಸಿನಲ್ಲಿಯೇ ಹಿಂದೆ ಎಷ್ಟು ಸಾರಿ ನೋಡಿದ್ದೆನಾದರೂ, ಆಗ ವಿಷಯದ ಬಗ್ಗೆ ಯೋಚಿಸುವ ಮನಸ್ಸು ಇರಲಿಲ್ಲ. ಇಂದು ಜನಗಳಿಗೆ ಪಂಚಾಯ್ತಿಯಲ್ಲಿ ತಿಳುವಳಿಕೆ ನೀಡಬೇಕೆಂದುಕೊಂಡಾಗ, ದಾಸನಾಡಿದ ಮಾತುಗಳು ಕೆಳವರ್ಗದವರಲ್ಲಿ ಧೈರ್ಯ ಬರುವಂತೆ ಮಾಡಿದವು.

"ಮೊದಲಿನಿಂದ ಹೊಲೆಯರನ್ನು ಕೆಳಗೆ ತುಳಿದು ದುಸ್ಥಿತಿಗೆ ತಂದವರು ನಿಮ್ಮಂಥ ಬುದ್ಧಿವಂತರು. ಅವರ್ಗೂ ನಮ್ಮ ಸರ್ಕಾರ ಎಲ್ಲಾ ಸ್ಥಾನಗಳನ್ನು ಕೊಟ್ಟಿದೆ. ಒಟ್ಟಿನಲ್ಲಿ ಅವರ್ಗೂ ನಿಮಗೂ ಈ ಭೇದ ಏಕೆ? ಎಂಬ ಚಂದ್ರಪ್ಪನ ಮಾತಿಗೆ ಜನರ ಉತ್ತರವೆಂದರೆ ಪೇಟೆಯಲ್ಲಿ ಇರುವವರಿಗೆ ಏನುಗೊತ್ತು ನಮ್ಮ ಆಚಾರ, ವಿಚಾರ, ಸಂಪ್ರದಾಯ ಎನ್ನುವ ಮನೋಭಾವ ಹಿರಿಯರದ್ದು. ಚಂದ್ರಪ್ಪನ ಮಾತಿಗೆ ಪಂಚಾಯ್ತಿಯಲ್ಲಿ ನಿರಾಕರಣೆಯ ಆಕ್ರೋಶ ವ್ಯಕ್ತವಾಗುತ್ತದೆ. ಈ ಜಾತಿಯೆಂಬುದು ನಾಶವಾಗಬೇಕಾದರೆ ಸಮಾಜದಲ್ಲಿ ಅವರಿಗೂ ಸರಿಸಮಾನವಾಗಿ ಎಲ್ಲರಂತೆ ಸ್ಥಾನಮಾನಗಳು ಜಾರಿಯಾಗಿ ಅವು ರೂಢಿಗೆ ಬರಬೇಕು. ಉತ್ತಮ ಶಿಕ್ಷಣವನ್ನು ಒದಗಿಸಿ ಇದನ್ನು ನಿರ್ಮೂಲನೆ ಮಾಡಿದಾಗ ಸಮಾಜ ಮುಂದುವರಿದು ಏಳಿಗೆ ಹೊಂದಲು ಸಾಧ್ಯ ಎಂಬುದನ್ನು ತಿಳಿಸಿದ್ದಾರೆ.

ಸಮಾಜದಲ್ಲಿ ಜಾತಿಯೆಂಬುದು ಕೆಟ್ಟ ನೀರಿನಂತೆ, ಅದಕ್ಕೆ ಕಲ್ಲೆಸೆದರೆ ಕದಡಿ ನಾತ ಹೊಡೆಯುತ್ತದೆ. ಮತ್ತೆ ತಿಳಿಯಾಗುತ್ತದೆ. ಈ ಜನರು ಸಹ ಹಾಗೆಯೇ ಕೆಟ್ಟ ನೀರನ್ನು ನಾಶ ಪಡಿಸಿದರೆ ಅಂದು ಈ ಜಾತಿಯೆಂಬ ಭೂತ ಮರೆಯಾಗುತ್ತದೆ.

ಒಬ್ಬ ಬಡ ರೈತ ತಿಮ್ಮಣ್ಣಿ ಎಂಬುವನು ಜಾತಿಯಲ್ಲಿ ಕೆಳವರ್ಗದವನಾಗಿದ್ದು ತಾನು ಒಬ್ಬ ಬೇಸಾಯಗಾರನಾಗಿ ದುಡಿದು ಬದುಕುಬೇಕೆಂಬ ಕನಸು ಕಂಡವನಿಗೆ ಆಗುವ ನಿರಾಶೆ, ತುಳಿತ ತಾರತಮ್ಯವನ್ನು ಜೀವನದ್ದುದಕ್ಕೂ ಅನುಭವಿಸುವ ಸ್ಥಿತಿಯನ್ನು 'ಇದೆಂತಹ ಬದುಕು' ಕಥೆಯಲ್ಲಿ ಕಾಣಬಹುದು.

ಹಳ್ಳಿಯಲ್ಲಿ ಹುಟ್ಟಿ ಬೆಳೆದು ಯಾರ ಹಂಗು ಇಲ್ಲದೆ ಹೊಲಗೇರಿಯ, ರಾಜನಂತೆ ಇದ್ದ ತಿಮ್ಮಣ್ಣಿ ಕಬ್ಬಿಣದ ಕೊರಡಿನಂತೆ ಇದ್ದ. ಈತ ಒಮ್ಮೆ ಗೌಡರ ಕಣ್ಣಿಗೆ ಬಿದ್ದನು. ತನ್ನ ಮನೆಯಲ್ಲಿ ದುಡಿಯಲು ಇವನೇ ಸರಿಯಾದವನು ಎಂದುಕೊಂಡು ತಿಮ್ಮಣ್ಣಿಗೆ ಇಷ್ಟವಿಲ್ಲದಿದ್ದರೂ ಅವನ ತಂದೆಯ ಜೊತೆ ವ್ಯವಹಾರ ಕುದುರಿಸಿಯೇ ಬಿಟ್ಟರು. ಗೌಡರು ಅವರಪ್ಪನ ಕೈಲಿ ಹಾಕಿದ ನೋಟುಗಳಿಂದ ಬೇರೆ ದಾರಿ ಕಾಣದೆ ತಮ್ಮ ತಂಗಿಯರ ಹಸಿದ ಮುಖಗಳು ಅವನನ್ನು ಗೌಡರಟ್ಟಿಯ ಕಡೆಗೆ ಹೆಜ್ಜೆ ಹಾಕಲು ಹೇಳಿದವು.

ಮೇಲ್ವರ್ಗದವರ ಕೈ ಕೆಳಗೆ ಬದುಕುತ್ತಿರುವ ಬಡವರು ಇಂದಿಗೂ ಕೆಳಮಟ್ಟದಲ್ಲೇ ಬದುಕುತ್ತಿದ್ದಾರೆ. ಬಡತನ, ಕಿತ್ತು ತಿನ್ನುವ ಹಸಿವು, ಎಲ್ಲವನ್ನು ನೆನೆದು ತನ್ನ ಆಸೆಗಳೆಲ್ಲವನ್ನು ಬದಿಗೊತ್ತಿ ಜೀತದಾಳಾಗಿ ದುಡಿಯುತ್ತಿರುವುದನ್ನು ಕಾಣಬಹುದು. ಇಂದಿಗೂ ಎಲ್ಲಾ ರೀತಿಯ ಸೌಲಭ್ಯ ಸವಲತ್ತುಗಳಿಂದ ವಂಚಿತರಾಗಿ ಬದುಕುತ್ತಿರುವ ಕೆಳವರ್ಗದವರು ಗ್ರಾಮೀಣ ಭಾಗದಲ್ಲಿದ್ದಾರೆ. ತಮ್ಮ ಸ್ವಾರ್ಥಕ್ಕೆ ಹಣದಾಸೆ ತೋರಿಸಿ ತಿಮ್ಮಣ್ಣಿಯನ್ನು ತಮ್ಮ ವಶಮಾಡಿಕೊಳ್ಳುವ ಇಂತಹ ಖಳರು ಗ್ರಾಮೀಣ ಜೀವನದ ಇನ್ನೊಂದು ಮುಖವಾಗಿ ಕಾಣುತ್ತಾರೆ.

ಅಂದಿನವರೆಗೆ ಇದ್ದಂತಹ ಸ್ವಾತಂತ್ರ್ಯ ಈಗ ಇಲ್ಲವಾಗಿ ಏಕೋ ಏನೋ ತಿಮ್ಮಣ್ಣಿಗೆ ಕಣ್ಣಿಂದ ನೀರು ಭೂಮಿಗಿಳಿದವು. ಗೌಡರಟ್ಟಿಯ ದನದ ಕೊಟ್ಟಿಗೆ ನೋಡೇ ಹೆದರಿದ್ದ. ಎಲ್ಲವನ್ನು ನೋಡುತ್ತಲೇ ಇಲ್ಲಿಂದ ಓಡಬೇಕು ಎಂದುಕೊಂಡಾಗ ಕಾಲುಗಳು ಮುಷ್ಕರ ಹಾಕಿದವು. ಕಾರಣ ನಾನು ಓಡಿಹೋದರೆ ಗೌಡ ತನ್ನಪ್ಪನ ಬೆನ್ನನ್ನು ತಮಟೆ ಕಾಯಿಸುವುದನ್ನು ನೆನೆದು ಮನದಲ್ಲಿ ನೊಂದುಕೊಳ್ಳುತ್ತಾನೆ.

ಸಮಾಜದಲ್ಲಿ ಎಲ್ಲರಂತೆ ಅವರಿಗೆ ಸ್ಥಾನಮಾನಗಳನ್ನು ಕೊಟ್ಟಿದ್ದರೂ ಸಹ ಅವರನ್ನು ನಿಕೃಷ್ಟವಾಗಿ ನಡೆಸಿಕೊಳ್ಳುವ, ಕೆಳಮಟ್ಟದಲ್ಲೇ ಬದುಕುವ ಸ್ಥಿತಿಯನ್ನು ಎದುರಿಸುತ್ತಿದ್ದಾರೆ. ಬಡತನವಿದ್ದರೂ ಸಹ ತಿಮ್ಮಣ್ಣಿ ನೆಮ್ಮದಿಯ ಜೀವನ ನಡೆಸುತ್ತಿದ್ದ. ಆದರೆ ಇಂದು ತಿಮ್ಮಣ್ಣಿಗೆ ಅವ್ವನ ಮಡಿಲಲ್ಲಿ ಮಲಗುವುದು, ಆಕೆಯ ಕೈತುತ್ತು ತಿನ್ನುವುದು ಇವೆಲ್ಲವು ಕನಸಿನ ಲೋಕದಂತೆ ಕಾಣುತ್ತಿವೆ. ಎಷ್ಟು ಕುರಿಗಳಾದವೋ, ಎಮ್ಮೆಗಳಾದವೋ, ತಾನು ಆ ಹಟ್ಟಿಗೆ ಬಂದು ಎಷ್ಟು ವರ್ಷವಾಯಿತೋ ದಿನ ಸೂರ್ಯ ಹುಟ್ಟುತ್ತಿದ್ದ, ಮುಳುಗುತ್ತಿದ್ದ, ಅಷ್ಟೇ ಗೊತ್ತಿದ್ದುದು. ಹಬ್ಬ ಹರಿದಿನಗಳಲ್ಲಿ ಗೌಡ ಹೊಸದೊಂದು ಅಂಗಿ ಕೊಟ್ಟರೆ ಮುಗಿಯಿತು. ಅದೇ ಜೀವನದ ತಿರುವು ಆಗಿತ್ತು. ಅವರಪ್ಪ ತಮ್ಮ ಕೇರಿಯವಳನ್ನೇ ತಂದು ತಿಮ್ಮಣ್ಣಿಗೆ ಮದುವೆ ಮಾಡಿದ, "ಹೆಂಡತಿ ಗೌಡನ ಹೊಲಗೆಲಸಮಾಡುವುದು, ತಾನು ಕುರಿ ಮೇಯಿಸುವುದು, ನಾಳೆ ಮಕ್ಕಳಾದರೆ ಅವು ಗೌಡರಟ್ಟಿಯ ಸಗಣಿಬಾಚಬೇಕು. ಯಾಕೋ ಏನೋ ಸಾಯುವವರೆಗೂ ಗೌಡರಟ್ಟಿಯ ಸಂಬಂಧ ಕಳಚಲಾರದು ಎಂದು ಗೊತ್ತಾದಾಗ ಹೌಹಾರಿದ". ಬೇಸಾಯಗಾರನಾಗಿ ದುಡಿದು

ಬದುಕಬೇಕೆಂದು ಕೊಂಡವನಿಗೆ ಎಲ್ಲ ತನ್ನ ಕುಟುಂಬವೇ ಗೌಡರಟ್ಟಿಯಲ್ಲಿ ಸಾಯುವವರೆಗೆ ದುಡಿಯಬೇಕೋ, ಎಂದುಕೊಂಡು ತಲೆಯಲ್ಲಿ ಚಿಂತೆ ಕೊರೆಯತೊಡಗಿತು. ಇದೆಲ್ಲದರ ಜೊತೆಗೆ ತಿಮ್ಮಣ್ಣಿಗೆ ಮತ್ತೊಂದು ಆಘಾತ ಎದುರಾಗುತ್ತದೆ. ತನ್ನ ಹೆಂಡತಿಗೆ ಗೌಡನ ಮಗನ ಜೊತೆ ಇದ್ದ ಅಕ್ರಮ ಸಂಬಂಧವನ್ನು ತಿಳಿದು ತಿಮ್ಮಣ್ಣಿಗೆ ಅಪಾರವಾದ ನೋವಾಗಿ ಜೀವನವೇ ಬೇಡವಾಗುತ್ತದೆ.

ತಾನು ಮದುವೆಯಾದ ಮೇಲೆ ಈ ಬಂಧನದಿಂದ ಬಿಡುಗಡೆ ಹೊಂದಬಹುದೆಂಬ ನಿರೀಕ್ಷೆಯಲ್ಲಿದ್ದ ತಿಮ್ಮಣ್ಣಿಗೆ ಹೆಂಡತಿಯ ಅಕ್ರಮ ಸಂಬಂಧದಿಂದ ತಿಮ್ಮಣ್ಣಿಯ ಕುಟುಂಬವೇ ತುಳಿತಕ್ಕೆ ಒಳಗಾಗಿರುವುದನ್ನು ಕಾಣಬಹುದು. ಶ್ರೀಮಂತರ ದರ್ಪ ದೌರ್ಜನ್ಯಕ್ಕೆ ಬಲಿಯಾಗುತ್ತಿರುವ ಕೆಳವರ್ಗದವರನ್ನು ವ್ಯವಸ್ಥೆಯ ಜೊತೆಗಿನ ಹೋರಾಟವೆಂಬುದಾಗಿ ಚಿತ್ರಿಸಿದ್ದಾರೆ. ತಿಮ್ಮಣ್ಣಿಯಂತಹ ಅಸಹಾಯಕ ಸ್ಥಿತಿಯಲ್ಲಿ ಬದುಕು ನಡೆಸುತ್ತಿರುವವರನ್ನು ಪ್ರಸ್ತುತದಲ್ಲೂ ಕಾಣಲಾಗುತ್ತದೆ. ತನ್ನ ಕೋಪ, ನೋವು, ನಿರಾಶೆ ಎಲ್ಲವನ್ನು ಹೆಂಡತಿಯ ಮೇಲೆ ತೋರುತ್ತಾನೆ. ಇನ್ನು ತನಗೂ ಗೌಡನಿಗೂ ಯಾವ ಸಂಬಂಧವಿಲ್ಲವೆಂದುಕೊಂಡು ಕೈ ಬಿಡಬೇಕೆಂದುಕೊಂಡ . ಆದರೆ ಗೌಡನ ವ್ಯವಹಾರ ಬುದ್ಧಿಯೇ ಬೇರೆಯಾಗಿತ್ತು.

ಗೌಡ, ಗೌಡನ ಮಗನ ತುಳಿತಕ್ಕೆ ಬಲಿಯಾಗಿ ಜಂಜಾಟದ ಬದುಕು ಸಾಗಿಸುತ್ತಿದ್ದ ತಿಮ್ಮಣ್ಣಿಗೆ ಹಂತ ಹಂತವಾಗಿ ಬದುಕಿನಲ್ಲಾದ ಘಟನೆಗಳಿಂದ ಜೀವನವೇ ಬೇಡವಾಗಿತ್ತು. ತಾನು ಗೌಡನ ಸ್ವಾರ್ಥಕ್ಕೆ ಬಲಿಯಾಗಿದ್ದು, ಹೆಂಡತಿ ಗೌಡನ ಮಗನ ಕಾಮುಕತೆಗೆ ಬಲಿಯಾಗಿದ್ದು, ಹೆಂಡತಿ ಗೌಡನ ಮಗನ ಕಾಮುಕತೆಗೆ ಬಲಿಯಾಗಿ ಕೆಲಸದವನ ಜೊತೆ ಓಡಿ ಹೋಗಿದ್ದು, ಇದ್ದ ಒಬ್ಬನೇ ಮಗನ ಸಾವು ಎಲ್ಲವೂ ಅವನ ಬದುಕಿನಲ್ಲಿ ಆಟವಾಡಿದ ಮೋಸದ ಕೈಗಳು ಅವನನ್ನು ಸಾರಾಯಿಗೆ ಬಲಿಕೊಟ್ಟವು. ತನ್ನ ಜೀವನದ ಪ್ರತಿ ಹಂತದಲ್ಲೂ ತುಳಿತಕ್ಕೊಳಗಾದ ಭಾವನೆ ಗೌಡ, ಗೌಡನ ಮಗ ಜ್ಞಾಪಕಕ್ಕೆ ಬರುತ್ತಾರೆ. ಸಿಕ್ಕರೆ ಕತ್ತರಿಸಿ ಕುರಿ ಚರ್ಮ ಸುಲಿದ ಹಾಗೆ ಸುಲಿದು ಹಾಕುವಷ್ಟು ಆಕ್ರೋಶ ಹುಟ್ಟುತ್ತದೆ.

ಸಮಾಜದಲ್ಲಿ ಒಬ್ಬ ಕೆಳವರ್ಗದವನ ಸ್ಥಿತಿಯನ್ನು ಅವನು ಎದುರಿಸುತ್ತಿರುವ ಸಮಸ್ಯೆಯನ್ನು ಇಂದಿಗೂ ಕಾಣಲಾಗುತ್ತಿದೆ. ಸಮಾಜ ಬದಲಾವಣೆಯನ್ನು ಕಂಡರೂ ಸಹ ಗ್ರಾಮೀಣರಲ್ಲಿ ಅವರನ್ನು ನಿಕೃಷ್ಟವಾಗಿ ಕಂಡು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿರುವುದು ಗೌಡ, ಗೌಡನ ಮಗನಂತಹವರು ಸಮಾಜಕ್ಕೆ ಮಾರಕವಾಗುತ್ತಾರೆ ಎಂದು ತಿಳಿಸಿದ್ದಾರೆ.

ಗ್ರಾಮೀಣ ಸಮಾಜದಲ್ಲಿ ಹಿಂದಿನಿಂದಲೂ ಮೇಲ್‌ವರ್ಗದವರ ಕೆಳಗೆ ಬದುಕು ನಡೆಸುತ್ತಿರುವ ಕೆಳವರ್ಗದವರನ್ನು ಇಂದಿಗೂ ಸಹ ಸಮಾಜದಲ್ಲಿ ಅವರನ್ನು ಯಾವ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದಾರೆ ಎಂಬುದನ್ನು **"ಸೂರು"** ಕಥೆಯಲ್ಲಿ ಕೆಳವರ್ಗದವನ ಸ್ಥಿತಿಯನ್ನು ಹತ್ತಿರದಿಂದ ಕಂಡು ಕೇಳಿದ ಸಂಗತಿಗಳನ್ನು ಮನ ಮಿಡಿಯುವಂತೆ ಚಿತ್ರಿಸಿದ್ದಾರೆ.

ಕೆಳವರ್ಗದವನಾದ ಕದ್ಲಿಯನ್ನು ಎಲ್ಲೋ ಅಳುತ್ತಾ ನಿಂತಿದ್ದವನನ್ನು ಕರೆದುಕೊಂಡು ಬಂದು ಹೊಲಗೇರಿಯಲ್ಲಿ ಶೆಡ್ಡಾಕಿ ಇರಿಸಿದ್ದರು. ಕದ್ಲಿಯ ಹೆಂಡ್ತಿ ಮಕ್ಕಳು ಅದನ್ನೇ ಅರಮನೆ ಅಂತ ತಿಳ್ಕೊಂಡು ಗೌಡನ ಮನೆಯಲ್ಲಿ ದುಡಿದು, ಹೆಂಗೋ ಜೀವನದ ಗಾಲಿ ಮುಂದೆ ಹೋಗುತ್ತಿತ್ತು. ಇರುವಷ್ಟೇ ಜಾಗದಲ್ಲಿ ಐದಾರು ಮಕ್ಕಳಾದವು. ಅತಿಯಾದ ಮಳೆಯಿಂದಾಗಿ ಕದ್ಲಿಯ ಸಡ್ಡಿಗೆ ನೀರು ತುಂಬಿ ಗೌಡರ ಜಮೀನಲ್ಲಿ ಜಾಗ ಪಡೆದು ಒಂದು ಸೂರು ಮಾಡಿಕೊಂಡರೆ, ಸಾಕು ಎಂದು ಕೊಳ್ಳುತ್ತಾ ಗೌಡರನ್ನು ಕೇಳಲು ಕುಟುಂಬ ಸಮೇತ ಬಂದು ಗೌಡರ ಮನೆಯ ಮುಂದೆ ಏನಾದರಾಗಲಿ, ಗೌಡ್ರು ಒಂದೇಟು ಹೊಡೆದರೂ

ಪರವಾಗಿಲ್ಲ. ಎಂದು ಕೊಳ್ಳುತ್ತಾ ಗೌಡರನ್ನು ಕೇಳಲು ಗೌಡರ ಮನೆಯ ಮುಂದೆ ನಿಂತರು. ನಿಂತಿದ್ದ ಕದ್ಲಿಗೆ ಗೌಡರು ಬೆಳೆ ಮಾಡಲು ಆಗದೆ ಪಾಳು ಬಿದ್ದ ಜಾಗವನ್ನು ಗುಣಿಸಿ ಭಾಗಿಸಿ ಕೂಡಿ ಆಯ್ತು ಎಂದಾಗ ಕದ್ಲಿ ಮತ್ತು ಅವನ ಹೆಂಡತಿಯ ಮುಖದಲ್ಲಿ ಸಂತಸಕಂಡಿತ್ತು.

ಗೌಡರ ಮಾತಿನಿಂದ ಬದುಕಿನಲ್ಲಿ ಒಂದು ನೆಲೆ ಕಾಣುವ ಆಸೆಯನ್ನು ಕಂಡು ಕಲ್ಲು ಗುಂಡು ಎನ್ನದೆ, ಹಗಲು ರಾತ್ರಿಯೆಲ್ಲಾ ಆ ಜಾಗವನ್ನು ಸಮ ಮಾಡಿ ದುಡಿದು ಒಂದು ಮಟ್ಟ ಮಾಡಿದ್ದನ್ನು ನೋಡಿದ ಗೌಡರು ಆಶ್ಚರ್ಯಗೊಂಡರು. ಇದರ ಜೊತೆ ಕದ್ಲಿಯ ಮಗ ಸೀರ ದಿನವಿಡೀ ಗೌಡರಟ್ಟಿಯಲ್ಲಿ ದುಡಿದು, ಜೊತೆಗೆ ತನ್ನಟ್ಟಿಯಲ್ಲಿ ಬಂದು ದುಡಿಯುವುದು, ಈ ಜಂಜಾಟದ ನಡುವೆಯೂ ಮನದ ಮೂಲೆಯಲ್ಲಿ ತನ್ನದೊಂದು ಸೂರು ಆಗುತ್ತದೆ ಎಂಬ ಆಶಾಗೋಪುರ ಕಟ್ಟಿಕೊಂಡಿದ್ದನು.

ಗ್ರಾಮೀಣ ಸಮಾಜದಲ್ಲಿ ಕೆಳವರ್ಗದವರಿಗೂ ಎಲ್ಲಾ ಸವಲತ್ತು ಸೌಲಭ್ಯಗಳು ಇದ್ದರೂ, ಅವು ಸಿಗದೆ ವಂಚಿತರಾಗಿ ಮೇಲ್‌ವರ್ಗದವರ ಕೆಳಗೆ ಬದುಕು ನಡೆಸುವ ಕೆಳವರ್ಗದವರ ಸ್ಥಿತಿ ಇಂದಿಗೂ ಚಿಂತಾಜನಕವಾಗಿರುವುದನ್ನು ಕಾಣಬಹುದು. ತನ್ನನ್ನು ತಂದು ಸಾಕಿದ ಋಣಕ್ಕೆ ಜೀವಮಾನವೆಲ್ಲಾ, ಗೌಡರಟ್ಟಿಯಲ್ಲಿ ದುಡಿಯುವ ಸೀರನಂತಹವರನ್ನು ಪ್ರಸ್ತುತ ಗ್ರಾಮೀಣರಲ್ಲಿ ಗುರುತಿಸಬಹುದು. ತನ್ನ ಕುಟುಂಬದವನಂತೆ ಗೌಡ ಭೂಮಿಯನ್ನು ಕೊಟ್ಟು ಕೆಳವರ್ಗದವನ ಮೇಲೆ ಕರುಣೆ ತೋರಿ, ತಮ್ಮ ಹೊಲದ ಮಧ್ಯದಲ್ಲಿದ್ದ ಕಲ್ಲು ಗುಂಡುಗಳನ್ನೆಲ್ಲಾ ಹೊಡೆದು ತಂದು ಗೋಡೆ ಕಟ್ಟಿಕೊಳ್ಳಿ ಎಂದು ಹೇಳಿದ ಉದ್ದೇಶವೇ ಬೇರೆಯಾಗಿತ್ತು. ಎಲ್ಲಾ ಮುಗಿದು, ಎಷ್ಟು ಬೇಗ ಗೂಡು ಸೇರುವುದೆಂಬ ಚಿಂತೆ ಕದ್ಲಿಯಲ್ಲಿ ಕಾಡುತ್ತಿತ್ತು.

ತಮ್ಮ ಸ್ವಾರ್ಥಕ್ಕೆ ತಾವು ಮಾಡಲು ಆಗದೆ ಇದ್ದ ಭೂಮಿಯನ್ನು, ಎಲ್ಲಾ ವಿಧವಾಗಿ ತಯಾರು ಮಾಡಿಸಿಕೊಂಡು ಎಲ್ಲಾ ಮುಗಿದು ಸೂರು ಸೇರುವ ವೇಳೆಗೆ ಗೌಡನ ಮಕ್ಕಳು ವಾಗ್ವದಕ್ಕೆ ಇಳಿಯುತ್ತಾರೆ. ದುಡ್ಡಿಲ್ಲ, ಕಾಸಿಲ್ಲ, ಎಲ್ಲಾ ಕೊಟ್ಟು ಮನೆ ಕಟ್ಟಿದ್ದರಿಂದ ಅವರ ಕಣ್ಣು ಕಿಸಿರಾಗ ತೊಡಗಿದವು. ಸಾಲ ತೀರುವವರೆಗೆ ಆ ಹಟ್ಟಿಯಲ್ಲಿ ಇರಬಾರದು ಎಂದ ಮಾತು ಕದ್ಲಿಗೆ ಆಕಾಶವೇ ಕಳಚಿ ಬಿದ್ದ ಹಾಗಾಯಿತು. ಒಂದು ಕ್ಷಣ ನಿಂತ ನೆಲ ಬಿರುಕು ಬಿಟ್ಟ ಹಾಗಾಯಿತು. ಮನದ ಮೂಲೆಯಲ್ಲಿ ಮೂಡಿದ ಆಶಾಕಿರಣ ಮಿಂಚಿ ಮರೆಯಾಯಿತು.

ಕೆಳವರ್ಗದವರೂ ಎಲ್ಲರಂತೆ ಒಂದು ಉತ್ತಮ ಸ್ಥಾನಕ್ಕೆ ಬರುವ, ಬದುಕುವ ನಿರೀಕ್ಷೆಯನ್ನು ನೋಡುವ ಸಮಾಜದಲ್ಲಿ ಅವರನ್ನು ಒಂದಲ್ಲಾ ಒಂದು ಕಡೆ ಶೋಷಣೆ ಮಾಡಿ ತಾವು ಬದುಕುವ ಸ್ವಾರ್ಥಿ, ಜನರನ್ನು ಕಾಣಬಹುದು. ಕೇವಲ ಬದುಕಲು ಹಗಲು ರಾತ್ರಿಯೆನ್ನದೆ ಕಲ್ಲಿನಂತೆ ಇದ್ದ ಭೂಮಿಯನ್ನು ನೀರಿನಂತೆ ಕರಗಿಸಿ, ದುಡಿದು ಮಾಡಿದ ಭೂಮಿಯನ್ನು ಸಹಿಸದೆ, ಗೌಡನ ಮಕ್ಕಳು ಆಡಿದ ಮಾತಿಂದ ಕದ್ಲಿಯ ಮನಸ್ಸು ಒಡೆದು, ಧೂಳಿನಲ್ಲಿ ಬಿದ್ದು ಹೊರಳಾಡುತ್ತಾನೆ. ಗೌಡರು ಕದ್ಲಿ ಹಟ್ಟಿ ಕಟ್ಟಲು ಜಮೀನು ಕೇಳಿದಾಗ ಹೌಹಾರಿದ್ದರು. ನಾನು ಜಮೀನು ಕೊಡುವುದೇ ಎಂದು: ಆದರೆ ಹುಟ್ಟಿನಿಂದ ಆ ಜಮೀನಿಗೆ ಹಾರೆ ಗುದ್ದಲಿ ತೋರಿಸಿರಲಿಲ್ಲ. ಹಾಗೆ ಕಲ್ಲು ಗುಂಡು ತುಂಬಿ ಮೆಳೆ ಬೆಳೆದುಕೊಂಡು ಕಾಲಿಡುವುದಿರಲಿ, ನೋಡುವುದಕ್ಕೇ ಭಯಂಕರವಾಗಿತ್ತು. ಕಟ್ಟಿ ಕಟ್ಟುವುದಿರಲಿ, ಅದನ್ನು ಒಂದು ಲೆವಲ್ ಮಾಡಲು ಸಾಧ್ಯವಿಲ್ಲ ಎಂದು ಕೊಂಡಿದ್ದ ಗೌಡರಿಗೆ ಆದದ್ದೇ ಬೇರೆ.

ಸಮಾಜ ಎಷ್ಟೇ ಬದಲಾವಣೆಗೊಂಡರೂ ಇಂತಹ ಘಟನೆಗಳು ನಡೆಯುತ್ತಲೇ ಇವೆ. ಕೆಳವರ್ಗದವರ ತುಳಿತ, ನೋವು, ಹತಾಶೆಯನ್ನು ಕದ್ಲಿಯ ಮಗ ಸೀರನಲ್ಲಿ ಕಾಣಬಹುದು.

ಮೇಲ್ವರ್ಗದವರ ತುಳಿತಕ್ಕೆ ಸಿಕ್ಕಿ ಇಂತಹ ಎಷ್ಟೋ ಬಡ ಕುಟುಂಬಗಳು ಬದುಕು ಸಾಗಿಸುವುದರಿಂದ ಸಮಾಜದ ಉತ್ತಮ ಪ್ರಗತಿಗೆ ಹಾನಿಯುಂಟಾಗುತ್ತಿದೆ.

ಹಗಲು ರಾತ್ರಿಯೆನ್ನದೆ ದುಡಿದು ಒಮ್ಮೆ ತನ್ನ ಕೈ ನೋಡಿಕೊಂಡ, ಸೀರನ ಕೈ ಒಪ್ಪಳೆ ಹೊಡೆದು ರಕ್ತ ಜಿನುಗುತ್ತಿತ್ತು. ಹೊಲೆಯರಾದರೇನು, ತನ್ನ ಕೈಯಿಂದ ಸೋರುತ್ತಿರುವುದು ಅದೇ ಕೆಂಪು ರಕ್ತವಲ್ಲವೇ? ಇಂತಹ ಒಬ್ಬ ಅಮಾಯಕನ ನೋವು, ಅಕ್ರೋಶ, ಒಮ್ಮೆ ಸಿಡಿದು ತನಗೆ ಸಿಕ್ಕಿದ್ದು ಅವರಿಗೂ ಸಿಗಬಾರದು ಎಂದು ಎಲ್ಲವನ್ನು ತನ್ನೆದುರಿಗೆ ಉರುಳಿಸಿದ.

ಗ್ರಾಮೀಣ ಸಮಾಜ ಆಧುನಿಕತೆಯತ್ತ ಮುಖ ಮಾಡಿದರೂ, ಸಹ ಮೇಲ್‌ವರ್ಗದವರ ತುಳಿತಕ್ಕೆ ಸಿಲುಕಿ ಜೀವನದುದ್ದಕ್ಕೂ ಅನುಭವಿಸುವ ಕ್ರೌರ್ಯ ಅಸಹಾಯಕತೆಯನ್ನು ಕೆಳವರ್ಗದವರ ಬದುಕಿನಲ್ಲಿ ಕಾಣುತ್ತಿದ್ದೇವೆ. ಎಲ್ಲರಂತೆ ಬದುಕಲು ಒಂದು ಸೂರು ಕಟ್ಟಿದ ಕೆಳವರ್ಗದವನ ಸ್ಥಿತಿ ಕೆಳಮಟ್ಟದಲ್ಲೇ ಇರಬೇಕು ಎನ್ನುವ ಮೇಲ್‌ವರ್ಗದವರಾದ ಗೌಡ, ಗೌಡನ ಮಕ್ಕಳು ಅವರು ಕಟ್ಟಿದ ಗೋಪುರಕ್ಕೆ ನೀರೆರೆಚಿದರು. ಇಂತಹ ಮೋಸ, ವಂಚನೆ, ಅಸೂಯೆಯಿಂದ ಕೂಡಿದ ಗ್ರಾಮೀಣರ ಚಿಂತನೆಯಲ್ಲಿ ಬದಲಾವಣೆಗೊಂಡು ತಾವು ಬದುಕಿ, ಎಲ್ಲರೂ ಬದುಕಬೇಕೆಂಬ ಮನೋಭಾವ ಬೆಳೆದಾಗ ಕೆಳವರ್ಗದವರ ಜೀವನ ಸುಧಾರಿಸುತ್ತದೆ.

ಸಮಾಜದಲ್ಲಿ ಬದುಕುತ್ತಿರುವ ಅದರಲ್ಲೂ ಗ್ರಾಮೀಣ ಸಮಾಜದಲ್ಲಿರುವ ಹೆಣ್ಣಿನ ಜೀವನ ತುಂಬಾ ಶೋಚನೀಯವಾಗಿದೆ. ಅತಿಯಾದ ಮೂಢನಂಬಿಕೆ, ಸಂಪ್ರದಾಯ, ನಂಬಿಕೆಗಳ ಜೊತೆ ಬದುಕು ಸಾಗಿಸುವ ಗ್ರಾಮೀಣರಲ್ಲಿ ಹೆಣ್ಣು ಸಹಜವಾಗಿ ಸಾವು ಬಂದು ಸತ್ತರೆ ಇಲ್ಲಸಲ್ಲದ ಅಪವಾದಗಳಿಗೆ ಗುರಿಯಾಗುವುದು ಮತ್ತು ನಂಬಿಕೆಗಳ ಜಾಡಿನಲ್ಲಿ ತಮ್ಮ ಕುಟುಂಬಗಳಲ್ಲಿ ವಿರಸ ಉಂಟಾಗಿ ಕೊನೆಗೆ ಕುಟುಂಬವೇ ಸಾವನ್ನಪ್ಪುವುದನ್ನು **'ಒಂದು ಹೆಣ್ಣಿನ ಕಥೆ'**, ಮತ್ತು **'ದೇವರು ಹೇಳಿದ್ದು'** ಕಥೆಯಲ್ಲಿ ಕಾಣಬಹುದು.

ಸಂಪ್ರದಾಯಗಳೊಂದಿಗೆ ಬದುಕು ಸಾಗಿಸುವ ಗ್ರಾಮೀಣರಲ್ಲಿ ಸಹಜವಾಗಿ ಸಾವು ಬಂದು ಸತ್ತರೆ ಇಲ್ಲ ಸಲ್ಲದ ಅಪವಾದಗಳನ್ನು ಹೊತ್ತುಕೊಳ್ಳುವುದನ್ನು 'ಒಂದು ಹೆಣ್ಣಿನ ಕಥೆಯಲ್ಲಿ' ಕಾಣಬಹುದು. "ಮನಸ್ಸಿಗೇಕೋ ಮುಜುಗರವಾಗುತ್ತಿದೆ. ಬೀದಿಗಳಲ್ಲಿ ವಿದ್ಯುತ್ ಕಂಬಗಳಿದ್ದರೂ ದೀಪಗಳಿಲ್ಲದ್ದರಿಂದ ಉದ್ದಕ್ಕೆ ನಿಂತ ಕಲ್ಲುಗಳನ್ನು ಎಡವುತ್ತಾ ಊರನ್ನು ನೋಡಿದರೆ ಮನಸ್ಸಿಗೇಕೋ ಮರುಕಹುಟ್ಟುತ್ತದೆ. ಮುಂದಿನ ಮನೆಯ ಗೌರಿಯ ಸಾವು ಎಲ್ಲರನ್ನು ಚಿಂತೆಗೀಡು ಮಾಡಿತು. ಗೌರಿ ಎಂತಹ ಹೆಣ್ಣು, ನಿಜವಾಗಿಯೂ ಊರಿಗೆ ಒಂದೇ ಹೆಣ್ಣೆಂದರೆ ಅವಳೊಬ್ಬಳೇ, ಅವಳಿಗೇನಾಗಿತ್ತೋ ಗೊತ್ತಿಲ್ಲ, ಬಹುಶಃ ಖಾಯಿಲೆ ಇರಬಹುದು. ಆ ದೇವರಿಗೆ ಕರುಣೆ ಇಲ್ಲವೇನೋ, ಜಗತ್ತಿನಲ್ಲಿ ಒಳ್ಳೆಯವರನ್ನೆಲ್ಲಾ ಕರೆದುಕೊಂಡು ಕೆಟ್ಟವರನ್ನು ಭೂಮಿಯ ಮೇಲಿರಿಸಿ ಜಗತ್ತಿನಲ್ಲೆಲ್ಲಾ ಪ್ರಳಯತರಬೇಕೆಂದಿದ್ದಾನೇನೋ" ಎಂಬ ಮಾತುಗಳು ವಾಸ್ತವತೆಗೆ ಹತ್ತಿರವಾಗಿ ಕಾಣುತ್ತವೆ. ಗಂಡ ಹೆಂಡಿರ ಜಗಳದಲ್ಲಿ ಮೂಕ ಪ್ರೇಕ್ಷಕಳಂತೆ ನಿಲ್ಲುತ್ತಿದ್ದ ಗೌರಿಯನ್ನು ನೆನೆದರೆ ಮರುಕ ಹುಟ್ಟುತ್ತಿತ್ತು.

ಇಂತಹ ಹೆಣ್ಣು ಸಹಜವಾಗಿ ಸಾವು ಬಂದು ಸತ್ತಾಗ ಆಗುವ ಶೋಷಣೆ, ಗಂಡಿನಂತೆ ಮನೆಯ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದ ಮುಗ್ದ ಹೆಣ್ಣು ಗೌರಿಗೆ ಮದುವೆ ಗೊತ್ತಾದ ಮೇಲೆ ಸತ್ತದ್ದರಿಂದ, ಊರಿನ ಹಿರಿಯರು ಅದಕ್ಕೆ ಮದುವೆ ಆಗಿಲ್ಲ. ಚೊಟ್ಟ ಕಟ್ಟಬಾರದು. ಕೆಲವರು ಕಟ್ಟಬೇಕು ಎಂಬೆಲ್ಲಾ ಪದ್ಧತಿಗಳನ್ನು ನೋಡಿದರೆ ಮರುಕು ಹುಟ್ಟುತ್ತಿತ್ತು.

"ಸತ್ತ ಹೆಣಗಳನ್ನು ಮುಚ್ಚಿಟ್ಟು ಹಳೆಯ ಪದ್ಧತಿಗಳನ್ನು ಎತ್ತಿ ಹಿಡಿದು ದೊಡ್ಡತನವನ್ನು ತೋರಿಸಿಕೊಳ್ಳುವ ಊರಿನ ಹಿರಿಯರ ಬಗ್ಗೆ ಯೋಚಿಸಿದಾಗ ಬೇಸರವಾಗುತ್ತದೆ. ಯಾವ ಬಡ್ಡೀ ಮಗ ಇವೆಲ್ಲವನ್ನು ರೂಪಿಸಿದ ಎಂದೆನಿಸಿ ಮನಸ್ಸಿನಲ್ಲೇ ಶಪಿಸುತ್ತೇನೆ. ಇಂತಹ ಕ್ರೂರ ಪದ್ಧತಿಗಳನ್ನು ತೊಡೆದು ಹಾಕುವ ಮಾರ್ಗ ತಿಳಿಯದಾದಾಗ ಮೈ ಪರಚಿಕೊಳ್ಳುವಂತಾಗುತ್ತದೆ". ಈ ಮಾತುಗಳನ್ನು ಗಮನಿಸಿದಾಗ ಹಳ್ಳಿಯಲ್ಲಿರುವ ಕೆಟ್ಟ ಪದ್ಧತಿಗಳು , ಆಚರಣೆಗಳು ಎಷ್ಟರ ಮಟ್ಟಿಗೆ ಪ್ರಭಾವ ಬೀರಿವೆ ಎಂಬುದನ್ನು ಗುರುತಿಸಬಹುದು. ಹೆಣ್ಣು ಸಹಜವಾಗಿ ಸತ್ತಾಗ ಎದುರಾಗುವ ಕ್ರೂರ ಪದ್ಧತಿಗಳು, ಅಪವಾದಗಳನ್ನು ನೋಡಿದರೆ ಹೆಣ್ಣು ಎಲ್ಲರಿಂದ ಪ್ರತಿ ಹಂತದಲ್ಲೂ ಶೋಷಣೆಗೆ ತುಳಿತಕ್ಕೆ ಗುರಿಯಾಗುವುದನ್ನು ಗ್ರಾಮೀಣರಲ್ಲಿ ಶಿಕ್ಷಣ ಕಲಿತ ವ್ಯಕ್ತಿಯಿಂದ ವಿರೋಧಿಸಲಾಗದಷ್ಟು ಆಳವಾದ ಬೇರನ್ನು ಬಿಟ್ಟಿದೆ ಎಂಬುದು ವ್ಯಕ್ತವಾಗುತ್ತದೆ.

ಸಮಾಜದಲ್ಲಿರುವ ಕೆಟ್ಟ ಆಲೋಚನೆಗಳಿಂದ ಮುಗ್ದ ಹೆಣ್ಣಿನ ಮೇಲೆ ಮಾಡುವ ಅಪನಿಂದೆಯಿಂದ ಸಮಾಜದಲ್ಲಿ ಹೆಣ್ಣನ್ನು ಕೆಳಮಟ್ಟದಲ್ಲಿ ಕಾಣಲು ಕಾರಣವಾಯಿತು. ಹಳ್ಳಿಯ ಜನರೇ ಈ ರೀತಿ ಅದರಲ್ಲೂ ಹೆಂಗಸರು ಆಡುವ ಮಾತುಗಳು

"ಅದೇನೋ ಅವಳು ಔಷಧಿ ನುಂಗಿದ್ಲಂತೆ ಕಾಣಕ್ಕು !

ಯಾರ್ಗೆಳ್ತಾ ಇದ್ದೀ?

ಯಾರನೂ ಕಾಣದ ಮಳ್ಳಿ ನೀನು, ಅದೇನೋ ಹೇಳ್ತಾರಲ್ಲ, ಮಳ್ಳಿ ಮಳ್ಳಿ ಮಂಚಕ್ಕೆಷ್ಟು ಕಾಲು ಎಂದರೆ ಮೂರು ಮತ್ತೊಂದು ಅಂತ ಅನ್ತಿದ್ದಳಂತಲ್ಲ ಅವಳ್ಯಾರೋ, ಹಂಗೆ

ಯಾರ ಇಷ್ಯಾ ಹೇಳ್ತಾ ಇದ್ದೀಲೆ?

ಅದೇ, ಆ ಗೌರಿದು !

ಅವಳ್ಗೇನು ಬಂದಿತ್ತು ದೊಡ್ಡ ರೋಗ ಔಷಧಿ ನುಂಗುವಂತದ್ದು? ಬುಡು ಬುಡು ಜನ ನಂಬು ಮಾತೇ ಇದು? ನಂಬುದ್ರೆ ನಂಬು ಬುಟ್ರೆ ಬುಡು ನಂಗಂತೂ ಯಾರೋ ಹೇಳಿದ್ದು, ಮೊದ್ಲೇನೋ ಸುಳ್ಳು ಅಂತ ಇದ್ದೆ, ಆಮೇಲೆ ಸುಳ್ಳು ಅಲ್ಲ ಗಿಳ್ಳು ಅಂತ ಗೊತ್ತಾಯ್ತು" ಈ ರೀತಿಯ ಮಾತುಗಳು ಹೆಣ್ಣಿನ ಜೀವನದ ಮೇಲೆ ಬೀರುವ ಪರಿಣಾಮವನ್ನು, ಗ್ರಾಮೀಣರಲ್ಲಿ ಹೆಣ್ಣಿನಿಂದ ಹೆಣ್ಣಿಗೆ ಆಗುವ ಶೋಷಣೆಯನ್ನು ಪ್ರಸ್ತುತ ಸಮಾಜದಲ್ಲಿ ಕಾಣಬಹುದಾಗಿದೆ. ಹಳ್ಳಿಯ ಜನರೇ ಈ ರೀತಿ ಅದರಲ್ಲೂ ಹೆಂಗಸರು ಸ್ವಲ್ಪ ಮಾತಿಗೆ ಜಗಳ ತಂದು ಗಂಡಸರಿಗೆ ತಲೆ ಹೋಗುವ ಹಾಗೆ ಮಾಡಬಲ್ಲರು.

"ಆದರೆ ಇಲ್ಲಿ ಸತ್ತವಳು ಹೆಣ್ಣು, ಸಾಯಿಸಿದವಳೂ ಹೆಣ್ಣೇ, ಅವಳ ಮೇಲೆ ಅಪರಾಧದ ಹೊರೆ ಹೊರಿಸಿದವಳೂ ಹೆಣ್ಣೇ ! ಅದಕ್ಕೆ ಹಿಂದಿನವರು, ಹೆಣ್ಣನ್ನು ಅಂಕೆಯಲ್ಲಿಡಲು ಶ್ರಮವಹಿಸಿ ಕೆಳಗೆ ತುಳಿದಿದ್ದರು. ಇಲ್ಲದಿದ್ದರೆ ಇಷ್ಟರಲ್ಲಾಗಲೇ ಕಡಿವಾಣವಿಲ್ಲದ ಕುದುರೆಯಂತೆ ಭೂಮಿ ಯುದ್ಧ ಕ್ಷೇತ್ರವಾಗುತ್ತಿತ್ತೇನೋ" ಸಮಾಜದಲ್ಲಿ ಈ ರೀತಿಯ ನಂಬಿಕೆಗಳು ಮನೆ ಮಾಡಿರುವುದರಿಂದಲೇ ಹಿರಿಯರು ಹೆಣ್ಣನ್ನು ನಿಕೃಷ್ಟವಾಗಿ ಕಂಡು ತಮ್ಮ ಅಡಿಯಾಳಾಗಿ ಇಟ್ಟಿದ್ದರು. ಸಮಾಜ ಬದಲಾವಣೆಗೊಂಡರೂ ಈ ನಿಂದನೆಗಳಿಂದ ಹೆಣ್ಣು ಪರಿತಪಿಸುವ ಸ್ಥಿತಿಯನ್ನು ಕಾಣಬಹುದು.

ಗ್ರಾಮೀಣ ಸಮಾಜದಲ್ಲಿ ಗೌರಿಯಂತಹ ಎಷ್ಟೋ ಹೆಣ್ಣುಗಳು ಈ ರೀತಿಯ ಅಪವಾದಗಳಿಗೆ ಬಲಿಯಾಗುವುದನ್ನು ಕಾಣಬಹುದು. ಅತಿಯಾದ ಮೂಢನಂಬಿಕೆಯಿಂದ ಗೌರಿ ಗಾಳಿಯಾಗಿ

ಜೊತೆಗಾತಿಯಾದ ನಿಂಗಿಯ ಮೇಲೆ ಬರುವುದು. ಯಾರೋ ಗೊತ್ತಿಲ್ಲದವನ ಜೊತೆ ಅಕ್ರಮ ಸಂಬಂಧದ ಮಾತುಗಳು ಎಲ್ಲವು ಗೌರಿನ್ನು ಸೂಳೆಯಾಗಿ ಗಾಳಿಯಾಗಿಸಿದವು. ಇಂತಹ ನಿಂದನೆಗೆ ಹೆಣ್ಣು ಗುರಿಯಾಗುತ್ತಲೇ ಬಂದಿದ್ದಾಳೆ.

ಗ್ರಾಮೀಣರಲ್ಲಿ ಮುಗ್ದ ಅಸಹಾಯಕ ಹೆಣ್ಣುಗಳು ಸತ್ತರೆ ಇಷ್ಟೊಂದು ಹಬ್ಬಿಸಿ, ಕಥೆ ಹುಟ್ಟಿಸಿ ಆಡುವ ಈ ಸಮಾಜ ಹೆಣ್ಣೆಂದು ಎಡವಿದಾಗ ಇನ್ನೆಷ್ಟು ಆಡಿಕೊಂಡು ನಗಬಹುದೆಂದು ಭಯ ಕಾಡುತ್ತದೆ. ಲೇಖಕರು ಹೆಣ್ಣಿನ ಸ್ಥಿತಿಯನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಇಂತಹ ನಂಬಿಕೆಗಳು ಆಚರಿಸಿಕೊಂಡು ಬಂದಿರುವುದರಿಂದಲೇ ಗ್ರಾಮೀಣ ಹೆಣ್ಣಿನ ಬದುಕು ಶೋಚನೀಯ ಸ್ಥಿತಿಯಲ್ಲಿರುವುದು. ಇವು ತೊಲಗಬೇಕು ಅಂದು ಹೆಣ್ಣಿನ ಬದುಕು ಸಾರ್ಥಕ ಎನಿಸುತ್ತದೆ ಎಂಬುದನ್ನು ತಿಳಿಸಿದ್ದಾರೆ.

"ಬಯಲು ಸೀಮೆಯ ಹಳ್ಳಿಗರ ದೇವರು, ನಂಬಿಕೆ, ಪದ್ದತಿ, ಸಂಪ್ರದಾಯ ಎಲ್ಲದರ ಬಗ್ಗೆ ಹೇಳುವಾಗ ಮೊದಲು ದೇವರೆಂದರೆ ಬ್ರಹ್ಮ, ವಿಷ್ಣು, ಮಹೇಶ್ವರರ ಬಗ್ಗೆ ಹೇಳುವುದು. ಮೇಲೆ ಹೇಳಿದ ದೇವರುಗಳ ಬಗ್ಗೆ ಹರಿಕತೆ ದಾಸರ ಹತ್ತಿರವೋ ಇಲ್ಲ ಯಾರಾದರೂ ಓದು ಬರಹ ಕಲಿತವರು ರಾಮಾಯಣ, ಮಹಾಭಾರತದ ಪುಸ್ತಕಗಳನ್ನು ಓದಿದಾಗಲಷ್ಟೇ ತಿಳಿಯಬಹುದು. ನಮ್ಮ ಹಳ್ಳಿಗರ ಜೀವನದಲ್ಲಿ ಹಾಸುಹೊಕ್ಕಾಗಿರುವ ಶನಿಮಹಾತ್ಮದೇವರ ದಂಡಿಗನಮ್ಮ ಹಳೆ ಊರಮ್ಮ, ಹಟ್ಟಿಲಕ್ಕಮ್ಮ, ಮಾಸ್ತಮ್ಮ, ಹುಚ್ಚಮ್ಮ ಈ ಎಲ್ಲರ ಬಗ್ಗೆ ತಿಳಿದಾಗ ನಿಜಕ್ಕೂ ರೋಮಾಂಚನವಾಗುತ್ತದೆ. ಈ ದೇವರುಗಳು ವಾರಕ್ಕೊಂದು ದಿನ ಬಡ ಹಳ್ಳಿಗರ ಕಷ್ಟ ಸುಖ ನೋವು ನಲಿವುಗಳಿಗೆ ಸ್ಪಂದಿಸುತ್ತವೆ. ಅಂತಾದ್ರಲ್ಲಿ ಶನಿವಾರ ಮತ್ತು ಸೋಮವಾರ ಶನಿ ಮಹಾತ್ಮನಿಗೆ ಪೂಜೆ ಸಲ್ಲಿಸಿದರೆ, ಮಂಗಳವಾರ ಹಟ್ಟಿಲಕ್ಕಮ್ಮನಿಗೆ, ಭಾನುವಾರ ಹಳೆಊರಮ್ಮನಿಗೆ, ಬುಧವಾರ ದಂಡಿಗನಮ್ಮನಿಗೆ ಪೂಜೆ ಸಲ್ಲಿಸುತ್ತಾರೆ ಮತ್ತು ಅದೇ ವೇಳೆ ಬಲಗಡೆ ಹೂ ಕೇಳುವವರು, ಶಾಸ್ತ್ರ ಕೇಳುವವರು, ಮನೆಯ ಕಷ್ಟ ಸುಖಗಳ ಬಗ್ಗೆ ಜನರ ಮನಸ್ಸಿಗೆ ನೆಮ್ಮದಿ ತರುವುದೇ ಈ ದೇವರ ಕೆಲಸ"ವಾಗಿತ್ತು.

ಈ ಮಾತುಗಳನ್ನು ಗಮನಿಸಿದಾಗ ಗ್ರಾಮೀಣ ಜನರಲ್ಲಿ ಆಚರಣೆಯಲ್ಲಿರುವ ದೇವರನ್ನು ಎಷ್ಟರ ಮಟ್ಟಿಗೆ ನಂಬಿಕೊಂಡು ಬದುಕು ನಡೆಸುತ್ತಿದ್ದಾರೆ ಎಂದು ತಿಳಿಯಬಹುದು. ತಮಗೆ ಯಾವುದೇ ಕಷ್ಟ ಬರಲಿ ಮೊದಲು ದೇವರ ಮೋರೆ ಹೋಗುವ ಮುಗ್ದ ಗ್ರಾಮೀಣರನ್ನು ನೋಡಿದರೆ ಕೆಲವೊಮ್ಮೆ ಮರುಕ ಹುಟ್ಟುತ್ತದೆ. ಎಲ್ಲಾ ದೇವರುಗಳು ಇವರ ಪಾಲಿಗೆ ಬದುಕಿನ ಜೊತೆಗೆ ಇರುವ ನಂಬಿಕೆ ಸಂಪ್ರದಾಯಗಳಾಗಿದ್ದವು. ದೇವರಲ್ಲಿ ನಂಬಿಕೆಯಿರಬೇಕು. ಆದರೆ ಅತಿಯಾದ ಮೂಢನಂಬಿಕೆ ಇರಬಾರದು. ಇಂತಹ ನಂಬಿಕೆಗಳಿಂದ ಎಷ್ಟೋ ಕುಟುಂಬಗಳಲ್ಲಿ ಒಡಕು ಉಂಟಾಗಿರುವುದನ್ನು ಕಾಣಬಹುದು.

ಮುಗ್ಧ ದೇವಿರಮ್ಮನ ಮಗಳ ಜೀವನದಲ್ಲಾದ ಘಟನೆಯನ್ನು 'ದೇವರು ಹೇಳಿದ್ದು' ಕಥೆಯಲ್ಲಿ ನೋಡಬಹುದು. ದೇವೀರಮ್ಮನ ಮಗಳ ಮನೆಯಲ್ಲಿದ್ದ ಒಡವೆಯಲ್ಲಾ ಮಾಯಾವಾಗಿದ್ದನ್ನು ನೋಡಿ, ಬೇಸರಗೊಂಡು, ಮಗಳನ್ನು ವಿಚಾರಿಸಿ ಕೇಳಿದಳು. ಮಗಳಿಗೆ ಗಂಡನ ಮೇಲಿನ ಅನುಮಾನದಿಂದ ಅವನಿಗೆ ಶಾಪ ಹಾಕತೊಡಗಿದಳು. ಇದರಿಂದ ಅತ್ತೆ ಕರ್ಗಮ್ಮನಿಗೆ ಮಗನಿಗೆ ಸೊಸೆ ಬೈಯುವುದನ್ನು ಸಹಿಸಿಕೊಳ್ಳದೆ ಇಬ್ಬರೂ ವಾಗ್ವಾದಕ್ಕೆ ಇಳಿಯುತ್ತಾರೆ. ಕೊನೆಗೆ ದೇವಿರಮ್ಮ ತನ್ನ ಮನೆದೇವರು ದೇವಿರಮ್ಮನನ್ನು ಒಂದು ಮಾತು ಕೇಳಿ ಬರುವ ಮನಸ್ಸು ಮಾಡುತ್ತಾಳೆ. 'ಅವು ನಿಮ್ಮಟ್ಟೀಲಿ ಅವೆ: ನಿಧಾನವಾಗಿ ವಿಚಾರಿಸಿ, ಹುಡುಕಿರಿ' ಎಂಬ ದೇವರ ಮಾತಿನಿಂದ ಗಂಡನ ಮೇಲಿದ್ದ ಅನುಮಾನ

ನಿಜವಾಯಿತು. ಕೊನೆಗೆ ಪೋಲಿಸ್ ಕಂಪ್ಲೆಂಟ್ ಕೊಟ್ಟಿದ್ದು ಗಂಡ ಮರ್ದಿಮ್ಮಣ್ಣನಿಗೆ ಬರಸಿಡಿಲು ಎರಗಿದಂತಾಯಿತು.

ಗ್ರಾಮೀಣ ಬದುಕಿನಲ್ಲಿ ಈ ರೀತಿಯ ನಂಬಿಕೆಗಳಿಂದ ಅದು ನಿಜವೋ ಸುಳ್ಳೋ ಎಂಬುದನ್ನು ಅರಿಯದೇ ದೇವರ ಮೇಲಿನ ಅತಿಯಾದ ನಂಬಿಕೆಯಿಂದ ಕೈ ಹಿಡಿದ ಗಂಡನ ಮೇಲೆ ಪೋಲಿಸ್ ಕಂಪ್ಲೆಂಟ್ ಕೊಡುತ್ತಾಳೆ. ಇಂತಹ ಎಷ್ಟೋ ಕುಟುಂಬಗಳು ಈ ರೀತಿಯಲ್ಲಿ ಒಡೆದು ಹೋಗುತ್ತಿರುವುದನ್ನು ಕಾಣಬಹುದು. ಸರಿ-ತಪ್ಪು ಎಂಬುದನ್ನೇ ತಿಳಿಯದೆ ಸೊಸೆ ಮಾಡಿದ ವರ್ತನೆ ಕರ್ಗಮ್ಮನಿಗೆ ತೀವ್ರವಾದ ನೋವುಂಟಾಗುತ್ತದೆ. ಒಬ್ಬನೇ ಮಗನೆಂದು ಸಾಕಿದ ಮಗನ ಪರಿಸ್ಥಿತಿಯನ್ನು ನೆನೆದು ಕರ್ಗಮ್ಮನಿಗೆ ಜೀವನವೇ ಬರಡಾಗಿ, ಮಗನನ್ನು ಶಿವರಾಮಣ್ಣನ ಮೂಲಕ ಕರೆ ತರುತ್ತಾಳೆ.

ಹೆತ್ತವಳಿಗೆ ಹೆಗ್ಗಣ ಮುದ್ದು ಎನ್ನುವ ಗಾದೆಯಂತೆ ಕರ್ಗಮ್ಮನಿಗೆ ಮಗನ ಜೀವನ ಮುಖ್ಯವಾಗಿತು. ತನ್ನನ್ನು ಪೋಲೀಸ್ ಸ್ಟೇಷನ್‌ನಲ್ಲಿ ಕೂಡಿಹಾಕಿ ಕೂಲಿಗೆ ಹೊರಟ ಹೆಂಡತಿಯ ಬಗ್ಗೆ ಒಂದು ಕ್ಷಣ ಹೇಸಿಗೆ ಎನಿಸಿತು. ತನ್ನ ಬದುಕಿನ ಬಗ್ಗೆ ಆಸೆಯನ್ನೇ ಬಿಟ್ಟ 'ದೇವ್ರು ಹೇಳ್ತು ಅಂತ ಹೆಂಡತಿ, ಅವರವ್ವ ಪೋಲಿಸಿಗೆ ಹಿಡಕೊಟ್ಟುದು'. ನನ್ ಮಾತ ಕಾಲಿನ ಕಸಕ್ಕಿಂತ ಕಡೆಯಾಗಿ ಕಂಡ್ಲು ನಾನಿನ್ನು ಬದುಕಿರಬಾರದು ಎಂಬ ನಿರ್ಧಾರಕ್ಕೆ ಬರುತ್ತಾನೆ.

ಗ್ರಾಮೀಣ ಜನರಲ್ಲಿರುವ ಅತಿಯಾದ ನಂಬಿಕೆಗಳು ಕಂದಾಚಾರಗಳಿಂದ ಈ ರೀತಿಯ ಘಟನೆಗಳು ಜರುಗುತ್ತಲೇ ಇವೆ. ಅಸಹಾಯಕ ವ್ಯಕ್ತಿ ಮರ್ದಿಮ್ಮಣ್ಣ ಹೆಂಡತಿ ಮಾಡಿದ ಕೆಲಸದಿಂದ ನೊಂದು ವಿಷದ ಬಾಟಲಿಗೆ ತನ್ನ ಪ್ರಾಣ ಕೊಡುತ್ತಾನೆ. ಇದನ್ನು ತಿಳಿದ ತಾಯಿ ಕರ್ಗಮ್ಮ ಮಗನ ಜೊತೆಯೇ ಹೆಣವಾಗುತ್ತಾಳೆ. ಇದನ್ನು ನೋಡಿದವರ ಕಣ್ಣುಗಳು, ಕರುಳುಗಳು ಕಿತ್ತು ಬರುವ ಹಾಗಿತ್ತು. ಇಂತಹ ಕ್ರೂರ ಪದ್ಧತಿಗಳಿಂದ ಜೀವವೇ ಬಲಿಯಾಗುವುದು ಕೆಟ್ಟ ಆಲೋಚನೆಗಳು, ಹಾಗೆಯೇ ಅತಿಯಾದ ಮೂಢನಂಬಿಕೆಗಳು ಈ ರೀತಿಯ ದಾರಿಗೆ ಎಡೆ ಮಾಡಿಕೊಡುತ್ತವೆ. ಯಾವುದು ತನ್ನ ಗಂಡ ಅತ್ತೆಯನ್ನು ಬಲಿ ತೆಗೆದುಕೊಂಡಿತೋ ಆ ವಡವೆ ಗಂಟು ಮನೆಯಲ್ಲಿ ಸಿಕ್ಕಿದಾಗ "ಒಮ್ಮೆಲೇ ದಿಗ್ಭ್ರಮೆಗೊಂಡಳು. ಅವಳ ಕೈ ಕಾಲಿನ ಶಕ್ತಿ ಎಲ್ಲಾ ಸೋರಿ ಹೋದಂತಾಗಿ ಕುಕ್ಕನೆ ಕುಳಿತಳು. ತಾನೆಲ್ಲಿದ್ದೇನೆ ಎಂದು ತಿಳಿದುಕೊಳ್ಳಲು ಆ ಕಡೆ ಈ ಕಡೆ ನೋಡಿದಳು. ಕಣ್ಣುಗಳು ಸೋಲುತ್ತಿವೆ ಎನಿಸಿತು. ಅನ್ಯಾಯವಾಗಿ ಗಂಡನ ಮೇಲೆ ಅಪವಾದ ಹೊರಿಸಿ ಮನೆಯನ್ನು ಮಸಣ ಮಾಡಿದೆನಲ್ಲಾ ಎಂದು ಜೋರಾಗಿ ಅತ್ತಳು. ಕಿರು ಮನೆಗೆ ಹೋಗಿ ನೇಣು ಹಾಕಿ ಕೊಂಡಳು".

'ಕೋಪದ ಕೈಗೆ ಬುದ್ಧಿ ಕೊಟ್ಟ' ಹಾಗೆ ದೇವಿರಮ್ಮ ತನ್ನ ಮಗಳ ಬಾಳಿಗೆ ಕಲ್ಲಾಕಿದ ಹಾಗೆ ಮಾಡಿದಳು. ಅದನ್ನೇ ನಂಬಿದ ಮಗಳು ಗಂಡ ಅತ್ತೆಯನ್ನು ಸಾವಿಗೀಡಾಗುವಂತೆ ಮಾಡುತ್ತಾಳೆ. ಕೇವಲ ಒಂದು ಚಿಕ್ಕ ವಿಚಾರಕ್ಕೆ ಮುಗ್ದ ಅಸಹಾಯಕ ಜೀವಗಳು ಬಲಿಯಾಗಿದ್ದು, ತಾವೇ ತೋಡಿದ ಹಳ್ಳಕ್ಕೆ ತಾವೇ ಬಿದ್ದ ಹಾಗಾಯಿತು. ನಂಬಿಕೆಗಳು ಆಚಾರಗಳು ಎಷ್ಟರ ಮಟ್ಟಿಗೆ ಗ್ರಾಮೀಣರಲ್ಲಿ ಮನೆಮಾಡಿವೆ ಎಂಬುದಕ್ಕೆ ಈ ರೀತಿಯ ಘಟನೆಗಳು ನಿದರ್ಶನವಾಗುತ್ತವೆ. ಈ ರೀತಿಯ ಮೂಢನಂಬಿಕೆಗಳ ಬಲೆಯಿಂದ ಹೊರಬಂದಾಗ ಗ್ರಾಮೀಣರಲ್ಲಿ ತಿಳುವಳಿಕೆ ಮೂಡಿ ವೈಚಾರಿಕವಾಗಿ ಚಿಂತಿಸುವ ಮನೋಭಾವ ಬೆಳೆಯಬೇಕೆಂಬ ಆಸೆಯನ್ನು ಲೇಖಕರು ಬಯಸಿದ್ದಾರೆ. ಪ್ರಸ್ತುತದಲ್ಲೂ ಇಂತಹ ಸಂಗತಿಗಳನ್ನು ಕಾಣಬಹುದು. ಅದರಿಂದ ಹೊರ ಬಂದಾಗ ಇಂತಹ ಕೆಟ್ಟ ಯೋಚನೆಗಳು ದೂರವಾಗಿ ಸಮಾಜ ಪ್ರಗತಿ ಕಾಣುತ್ತದೆ.

ಶತಶತಮಾನದಿಂದಲೂ ತುಳಿತ ಶೋಷಣೆ, ದ್ವೇಷ, ತಾರತಮ್ಯಕ್ಕೆ ಒಳಗಾಗಿ ಬದುಕುತ್ತಿರುವ, ಕೆಳವರ್ಗದವರ ನೋವು, ಹತಾಶೆಯನ್ನು ಕಾಣುತ್ತಲೇ ಬಂದಿದ್ದೇವೆ. ಜಾತಿ ಜಾತಿಗಳ ನಡುವಿನ ಪೈಪೋಟಿ ಮೇಲ್ವರ್ಗದವರ ದಬ್ಬಾಳಿಕೆ ದೌರ್ಜನ್ಯವನ್ನು ಲೇಖಕರು ತಮ್ಮ ಕಥೆಗಳ ಮೂಲಕ ನೇರವಾಗಿ ಯಾವುದೇ ಕಥನ ತಂತ್ರವಿಲ್ಲದೆ, ಸಹಜವಾಗಿ ತಿಳಿಸಿದ್ದಾರೆ. ಪ್ರಸ್ತುತ ಸಮಾಜದಲ್ಲಿ ನಡೆಯುತ್ತಿರುವ ಕೆಳವರ್ಗದವರ ತುಳಿತವನ್ನು ಒಬ್ಬ ರೈತನ ಮಗನಾಗಿ ಹುಟ್ಟಿ ಹತ್ತಿರದಿಂದ ಕಂಡು ಕೇಳಿದ ಸಂಗತಿಗಳನ್ನು **'ಹೊಸೂರಿನ ಹಳೆಯ ತಲೆಗಳು'** ಎಂಬ ಕಥೆಯಲ್ಲಿ (ನೀಳ್ಗತೆ) ತಿಳಿಸಿದ್ದಾರೆ. ಬದಲಾವಣೆಯಾಗುತ್ತಿರುವ ಸಮಾಜದಲ್ಲಿ ತಾವು ಸಹ ತಮ್ಮ ಕಾನೂನು ಹಕ್ಕುಗಳನ್ನು ಪಡೆಯುವ ಸಲುವಾಗಿ, ಇಂದಿನ ಹೊಸ ತಲೆಮಾರುಗಳು ಪ್ರಯತ್ನಿಸುವುದು. ಆದರೆ ಜಾತಿಯನ್ನು ಎದುರು ಹಾಕಿಕೊಳ್ಳಲು ಇಷ್ಟವಿಲ್ಲದೆ, ದಮನೀಯತೆಯ ಬದುಕನ್ನು ಸಾಗಿಸುವ ಹಿರಿಯ ತಲೆಮಾರಿನವರಿಗೂ ಇರುವ ವ್ಯತ್ಯಾಸವನ್ನು ಕಾಣಬಹುದು. ಶ್ರೀಮಂತಿಕೆಯ ದರ್ಪದಲ್ಲಿ ಮೇಲ್ವರ್ಗದವರು ಕೆಳವರ್ಗದವರ ಹೆಣ್ಣಿನ ಮೇಲೆ ಮಾಡುವ ಶೋಷಣೆ ಮುಂತಾದವು ಕಥೆಯಲ್ಲಿ ವ್ಯಕ್ತವಾಗುವುದನ್ನು ಕಾಣಬಹುದು.

ಹಿಂದಿನಿಂದಲೂ ಆಚರಣೆಯಲ್ಲಿರುವ ನಂಬಿಕೆ ಸಂಪ್ರದಾಯಗಳ ಪ್ರಕಾರ ಮೇಲ್ವರ್ಗದವರ ಸಮನಾಗಿ ಕೆಳವರ್ಗದವರು ಯಾವುದರಲ್ಲೂ ಬದುಕಲು ಸಾಧ್ಯವಿಲ್ಲ. ಹಾಗೆಯೇ ಕಥೆಯಲ್ಲಿನ ಗೌಡನ ಹೆಂಡತಿ ಬಾವಿಯಲ್ಲಿ ನೀರು ತರಲು ಹೋದಾಗ, ಹೊಲೆಯರ ಶಿವಿಯು ಅದೇ ಬಾವಿಯಲ್ಲಿ ನೀರು ಸೇದುವುದನ್ನು ಕಂಡು ಕೋಪ, ಆಕ್ರೋಶ ವ್ಯಕ್ತ ಪಡಿಸುತ್ತಾಳೆ. ಕಾರಣ ಕೆಳವರ್ಗದವರ ಬಗ್ಗೆ ಇರುವ ನಿಕೃಷ್ಟವಾದ ಮನೋಭಾವ ಕೀಳು ಭಾವನೆ. ಕುಡಿಯುವ ನೀರಿಗಾಗಿ ಭೇದವನ್ನು ಕಾಣುವ ಸಿದ್ದಮ್ಮನಿಗೆ ಹೊಲೆಯರ ಶಿವಿಯ ಮಾತುಗಳು "ಈಗ ಕಾನೂನ್ ಬಂದದೆ, ಯಾರ್ ಬೇಕಾದ್ರೂ ಯಾವ್ ಬಾವಿಯಲೂ ನೀರ್ಕುಡಿಬೋದು" ಎಂಬ ಮಾತುಗಳು ಸಮಾಜದಲ್ಲಿ ಹಿಂದಿನಿಂದಲೂ ನಡೆಸಿ ಕೊಂಡು ಬಂದಿರುವ ಪದ್ಧತಿಯಿಂದ ಬೇಸತ್ತು ಬದಲಾವಣೆಯನ್ನು ಕಾಣುವ ಶಿವಿ ವಿರೋಧ ಮಾಡುತ್ತಾಳೆ. ಕೆಳವರ್ಗದವರಿಗೆ ಬೇರೆ ಬಾವಿಗಳು, ಮೇಲ್ವರ್ಗದವರಿಗೆ ಬೇರೆಯ ಬಾವಿಗಳು ಎಂಬ ರೂಢಿ ಪದ್ಧತಿಗಳು ಇದ್ದರೂ, ಸಹ ಸಿಹಿ ನೀರಿನ ಬಾವಿಗೆ ಬಂದು ನೀರು ಸೇದುತ್ತಾಳೆ. ಎಲ್ಲೋ ಬಂದು ಕೊಳಕು ನೀರಿನಿಂದ ನರಳಿ ಸಿಹಿ ನೀರನ್ನು ಕುಡಿದು ಬದುಕು ಸಾಗಿಸುವ ಬದಲಾವಣೆಯನ್ನು ನೋಡಬಹುದು. ತುಳಿತಕ್ಕೆ ಗುರಿಯಾಗಿ ಬದುಕುತ್ತಿರುವ ಕೆಳವರ್ಗದವರು ಎಲ್ಲರಂತೆ ಸಮಾನತೆಯನ್ನು ಬಯಸುವ ಮನಸ್ಸು ಶಿವಿಯಲ್ಲಿ ಗುರುತಿಸಬಹುದು.

ಹೊಸೂರಿನಲ್ಲಿ ದೊಡ್ಡಟ್ಟಿ ದೊಡ್ಡೇಗೌಡನೆಂದರೆ ಪಾಳೆಗಾರನಂತೆ. ಊರೆಲ್ಲಾ ಜಮೀನನ್ನು ನುಂಗಿ ನೀರ್ಕುಡ್ದು ಕುಳ್ದಲ್ಲಿ ದೊಡ್ಡವನಾದವನು. ಅವನ ಕೈವಾಡವಿಲ್ಲದೆ, ಊರಲ್ಲಿ ಯಾವುದೇ ಕಾರ್ಯನೆಡೆಯುತ್ತಿರಲಿಲ್ಲ. ಅಂತಹವನ ಮಗ ಭೈರೇಗೌಡ, ಊರಿನ ಯಜಮಾನ, ಛೇರ್ಮೆನ್ನರು ಪಟೇಲರು ಒಂದು ಕಡೆಯಾದರೆ, ಭೈರೇಗೌಡ, ಸಿದ್ದಲಿಂಗೇಗೌಡ, ಪೂಜಾರಿ ಗುರಪ್ಪನವರು ಒಂದು ಕಡೆ ಎಂಬಂತೆ ಎಲ್ಲರೂ ಒಟ್ಟಾಗಿದ್ದರು. ಕೆಳವರ್ಗದವರು ಬಾವಿಯಲ್ಲಿ ನೀರು ಮುಟ್ಟಿದ ವಿಚಾರದಿಂದ ಎಲ್ಲರ ಮನದಲ್ಲಿ ಕಿಡಿಕಾರಿತು.

ತಮ್ಮ ಅಧಿಕಾರ ವರ್ತನೆಯಿಂದ ಅವರನ್ನು ತಮ್ಮ ಕೆಳಗೆ ತುಳಿದು ಬದುಕುವ ಮೇಲ್ವರ್ಗದವರು ಅವರಿಗೂ ಕಾನೂನಿನ ಬಲವಿದೆ ಎಂಬುವರ ಅರಿವಿದ್ದರೂ, ಎಲ್ಲೋ ಒಂದು ಕಡೆ ಅವರು ಶೋಷಣೆಗೆ ಒಳಗಾಗಿ ಬದುಕುತ್ತಿದ್ದಾರೆ. ಎರಡು ಜಾತಿಗಳ ನಡುವೆ ಇರುವ ಮನೋಭಾವನೆಯನ್ನು ಕಾಣಲಾಗುತ್ತದೆ. ಸರ್ಕಾರ ಎಲ್ಲರಿಗೂ ಸಮಾನತೆಯ ದೃಷ್ಟಿಯಿಂದ ಬಾವಿಯನ್ನು ಹಾಕಿಸಿದ್ದರೂಶ ಅಲ್ಲಿ ಕೆಳವರ್ಗದವರಿಗೆ

ಪ್ರವೇಶವಿಲ್ಲ. ಅವರು ಮುಟ್ಟಿದ ಮೇಲೆ, ಅದು ಅಪವಿತ್ರವೆಂಬ ನಂಬಿಕೆಯಲ್ಲಿ ಬದುಕು ಸಾಗಿಸುವ ಹಿಂದಿನ ತಲೆಮಾರುಗಳನ್ನು ಕಾಣಬಹುದು. ಒಬ್ಬೊಬ್ಬರಲ್ಲೂ ಒಂದೊಂದು ರೀತಿಯ ನಂಬಿಕೆಗಳನ್ನು ನೋಡಬಹುದು. ಕೆಳವರ್ಗದವರೆಂದರೆ 'ರೈತನ ಎದೆ ಕೆರ್ಕೊಂಡು ತಿನ್ನೋ ಜಾತಿ' ಎನ್ನುವ ಮನೋಭಾವ ಹಿಂದಿನವರ ನಂಬಿಕೆಯಾಗಿತ್ತು.

"ಅಲ್ಲಾ ಭೈರಪ್ಪ ಈಗೆಂಗಿದ್ರು ಅವ್ರ ಕಡೆನೆ ಕಾನೂನದೆ. ಬಾವಿ ಸರ್ಕರದೋರ್ದು ತೋಡ್ಸಿದ್ದು, ಇನ್ನೇನಾರ ಹೆಚ್ಚು ಕಮ್ಮಿಯಾದರೆ ಪೋಲಿಸ್ ಸ್ಟೇಷನ್ ನೋಡ್ಬೇಕಾಯ್ತದೆ. ಇಂಗ ಮಾಡ್ಬಿಡುವ ಊರ್ನೋರೆಲ್ಲ ಸೇರ್ಕೊಂಡು ನಾವೇ ಒಂದ್ ಬಾವಿ ತೆಗ್ಸುಬಿಡುವ, ಆಮೇಲ್ಯಾರಾರ ಬಂದ್ರೆ ವಿಚಾರಿಸ್ಕೋವ" ಅಂದರೆ ಜಾತಿಯತೆ ಎಷ್ಟರ ಮಟ್ಟಿಗೆ ತನ್ನ ಬೇರನ್ನು ಬಿಟ್ಟಿದೆ ಎಂಬುದು ವ್ಯಕ್ತವಾಗುತ್ತದೆ. ಸಮಾಜದಲ್ಲಿ ಅವರಿಗೆ ಎಷ್ಟೇ ಸ್ಥಾನಮಾನಗಳಿದ್ದರೂ, ಅವರಲ್ಲಿ ಬದಲಾವಣೆಗಳಾದರೂ ಸಹ ತಮ್ಮ ಜೊತೆಗೆ ಸಮಾನತೆಯನ್ನು ಕೊಡಲು ಹಿಂದಿನವರು ಬಯಸುವುದಿಲ್ಲ. ಕೀಳು ಭಾವನೆ, ಅವರಲ್ಲಿ ಮನೆಮಾಡಿತ್ತು. ಪೂಜಾರಿ ಗುರಪ್ಪನವರು ಹೊಲಗೇರಿಯ ಪಕ್ಕದಲ್ಲೇ ಇದ್ದ ಗುಡಿಗೆ ಪೂಜೆ ಸಲ್ಲಿಸಿ ಪಕ್ಕವಿದ್ದ ಹೊಲಗೇರಿಯ ಸಡ್ಡುಗಳಿದ್ದರಿಂದ, ಶ್ರೇಷ್ಠನಾದ ಬ್ರಾಹ್ಮಣನಾದ ನಾನು ಇಲ್ಲಿ ಬಂದು ಪೂಜೆ ಸಲ್ಲಿಸುವುದೇ ಎಂದುಕೊಳ್ಳುತ್ತಾನೆ. ಕುದ್ರೆ ಹೊಂಬ ಮತ್ತು ಚೆನ್ನನಿಗೆ ಹೇಳುವ ಮಾತುಗಳು ನಿಮ್ಮ ಸ್ಥಿತಿ ಇನ್ನೂ ಏನಾಗಬಹುದುದೆಂದು ನೋಡಿ "ಗುಡಿ ಸುತ್ತ ಇರೊ ಸಡ್ಡ ತೆಗ್ಸಿ ದೇವರ್ಗೆ ಸ್ಟರೊಲ್ಲ ಅಂತ ತಗದ್ರ? ಎಲ್ತಗ್ದೀರಿ? ತಿಂದು ತಿಂದು ಕಳ್ಮೇಲ್ ಕಳ್ ಕೂತ್ಕಂಡ್ ಬುಟ್ಟದೆ. ನಿಮ್ಮಪ್ಪಿರ್ ಕಾಲ್ದಲ್ಲೂ ಇಂಗ್ ಮಾಡ್ತಿದ್ರಾ? ನಾನ್ ಆವತ್ತು ಗಿಣಿಗೇಳ್ದಂಗೇಳ್ದೆ, ದೇವ್ರ್ಗೆ ಸಿಟ್ಟಂದ್ರೆ ನಿಮ್ ಬುಡೊಲ್ಲ. ಬೇರೆ ಕಡೆ ಹೋಗ್‌ಸಡ್ಕಟ್ಟಿ ಅಂತ. ಎಲ್ಕೇಳಿರಿ, ಕಾನೂನ್ಮೇಲ್ಕುಳಿತೋಂಡಿದ್ದೀರಿ. ನಾವ್ ಕುಡಿಯೋ ಬಾವೀಲಿ ನೀವ್ ನೀರ್ಕುಡಿದ್ರೆ ಉದ್ದಾರಾದಿರಾ? ನಾನ್ ಬ್ರಾಹ್ಮಣ. ಅಷ್ಟ್‌ದಿನ್ದಿಂದ್ ಹೇಳಿದ್ರೂವೆ ಎಲ್ಲಾ ನಿಮ್ ಸಪ್ಪಕ್ ಸಮ ಆಗೋಯ್ತ. ಅನುಭವ್ಸಿ" ಎನ್ನುತ್ತಾನೆ.

ಪ್ರಸ್ತುತದಲ್ಲಿ ಈ ಮಾತುಗಳು ಎಷ್ಟಮಟ್ಟಿಗೆ ಸತ್ಯ ಎಂಬುದನ್ನು ತಿಳಿಯಬೇಕಾದ ಸಂಗತಿಯಾಗಿದೆ. ಕೆಳವರ್ಗದವರು ಎಂದ ಮಾತ್ರಕ್ಕೆ ಅವರು ಸಹ ಮನುಷ್ಯರೇ. ಆದರೆ ಅವರನ್ನು ಮೇಲ್ವರ್ಗದವರು ಪಶುಗಳಂತೆ ಕಾಣುವುದು ಶೋಚನೀಯವಾದ ವಿಚಾರ ಎನ್ನಬಹುದು. ದೇವರಲ್ಲಿ ಜಾತಿ ಭೇದವೆಂಬುದಿಲ್ಲ ಅದನ್ನು ಮಾಡಿಕೊಂಡಿರುವವರು ಇಂತಹ ಬ್ರಾಹ್ಮಣರು. ತಾವೇ ಶ್ರೇಷ್ಠ ಎಂಬುದು ಹಿಂದಿನಿಂದಲೂ ಆಚರಿಸಿಕೊಂಡು ಬಂದಿರುವುದರಿಂದ ಕೆಳವರ್ಗದವರ ಸ್ಥಿತಿ ಇಂದಿಗೂ ಕೆಳಮಟ್ಟದಲ್ಲೇ ಇರುವುದು. ಅವರು ಮುಟ್ಟಿದ ನೀರನ್ನು ಮುಟ್ಟಿ ಬದುಕಲು ಸಾಧ್ಯವೇ, ಎಂಬೆಲ್ಲ ನಂಬಿಕೆಗಳಿಂದ ಗ್ರಾಮೀಣರಲ್ಲಿ ಜಾತಿಯ ಭೂತ ಇಂದಿಗೂ ಉಸಿರಾಡುತ್ತಲೇ ಇದೆ. ದೇವರು ಪಾಪ-ಪುಣ್ಯ, ಸತ್ಯದ ಪ್ರಜ್ಞೆಗಳು ಇದ್ದದರಿಂದ ಹಿಂದಿನವರು ಮೇಲ್ವರ್ಗದವರ ತುಳಿತಕ್ಕೂ ಸಿಕ್ಕಿ ಅದನ್ನು ಒಪ್ಪಿಕೊಂಡು ಬದುಕುತ್ತಿದ್ದರು. ತಾವು ಮಾಡಿದ ತಪ್ಪುಗಳನ್ನು ಮುಚ್ಚಿ ಮುಗ್ದ, ಅವಿದ್ಯಾವಂತ ಕೆಳವರ್ಗದವರ. ಮನಸ್ಸಿನಲ್ಲಿ ಭಯಹುಟ್ಟಿಸಿ ದೇವರ ಹೆಸರಿನಲ್ಲಿ ತಮ್ಮ ಕೆಲಸವನ್ನು ಮಾಡಿಕೊಳ್ಳುವುದನ್ನು ಕಾಣಬಹುದು.

ಊರಿನ ಗೌಡ ಭೈರೇಗೌಡನಿಗೆ ಕುದ್ರೆ ಹೊಂಬ ಮತ್ತು ಚೆನ್ನನನ್ನು ನೋಡಿ ಒಂದು ಕಡೆ ನಾವು ಮಾಡಿದ್ದು ಸರಿಯೇ ಎನಿಸುತ್ತದೆ. ಮತ್ತೆ ಹಾಗೆ ಮಾಡದಿದ್ದರೆ, ಹೊಲಗೇರಿಯವರು ಆ ಬಾವಿಯಲ್ಲಿ ನೀರು ಕುಡಿಯುತ್ತಿದ್ದರು. ನಾವು ಅದರಲ್ಲೇ ಕುಡಿಯುವ ಪ್ರಸಂಗ ಬರುತ್ತಿತ್ತು ಎಂದುಕೊಳ್ಳುವುದನ್ನು ಗಮನಿಸಿದಾಗ ಎಲ್ಲೋ ಒಂದು ಕಡೆ ಭೈರೆಗೌಡನಿಗೆ ಹೊಲಗೇರಿಯವರಲ್ಲಿ ಕರುಣೆ ಹುಟ್ಟುತ್ತಿತ್ತು. ಆದರೆ ತಾವು ನಂಬಿಕೊಂಡು ಬಂದ ಸಂಪ್ರದಾಯಗಳು ಅದಕ್ಕೆ ಅಡ್ಡ ಬರುವುದರಿಂದ, ಅದನ್ನು ಕೈ ಬಿಡಲು

ಎಂದಿಗೂ ಸಾಧ್ಯವಾಗದ ಮಾತು. ಸಮಾಜದಲ್ಲಿ ಕೆಳವರ್ಗದವರ ಸ್ಥಿತಿ ಅವರು ಎದುರಿಸುತ್ತಿರುವ ಸಮಸ್ಯೆಯನ್ನು ಇಂದು ಸಹ ಪ್ರಸ್ತುತದಲ್ಲೂ ಕಾಣಲಾಗುತ್ತದೆ.

ಸಮಾಜದಲ್ಲಿ ಪುಟ್ಟರಾಮಣ್ಣನ ಮಗ ಚನ್ನಂಜನಂತಹ ಕಾಮುಕ ವ್ಯಕ್ತಿ ಕೆಳವರ್ಗದ ಹೆಣ್ಣು ಮಕ್ಕಳ ಬಾಳಿನಲ್ಲಿ ಆಟವಾಡಿ, ತನ್ನ ಸುಖವನ್ನು ಬಯಸುವ ಕೆಟ್ಟ ವ್ಯಕ್ತಿಯಾಗಿದ್ದಾನೆ. ಅಧಿಕಾರ, ಶ್ರೀಮಂತಿಕೆಯಲ್ಲಿ ಬೆಳೆದ ಮೇಲ್ವರ್ಗದವರು, ತಮ್ಮ ಕೆಳಗೆ ದುಡಿದು, ತಿನ್ನುವ ಕೆಳವರ್ಗದವರನ್ನು ಶೋಷಣೆಗೆ ಗುರಿಮಾಡುವುದನ್ನು ಕಾಣಬಹುದಾಗಿದೆ. ಬಡವನ ಹೆಂಡ್ತಿ ತಾವ್ಕೆ ಬಲಗಾರ ಹೋದ್ರೆ ಬಲಗಾರ್ನ ಹೆಂಡ್ತಿ ತಾವ್ಕೆ ಭಗವಂತ ಹೋಗ್ತಾನೆ. ಎಂಬಂತೆ ಚನ್ನಂಜ ತನ್ನ ಅಧಿಕಾರದ ಮದದಿಂದ ಹೊಲೆಯರ ಚನ್ನಿಯ ಮೇಲೆ ಎಸಗುವ ಬಲತ್ಕಾರದಿಂದ ಹೆಣ್ಣು ಈ ರೀತಿಯಲ್ಲಿ ಬಲಿಯಾಗುತ್ತಲೇ ಇದ್ದಾಳೆ. ಹಾಗೆಯೇ ಕುದ್ರೆ ಹೊಂಬನ ಮಗಳು ಕೆಂಪೀರಿಯ ಮೇಲೆ ನಡೆಯುವ ಸಾಮೂಹಿಕ ಅತ್ಯಾಚಾರವನ್ನು ನೋಡಿದರೆ ಹೆಣ್ಣು ಪ್ರತಿ ಹಂತದಲ್ಲೂ ತನಗಾಗುವ, ನೋವು ಹತಾಶೆಯನ್ನು ಎದುರಿಸುತ್ತಲೇ ಬಂದಿದ್ದಾಳೆ. ಹಿಂದಿನಿಂದಲೂ ನಿಕೃಷ್ಟವಾದ ಬದುಕು ಸಾಗಿಸುತ್ತಿರುವ ಹೆಣ್ಣು ಸೆಟೆದು ನಿಲ್ಲುವ ಪ್ರಯತ್ನವನ್ನು ಕೆಂಪೀರಿಯಲ್ಲಿ ಕಾಣಬಹುದು. ಗ್ರಾಮೀಣ ಸಮಾಜದಲ್ಲಿ ಹೆಣ್ಣನ್ನು ಕೆಳಮಟ್ಟದಲ್ಲಿ ಕಾಣುವುದರಿಂದ ಅವಳಿಗೆ ಯಾವುದೇ ಸ್ವಾತಂತ್ರ್ಯವಿಲ್ಲ. ಕೆಳವರ್ಗದಲ್ಲಿ ಹುಟ್ಟಿ ಅಸಹಾಯಕ ಸ್ಥಿತಿಯಲ್ಲಿ ಬದುಕುತ್ತಿದ್ದಾಳೆ.

ಹಿಂದಿನಿಂದಲೂ ಮೇಲ್ವರ್ಗದವರ ಹಿತಾಶಕ್ತಿಗಳಿಗೆ ತಲೆಬಾಗಿಕೊಂಡು ಬದುಕು ನಡೆಸುತ್ತಿದ್ದ, ಕುದ್ರೆಹೊಂಬ ತನ್ನ ಮಗಳು ಅದನ್ನು ವಿರೋಧಿಸುವುದನ್ನು ಒಪ್ಪಿಕೊಳ್ಳುವುದಿಲ್ಲ. ಸುಬ್ಬಯ್ಯನ ಮಗ ದಾಸ ಪೇಟೆಯಿಂದ ಬಂದು ಅವಳಿಗೆ ಇದೆಲ್ಲವನ್ನು ಕಲಿಸಿದ್ದಾನೆ ಎಂಬುದು ಅವನ ನಿಲುವಾಗಿತ್ತು. " ನಿಮ್ಮ ಕಾನೂನು ಕಟ್ಲೆ ಗೌಡ್ರೊಳ್ಗೇನು ಮಾಡ್ಲಾರೊ. ಮರ್ಯಾದೆಯಾಗಿ ಬಾಳ್ಕೊಂಡೋಗೋದಾದ್ರೆ ಹೋಗಿ ಇಲ್ದೆರೆ ಒಂದು ಕಡಿಂದ ಹೊಲಗೇರಿಗೆ ಬೆಂಕಿ ಇಡುಸ್ಬುಟ್ಟು ಎಲ್ಲಾರ್ನೂ ಊರ್ಬುಟ್ಟು ಓಡುಸ್ಬುಡ್ತೀನಿ." ಎಂಬ ಮಾತುಗಳನ್ನು ಗಮನಿಸಿದಾಗ ಮೇಲ್ವರ್ಗದವರ ಕೆಳಗೆ ದುಡಿದು ಬದುಕುವವರನ್ನು ಯಾವ ರೀತಿಯಲ್ಲಿ ಶೋಷಣೆ ಮಾಡುತ್ತಾರೆ ಎಂಬುದು ವ್ಯಕ್ತವಾಗುತ್ತದೆ. ಅವರಿಗೂ ಕಾನೂನಿನ ಬಲವಿದ್ದರೂ ಅವರ ಬದುಕು ಶೋಚನೀಯ ಸ್ಥಿತಿಯಲ್ಲಿಯೇ ಬದುಕುವುದನ್ನು ಕಾಣಬಹುದು.

ಗ್ರಾಮೀಣರಲ್ಲಿ ಮನುಷ್ಯರ ಮೇಲೆ ದೇವರು ಬರುವುದು ಮುಖ್ಯವಾದ ಸಂಗತಿಯಾಗಿತ್ತು. ದೇವರು, ಧರ್ಮ ಆಚಾರ-ವಿಚಾರಗಳು ಅವರ ಬದುಕಿನ ಒಂದು ಅಂಗವಿದ್ದಂತೆ ಇದ್ದವು. ದೇವರು ಹಬ್ಬ ಹರಿದಿನವೆಂದರೆ ತಮಟೆ ಬಡಿಯಲು ಕೆಳವರ್ಗದವರು ಬೇಕು. ಅದೇ ದೇವರ ಪೂಜೆಯಲ್ಲಿ ಸರಿಸಮನಾಗಿ ನಿಲ್ಲಲು ಅವರಿಗೆ ಅವಕಾಶವಿಲ್ಲದಿರುವುದನ್ನು ನೋಡಿದರೆ ಮರುಕ ಹುಟ್ಟುತ್ತದೆ. ಇಂತಹ ಕ್ರೂರ ಪದ್ಧತಿಗಳಿಂದ ಇಂದಿಗೂ ಕೆಳವರ್ಗದವರು ಮುಕ್ತಿ ಪಡೆದಿಲ್ಲ.

ಪ್ರತಿಯೊಂದು ವಿಚಾರದಲ್ಲೂ ಅವರನ್ನು ಕೆಳಹಂತದಲ್ಲಿ ನೋಡುವುದನ್ನು ಕಾಣ ಬಹುದು. ಕೆಂಪೀರಿಯ ಮೇಲಿನ ಶೋಷಣೆಯನ್ನು, ಅಲ್ಲಿನ ಯುವ ತಲೆಮಾರಿನ ದಾಸ ವಿರೋಧಿಸುತ್ತಾನೆ. ಮೇಲ್ವವರ್ಗದವರಂತೆ ತಮಗೂ ಉತ್ತಮ ಸ್ಥಾನಮಾನಗಳನ್ನು ಸರ್ಕಾರ ಕೊಟ್ಟಿರುವುದರಿಂದ ಅವರಲ್ಲಿ ಅಕ್ರೋಶವನ್ನು ವ್ಯಕ್ತಪಡಿಸುತ್ತದೆ. " ಅವ್ರು ಇವತ್ತು ಅವ್ನ ಮಗ್ಳು ಹಾಳ್ಮಾಡಿದ್ರು, ನಾಳಿಕೆ ನಮ್ಮಗ್ಳೆ ಹಾಳ್ಮಾಡಿದ್ರೆ ಗತಿ ಏನು? ಈ ಗೌಡ್ರೋಳು ಹಿಂದ್ಲಿದ್ದೂ ಇದೇ ರೀತಿಲಿ ಬಂದೋರು. ದೊಡ್ಡೇಗೌಡನ ಬೀಜ ನಮ್ಮರೊಲಗೇರಿಲೆಲ್ಲ ಕಸಿ ಮಾಡದೆ, ಯಾವತ್ತು ಯಾವ್ಳು ಬೇಕು ಅಂದ್ರೆ ಆವತ್ತು ಅವ್ಳ ಗಂಡನ್ನ ಗದ್ದೆಗೋ ತೋಟಕ್ಕೋ ಮಲಗೋಕೆ ಕಳ್ಸಿ ಇವ್ನೋಗಿ ಅವ್ನ ಹೆಂಡ್ತಿ ಜೊತೆ ಮಲಗ್ಬರ್ತಿದ್ದ. ಆ ಕಾಲ್ವೇನೋ ಅಂಗಿತ್ತು. ಓಗ್ಲಿ ಈಗ್ಲೂ ಅಂಗೆ ಅಂದ್ರೆ ಯಾರ್ಕೆಳ್ಬಿಟ್ಟರು" .

ಈ ಮಾತುಗಳನ್ನು ಗಮನಿಸಿದಾಗ ಹಿಂದಿನವರು ಹೆಣ್ಣನ್ನು ತಮಗೆ ಬೇಕಾದ ರೀತಿಯಲ್ಲಿ ಬಳಸಿಕೊಳ್ಳುತ್ತಿದ್ದರು. ಅದು ದೊಡ್ಡೇಗೌಡನ ವಂಶದಲ್ಲಿ ಸಹಜವಾದ ಸಂಗತಿಯಾಗಿತ್ತು. ಹಿಂದೆ ಅದನ್ನು ವಿರೋಧಿಸುವ ಮನಸ್ಸುಗಳು ಮೂಕವಾಗಿದ್ದವು. ಆದರೆ ಇಂದು ಅದನ್ನು ವಿರೋಧಿಸುವ ಅದರ ವಿರುದ್ಧ ಬಂಡಾಯ ಹೇಳುವ ದಾಸನಂತವರನ್ನು ಕಾಣಲಾಗುತ್ತಿದೆ.

ಶತಶತಮಾನದಿಂದಲ್ಲೂ ಈ ರೀತಿಯ ಸಂಕಷ್ಟವನ್ನು ಎದುರಿಸುತ್ತಲೇ ಇರುವ ಹೆಣ್ಣು ಇಂದಿಗೂ ಚನ್ನಂಜನಂತಹ ದುಷ್ಟ ಶಕ್ತಿಗಳಿಗೆ ಬಲಿಯಾಗುತ್ತಲೇ ಇದ್ದಾಳೆ. ಕೆಳವರ್ಗದವರಲ್ಲಿ ಅದನ್ನು ವಿರೋಧಿಸುವ ಮನಸ್ಸುಗಳು ಎದ್ದು ನಿಲ್ಲಬೇಕು. ಆಗ ಇಂತಹ ಎಷ್ಟೋ ಅಮಾಯಕ ಹೆಣ್ಣುಗಳ ಬದುಕು ಹಸನಾಗುತ್ತದೆ ಎಂಬುದು ವ್ಯಕ್ತವಾಗುತ್ತದೆ. ಇಂದಿನ ಗ್ರಾಮೀಣರಲ್ಲಿ ಈ ರೀತಿಯ ಘಟನೆಗಳನ್ನು ಇಂದು ಸಹ ಗಮನಿಸಬಹುದು. ವಿದ್ಯಾವಂತರಾಗಿ ಸಮಾನತೆಯನ್ನು ಬಯಸುತ್ತಿರುವ ಕೆಳವರ್ಗದವರಿಗೆ ನಗರ ಪ್ರದೇಶದಲ್ಲಿ ದೇವಾಲಯಗಳ ಪ್ರವೇಶ, ದೇವರ ಕಾರ್ಯದಲ್ಲಿ ಸಮಾನತೆಯನ್ನು ಕಾಣುತ್ತಿರುವುದು ಬದಲಾವಣೆಯ ಹಾದಿಯಲ್ಲಿದೆ ಎನ್ನಬಹುದು. ಆದರೆ ಗ್ರಾಮೀಣ ಸಮಾಜದಲ್ಲಿ ಅದನ್ನು ಸಂಪೂರ್ಣವಾಗಿ ಅಳಿಸುವುದು ಕಷ್ಟಕರ.

ತನ್ನ ಮಗಳ ಬಾಳನ್ನು ನೆನೆದು, ಕುದ್ರ ಹೊಂಬನಲ್ಲಿ ಹೊಸೂರಿನವರ ಮೇಲೆ ಸೇಡು ಮೂಡುತ್ತದೆ. ಬೆಂಕಿಯ ಕೆಂಡ ಹೊಟ್ಟೆಯಲ್ಲಿ ಹೊಕ್ಕಂತೆ ಆಗಿ ಮಗಳಿಗಾದ ಅನ್ಯಾಯದಿಂದ ಕುಬ್ಜನಾದ ಇಂತಹ ಅಸಹಾಯಕ ಸ್ಥಿತಿಯನ್ನು ಇನ್ನು ಎಷ್ಟುದಿನ ಸಹಿಸಿಕೊಳ್ಳಲು ಸಾಧ್ಯ? ಕೆಂಪೀರಿಗೆ ಆದ ಅನ್ಯಾಯಕ್ಕೆ ಪಂಚಾಯ್ತಿಯಲ್ಲಿ ನ್ಯಾಯಕ್ಕಾಗಿ ಹೋರಾಟ ಮಾಡುವ ದಾಸ ಒಂದು ಕಡೆಯಾದರೆ ಅದೇ ಕೆಂಪೀರಿಯನ್ನೇ ಚಾಕು ಚೂರಿಯಿಂದ ಹೆದರಿಸಿ, ಮಾಡಿದ ಮೋಸ ವಂಚನೆಯನ್ನು ಮುಚ್ಚಿಹಾಕುವ ದುಷ್ಟ ಚನ್ನಂಜನಂತಹವರು ಸಮಾಜದ ಅವನತಿಗೆ ಕಾರಣವಾಗುತ್ತಾರೆ. ಹೆಣ್ಣಿನ ಅಸಹಾಯಕ ಸ್ಥಿತಿ, ನೋವು, ನಿರಾಶೆ, ಅವಮಾನ ಎಲವೂ ಅವಳಿಗೆ ಬದುಕಿನಲ್ಲಿ ನೆಲೆಯಾಗಿ ನಿಲ್ಲಲ್ಲು ದಾರಿ ಕಾಣದಂತೆ ಮಾಡಿವೆ. ಎಲ್ಲವನ್ನು ಎದುರಿಸಿ ನಿಲ್ಲುವ ಧೈರ್ಯ ಅವಳಲ್ಲಿ ಬರಬೇಕು. ಅಂದು ಉತ್ತಮ ಬದುಕು ಅವಳಾದಾಗುತ್ತದೆ.

ಮೇಲ್ವರ್ಗದವರು ದೇವರ ಕಾರ್ಯ ಮಾಡುವುದು ಮಾದಲಾದವುಗಳಲ್ಲಿ ತಾವು ಮಾತ್ರ ಆರತಿ ಬೆಳಗುವುದು ಸಂಪ್ರದಾಯವಾಗಿತ್ತು. ಇದರಲ್ಲಿ ಸಮನತೆಯನ್ನು ಕಾಣಬೇಕೆಂಬ ಹಂಬಲದಿಂದ ಹೊಲೆಯರು ಬಂದದ್ದು ಗೌಡರಿಗೆ ತಮ್ಮ ಜೀವಿತದಲ್ಲಿ ನುಂಗಲಾರದ ತುತ್ತಾಯಿತ್ತು. ಹಿಂದಿನಿಂದ ಆಚರಿಸಿಕೊಂಡು ಬಂದಿರುವುದನ್ನು ಕೈ ಬಿಡಲು ಎಂದಿಗೂ ಸಾಧ್ಯವಿಲ್ಲ. ದೇವರಲ್ಲೂ ಭೇದವನ್ನು ಕಾಣುವ ಮೇಲ್ವರ್ಗದವರ ಕೆಟ್ಟತನದಿಂದ 'ಜಾತಿ ಕುಲ ಅನ್ನೊದ್ಯಾತ್ಕಾಯಿತು? ನಿಮ್ಗೇನೂ ದೇವ್ರು ದಿಂಡ್ರೆಲ್ಲ ಒಂದೆಯಾ ಅಂದ್ರೆ ನಮ್ಗೂ ಹಂಗೇ ಅಲ್ಲ' ಪ್ರತಿಯೊಂದು ಹಂತದಲ್ಲೂ ಕೆಳವರ್ಗದವರನ್ನು ತುಳಿಯುವ ಇಂತಹ ಪದ್ಧತಿಗಳಿಂದಲೇ ಅವರು ಕೆಳಗುಳಿದಿದ್ದಾರೆ.

ಒಟ್ಟಾರೆಯಾಗಿ ಸಮಾಜ ಬದಲಾವಣೆಯ ಹಾದಿಯಲ್ಲಿದ್ದರೂ ಇಂತಹ ಕ್ರೂರ ಪದ್ಧತಿಗಳು ಜಾರಿಯಲ್ಲಿರುವುದು ಶೋಚನೀಯ ಸಂಗತಿ ಎನ್ನಬಹುದು. ಜಾತಿಯ ಭೂತ ಗ್ರಾಮೀಣರಲ್ಲಿ ಇಂದಿಗೂ ಜೀವಂತವಾಗಿದ್ದು, ಕೆಳವರ್ಗದವರನ್ನು ನಡೆಸಿಕೊಳ್ಳುವ ಸ್ಥಿತಿಯನ್ನು ನೋಡಿದರೆ ಮರುಕ ಹುಟ್ಟುತ್ತದೆ. ಪ್ರಸ್ತುತದಲ್ಲಿ ಅದನ್ನು ವಿರೋಧಿಸುವ ಮನಸ್ಸುಗಳಿದ್ದರೂ ಸಹ ತಮಗಿರುವ ಕಟ್ಟುಪಾಡುಗಳಿಂದ ಮೂಕವಾಗಿರುವುದನ್ನು ಕಾಣಬಹುದು. ಎಲ್ಲೋ ಒಂದು ಕಡೆ ದಾಸ ತಮ್ಮ ಮೇಲಾಗುವ ಅನ್ಯಾಯವನ್ನು ಖಂಡಿಸಿ ವಿರೋಧಿಸುವ ವ್ಯಕ್ತಿಯಾಗಿದ್ದರೂ ಅದನ್ನು ಕೆಂಪೀರಿಯ ಅಪ್ಪ ಅದನ್ನು ನಂಬಿಕೊಂಡು

ಬದುಕುತ್ತಿದ್ದ ಹಳೆಯ ಜೀವಗಳು ತಮ್ಮ ಮೇಲಾಗುವ ಶೋಷಣೆಯನ್ನು ಸಹಿಸಿಕೊಳ್ಳುವುದನ್ನು ಕಾಣಬಹುದು. ಪ್ರತಿಯೊಂದು ಹಂತದಲ್ಲೂ ಮೇಲ್ವರ್ಗದವರಷ್ಟೇ ಸಮಾನತೆಯನ್ನು ಕೆಳವರ್ಗದವರಿಗೆ ಸಮಾಜದಿಂದ ದೊರೆಯವಂತೆ ಮಾಡಬೇಕು. ಉತ್ತಮವಾದ ಶಿಕ್ಷಣದಿಂದ ಯುವ ಜನಾಂಗ ಇದರ ಬಗ್ಗೆ ಬದಲಾವಣೆಯಾಗಿ ಹಿರಿಯರಲ್ಲಿ ತಿಳುವಳಿಕೆ ಮೂಡಿಸಬೇಕು. ಗ್ರಾಮೀಣ ಸಮಾಜದಲ್ಲಿರುವ ಇದರ ಬೇರನ್ನು ಪೂರ್ಣವಾಗಿ ನಾಶಪಡಿಸಲು ಸಾಧ್ಯವಿಲ್ಲ. ಆದರೆ ನಗರ ಪ್ರದೇಶದಲ್ಲಿ ದೇವಾಲಯಗಳಿಗೆ ಹೋಗುವ ಸ್ವಾತಂತ್ರ್ಯ ಸಿಕ್ಕಿದೆ. ಆದರೆ ಗ್ರಾಮೀಣರಲ್ಲಿ ಅದಕ್ಕೆ ಅವಕಾಶವಿಲ್ಲ. ಎಲ್ಲ ರೀತಿಯ ಸ್ಥಾನಮಾನ ಸೌಲಭ್ಯಗಳಿದ್ದರೂ ಸಹ ಅವರನ್ನು ನಿಕೃಷ್ಟವಾಗಿ ಕಾಣುವುದರಿಂದ ಸಮಾಜದದಲ್ಲಿ ಉಂಟಾಗುವ ಜಾತಿ ಜಾತಿ ನಡುವಿನ ಸಂಘರ್ಷವನ್ನು ಕಾಣಬಹುದು. ಅದರಿಂದ ಸಮಾನತೆಯನ್ನು ಕಾಣಲು ಸಾಧ್ಯವಾಗುವುದಿಲ್ಲ. ಯಾರೋ ಹಚ್ಚಿದ ಬೆಂಕಿಗೆ ಅಪ್ಪ ಮಗಳು ಬಲಿಯಾಗುವ ಇಂತಹ ಪ್ರಸಂಗಗಳು ಪ್ರಸ್ತುತಕ್ಕೆ ಹತ್ತಿರದಂತಿವೆ. ಯುವ ಪೀಳಿಗೆಯಲ್ಲಿ ಜಾತಿಯನ್ನು ವಿರೋಧಿಸುವ ದಾಸನಂತಹವರು ಸೋಲನ್ನು ಕಾಣುತ್ತಿದ್ದಾರೆ. ಕೇವಲ ಗ್ರಾಮೀಣರಲ್ಲಿ ಇದು ನಾಶವಾಗುವುದು ಮುಖ್ಯವಲ್ಲ. ಇಡೀ ಸಮಾಜದಿಂದ ನಾಶವಾಗಬೇಕು. ಆ ದಿನಗಳು ಬರಬಹುದೆಂಬ ನಿರೀಕ್ಷೆಯನ್ನು ಲೇಖಕರು ವ್ಯಕ್ತಪಡಿಸುತ್ತಾರೆ. ಹಾಗಾಗಿ ಉತ್ತಮ ಸಮಾಜವನ್ನು ಕಾಣಬೇಕಾದರೆ ಇವೆಲ್ಲಾವು ನಿಂತು ಸಮಾನತೆಯ ಬೀಜ ಮೊಳಕೆ ಕಾಣಬೇಕು. ಒಬ್ಬ ರೈತನ ಮಗನಾಗಿ ಹುಟ್ಟಿ ಹತ್ತಿರದಿಂದ ಕಂಡ ಕೆಳವರ್ಗದವರ ಮೇಲಾಗುವ ದಮನೀಯತೆಯನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ.

೪.೨ ಕೌಟುಂಬಿಕ ಚಿತ್ರಣ

ಸಮಾಜದಲ್ಲಿ ಮನುಷ್ಯ ತನ್ನದೇ ಆದ ರೂಢಿ, ಸಂಪ್ರದಾಯ, ಆಚಾರ-ವಿಚಾರ, ನಂಬಿಕೆಗಳನ್ನು ಇಟ್ಟುಕೊಂಡು ಕೌಟುಂಬಿಕ ಚೌಕಟ್ಟನ್ನು ಮಾಡಿಕೊಂಡು ಜೀವಿಸುತ್ತಿದ್ದಾನೆ. ಅಲ್ಲಿಯು ಸಹ ಪ್ರೀತಿ, ವಿಶ್ವಾಸ, ಆತ್ಮೀಯತೆ, ದ್ವೇಷ, ಅಸೂಯೆ, ತಾರತಮ್ಯವನ್ನು ಕಾಣಲಾಗುತ್ತದೆ. ಆದರೆ ಇಂದು ಕುಟುಂಬಗಳ ಮೇಲೆ ಆಧುನಿಕತೆಯ ಪ್ರಭಾವ ಉಂಟಾಗಿ ಅಲ್ಲಿ ಅನ್ಯೋನ್ಯತೆ, ಸಹಬಾಳ್ವೆ ಕಣ್ಮರೆಯಾಗಿವೆ. ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ ಮುಂತಾದ ಸಂಬಂಧಗಳ ಮೌಲ್ಯಗಳು ಕಡಿಮೆಯಾಗಿ ಇಲ್ಲವಾಗುತ್ತಿವೆ.

ಗ್ರಾಮಿಣ ಪ್ರದೇಶಗಳಲ್ಲಿ ಬದುಕುತ್ತಿರುವ ಜನರು ವಿವಿಧ ಸಂಕಷ್ಟಗಳನ್ನು ಎದುರಿಸುತ್ತಾರೆ. ಬೆಳೆದ ಬೆಳೆ ಕೈ ಹತ್ತದೇ ಹೋಗುವುದು, ಕೌಟುಂಬಿಕ ಕಲಹಗಳು, ಕುಟುಂಬಗಳಲ್ಲಿ ಬರುವ ಸೇಡು, ಕೆಟ್ಟ ಚಟಗಳಿಂದ ಬಲಿಯಾಗುವ ಘಟನೆಗಳನ್ನು ಲೇಖಕರು ತಮ್ಮ ಕಥೆಗಳ ಮೂಲಕ ತಿಳಿಸಿದ್ದಾರೆ. ಕುಟುಂಬದಲಿ ನಡೆಯುವ ಕಲಹಗಳು,ಶೋಷಣೆ ಜೀವನ ಕ್ರಮ, ನೋವು ನಲಿವುಗಳನ್ನು ಚಿತ್ರಿಸಿದ್ದಾರೆ. ಹಿಂದಿನ ಮತ್ತು ಇಂದಿನ ತಲೆಮಾರುಗಳ ನಡುವಿನ ಸಂಘರ್ಷ, ಕುಟುಂಬಗಳಲ್ಲಿ ಬಿರುಕು ಮೂಡಿ ಛಿದ್ರವಾಗುತ್ತಿರುವ ಬಗೆಯನ್ನು ಕಾಣಬಹುದು. ಗ್ರಾಮೀಣರೆಲ್ಲರು ಬದುಕು ಕೂಡಿ ಬಾಳುವಂತಾಗಬೇಕು. ಹಳ್ಳಿಗಳು ಅಭಿವೃದ್ಧಿ ಕಂಡು ಉತ್ತಮ ಬದುಕು ನಡೆಸಬೇಕು. ಆ ಮೂಲಕ ಸಮಾಜವನ್ನು ಕಾಣಲು ಬಯಸಿದ್ದಾರೆ. ಸಮಾಜದಲ್ಲಿ ಯಾವುದೇ ಕೆಡುಕ್ಕಿಲ್ಲದೆ ಭ್ರಷ್ಟಚಾರಗಳಿಲ್ಲದೆ, ಶೋಷಣೆಗಳಿಲ್ಲದೆ ಸಮಾನತೆ ಇದ್ದು ಶಾಂತಿ ತುಂಬಿ ಗ್ರಾಮೀಣ ಪ್ರದೇಶ ರಾಮರಾಜ್ಯವಾಗಬೇಕು, ಕುಟುಂಬ ನಡುವೆ ಸೌಹಾರ್ದತೆ ಇರಬೇಕು ಎಂಬುದನ್ನು ತಮ್ಮ ಕತೆಗಳಲ್ಲಿ ಎತ್ತಿಹಿಡಿದ್ದಾರೆ.

ಕುಟುಂಬಗಳಲ್ಲಿ ಬರುವ ಸಂಬಂಧಗಳ ನಡುವಿನ ಸಂಘರ್ಷ ಜೊತೆಗೆ ಇನ್ನೊಬ್ಬರ ಮಾತಿಗೆ ಕಿವಿಗೊಟ್ಟು ಮನೆಯಲ್ಲಿ ಪಾಲು ಪಡೆದು ಬೇರೆಯಾಗಿ ಬದುಕುವ ಮತ್ತು ಸಂಬಂಧಗಳ ಬಾಂಧವ್ಯವನ್ನು ಅರಿತು ಜೊತೆಗೂಡಿ ಬದುಕುವ ಘಟನೆಗಳನ್ನು **'ಗೋಡೆ'** ಮತ್ತು **'ರಾಜಿ'** ಕಥೆಯಲ್ಲಿ ನೋಡಬಹುದು.

ಕಿರಿಯ ಮಗ ಓದಿ ವಿದ್ಯಾವಂತನಾದರೆ, ಹಿರಿಯ ಮಗ ಉಂಡಾಡಿ ಗುಂಡನಂತೆ ತಿರುಗಾಡಿಕೊಂಡು, ಹೆಂಡತಿಯ ಮಾತು ಕೇಳಿ ಕಾಲ ಕಳೆಯುತ್ತಿದ್ದನು. ಇನ್ನೊಬ್ಬರ ಮಾತಿಗೆ ಕಿವಿಗೊಟ್ಟು ಮನೆಯಲ್ಲಿ ತಂದೆ ಸತ್ತಿದ್ದರೂ ಪಾಲು ಕೊಡಬೇಕೆಂದು ದುಂಬಾಲು ಬೀಳುವುದು ನೋಡಿದರೆ, ಆಸ್ತಿಗಾಗಿ ಹೆತ್ತವರನ್ನೇ ಮರೆಯುವ ಮಕ್ಕಳನ್ನು ನೆನೆದರೆ ಹೇಸಿಗೆಯಾಗುತ್ತದೆ. ಸಮಾಜದಲ್ಲಿ ಬದುಕು ಸಾಗಿಸುತ್ತಿರುವ ಮನುಷ್ಯನಿಗೆ ತಿಳುವಳಿಕೆ ಇಲ್ಲದೆ ಇನ್ನೊಬ್ಬರ ಮಾತಿಗೆ ಕಿವಿಗೊಟ್ಟು ಅವರ ಜೊತೆಗೂಡಿ ಕುಟುಂಬಗಳನ್ನು ಒಡೆಯುತ್ತಿರುವುದನ್ನು **'ಗೋಡೆ'** ಕಥೆಯಲ್ಲಿ ಕಾಣಬಹುದು. ತಾತ ಮುತ್ತಾತರ ಕಾಲದಿಂದ ಉಳಿಸಿಕೊಂಡು ಬಂದ ಭೂಮಿಯನ್ನು ನೋಡಿಕೊಳ್ಳುವ ಮನಸ್ಸು ಇಲ್ಲವಾಗಿದೆ. ಹಿಂದಿನವರಿಗೆ ಮನೆಯನ್ನು ಭಾಗ ಮಾಡುವುದೆಂದರೆ ತಮ್ಮ ಅಸ್ಥಿತ್ವವನ್ನೆ ಕಳೆದುಕೊಂಡಂತೆ ಎಂದುಕೊಂಡು ಬದುಕುತ್ತಿದ್ದರು. ಆದರೆ ಕಥೆಯಲ್ಲಿ ಬರುವ ಶಂಕರನ ಅಣ್ಣನಿಗೆ ತಂದೆಯ ಸಾವಿಗಿಂತ ತನಗೆ ಬರಬೇಕಾದ ಆಸ್ತಿಯ ಭಾಗವೇ ಹೆಚ್ಚಾಗುತ್ತದೆ. ಜನರು ಕುಟುಂಬಗಳಲ್ಲಿ ಒಟ್ಟಿಗೆ ಜೀವನ ಮಾಡಲು ಬಯಸುತ್ತಿಲ್ಲ. ಆಧುನಿಕತೆಯ ಗಾಳಿ ಅತಿಯಾಗಿ ಬೀಸಿ ಎಲ್ಲ ಬದಲಾವಣೆಯ ಕಡೆಗೆ ಮುಖ ಮಾಡುತ್ತಿದ್ದಾರೆ. ವಿದ್ಯಾವಂತನಾದ ಶಂಕರನಿಗೆ ತನ್ನ ಅಣ್ಣ ಜೊತೆಗಾರನ ಜೊತೆ ಪಾಲು ಕೇಳಲು ಬಂದದ್ದು ಮನಸ್ಸಿಗೆ ಅಗಾದವಾದ ನೋವು ಉಂಟುಮಾಡುತ್ತದೆ. "ನೋಡಿ, ನೀವೆಲ್ಲಾ ನನಗಿಂತ ಹಿರಿಯರು ಈಗ ನಾವು ಯಾವ ಸ್ಥಿತೀಲಿ ಇದ್ದೀವಿ ಏನು ಯಾವುದನ್ನೂ ವಿಚಾರಿಸದೆ, ಯೋಚಿಸದೆ ಈಗಲೇ ಪಾಲಿನ ಬಗ್ಗೆ ವಿಚಾರಿಸಿದರೆ ನಾವೇನೇಳೋದು? ನೀವೇ ಯೋಚಿಸಿ. ನಮ್ಮಪ್ಪ ಇಲ್ಲಿ ತನಕ ಬಾಳಿದ: ನಾವು ಅವನಷ್ಟು ಬಾಳದಿದ್ದರೂ ಬೇಡ, ಸ್ವಲ್ಪವಾದ್ರೂ ಬಾಳಬೇಡ್ವೆ? ಅಪ್ಪನ ದೇಹ ಇನ್ನೂ ಸಹ ಮಣ್ಣಿಗೆ ಬಿದ್ದಿಲ್ಲ ಆಗಲೇ ನೀವೆಲ್ಲಾ ಪಾಲಿನ ವಿಷಯಕ್ಕೆ ಬಂದಿದ್ದೀರಿ. ನೀವೆಲ್ಲಾ ಹಳ್ಳಿಯ ಹಿರಿಯರು ನೀವು ತಿಂದ ಅನ್ನಕ್ಕಾದರೂ ಬೆಲೆ ಕೊಡಿ. ನೀವೇನು ಮನುಷ್ಯರೋ ಪಶುಗಳೋ?" ಈ ಮಾತುಗಳನ್ನು ಗಮನಿಸಿದಾಗ ಗ್ರಾಮೀಣ ಸಮಾಜದಲ್ಲಿ ಕುಟುಂಬಗಳಲ್ಲಿ ಜೊತೆಯಾಗಿ ಬುದಕುವುದಿರಲಿ, ಹೆತ್ತವರ ಬಗ್ಗೆ ಕಾಳಜಿ, ಪ್ರೀತಿ, ವಿಶ್ವಾಸ, ಮಾನವಿಯತೆಯನ್ನು ಕಳೆದುಕೊಂಡು ವರ್ತಿಸುವ ಮಕ್ಕಳು ಪ್ರಾಣಿಗಳಿಗಿಂತ ಕೆಳಮಟ್ಟಕ್ಕೆ ಇಳಿದಿದ್ದಾರೆ.

ಹುಟ್ಟುತ್ತಾ ಅಣ್ಣ–ತಮ್ಮಂದಿರು ಬೆಳೆ ಬೆಳೆಯುತ್ತಾ ದಾಯಾದಿಗಳು ಎಂಬ ಹಿರಿಯರ ಗಾದೆಯಂತೆ ಕುಟುಂಬದಲ್ಲಿ ಕಲಹಗಳು ಹೆಚ್ಚಾಗಿ, ಇಂದು ಬದುಕುವ ರೀತಿಯೇ ಬದಲಾಗಿದೆ. ತಂದೆ, ತಾಯಿ, ಅಕ್ಕ, ತಂಗಿಯರ ಬಾಂಧವ್ಯ ಎಲ್ಲವೂ ಕಣ್ಮರೆಯಾಗುತ್ತಿದೆ. ಕೊನೆಗೂ ಕಿತ್ತು ತಿನ್ನುವ ರಣಹದ್ದುಗಳ ಮಾತು ಕೇಳಿ ಪಾಲು ತೆಗೆದುಕೊಂಡ ಶಂಕರನ ಅಣ್ಣ ಮನೆಯಲ್ಲಿ ದೊಡ್ಡದಾದ ಗೋಡೆಯನ್ನು ಹಾಕಿದ್ದು, ತನ್ನ ಮತ್ತು ಅಣ್ಣನ ಮಧ್ಯೆ ಬೃಹದಾಕಾರವಾದ ಗೋಡೆಯೇ ಹಾಕಿದಂತಾಯಿತು.

ಗ್ರಾಮೀಣರಲ್ಲಿ ಈ ರೀತಿಯ ಮನೋಭಾವನೆ ಮೊದಲು ದೂರವಾಗಬೇಕು. ಕೂಡಿ ಬಾಳುವ ಮನಸ್ಸುಗಳು ಕಡಿಮೆಯಾಗುತ್ತಿರುವುದರಿಂದ ಗ್ರಾಮೀಣ ಜನ ಜೀವನ ದುಸ್ಥಿತಿಗೆ ಬಂದು ತಲುಪಿದೆ. ಒಟ್ಟಿಗೆ ಬದುಕುವವರ ಮಧ್ಯೆ ಬರುವ ದುಷ್ಟ ಶಕ್ತಿಗಳ ಮಾತಿಗೆ ಕಿವಿಗೊಟ್ಟು ಇಂದಿನ ಯುವ ಜನಾಂಗ ಅಧಃ ಪತನದ ಹಾದಿಯಲ್ಲಿ ಹೋಗುತ್ತಿರುವುದು, ಕೆಟ್ಟ ಪರಿಣಾಮವನ್ನು ಬೀರಬಲ್ಲ ವಿಷಾದದ ಸಂಗತಿಯಾಗಿದೆ.

ಸಮೃದ್ಧಿಯಾಗಿ ಮಳೆಯಾಗಿ ಬೆಳೆಯಾದರೆ ರೈತನ ಸಂಭ್ರಮ ಹೇಳಲಾಗದು. ಊರಲ್ಲಿ ಕೆರೆ ತುಂಬಿತು ಎಂದರೆ ಮಣ್ಣಿನ ಮಕ್ಕಳಿಗಾಗುವ ಸಡಗರಕ್ಕೆ ಪಾರೆಯಿಲ್ಲ. ಈ ರೀತಿಯ ಬದುಕನ್ನು ಬಯಸುವ ಹಳ್ಳಿಗಾಡಿನ ರೈತರು ಒಟ್ಟಿಗೆ ದುಡಿದು ಬದುಕುತ್ತಿದ್ದವರು. ತಲಾತಲಾಂತರದಿಂದ ಯಾವುದೇ ವ್ಯವಹಾರಕ್ಕೆ ಹೋಗದೆ ಜೀವನ ಮಾಡುತ್ತಿದ್ದ ದೊಡ್ಡಟ್ಟಿ ಬೋರೇಗೌಡರಿಗೆ ತಮ್ಮ ಕಿರಿಯ ಮಗ ಸಣ್ಣಪ್ಪನ ಛೇರ್ಮನ್ನಿಕೆ ನುಂಗಲಾರದ ತುತ್ತಾಗಿತ್ತು. ಸಣ್ಣ ಪುಟ್ಟ ಪುಂಡ ಪೋಕರಿಗಳ ಜೊತೆ, ಅಲೆದುಕೊಂಡು ತಿರುಗಾಡುತ್ತಿದ್ದುದು ದೊಡ್ಡಟ್ಟಿಯ ಹೆಸರಿಗೆ ಕಪ್ಪು ಬಳಿದಂತಾಯಿತು.

ಬೋರೇಗೌಡರ ದೊಡ್ಡಟ್ಟಿಯೆಂದರೆ ಹೆಸರುವಾಸಿಯಾದ ಮನೆತನ. ಅದನ್ನು ನಾಶಪಡಿಸಿ ಒಡಕು ಉಂಟು ಮಾಡುವ ಸಲುವಾಗಿ, ಹಿರಿಯ ಮಗ ರಾಮಲಿಂಗನ ಮೇಲೆ ತಮ್ಮ ಸಣ್ಣಪ್ಪನನ್ನು ಎತ್ತಿಕಟ್ಟಿ ಬಿರುಕು ಮೂಡಿಸುವಂತಹ ಪ್ರಸಂಗವನ್ನು **'ರಾಜಿ'** ಕಥೆಯಲ್ಲಿ ಕಾಣಬಹುದು. ಸಣ್ಣಪ್ಪನ ಪರವಾಗಿ ಶ್ರೀಕಂಠ, ರಾಮಲಿಂಗನ ಪರವಾಗಿ ಸೇರಿದ ಪುಟ್ಟರಾಮಣ್ಣ ಸೇರಿಕೊಂಡು ಪರಸ್ಪರರಲ್ಲಿ ಭಿನ್ನಾಭಿಪ್ರಾಯ ಉಂಟಾಗುವಂತೆ ಮಾಡಿ ದೊಡ್ಡಟ್ಟಿಯನ್ನು ಎರಡು ಭಾಗ ಮಾಡಲು ಒಳಸಂಚು ನಟೆಸುತ್ತಾರೆ. ಕೇವಲ ಹೊಲ ಉಳುವಾಗ ತೆವರಿಗೆ ನೆಟ್ಟಿದ್ದ ಕಲ್ಲು ಕಿತ್ತು ಬಿದ್ದ ಸಣ್ಣ ವಿಷಯವನ್ನೇ ದೊಡ್ಡದು ಮಾಡುತ್ತಾರೆ. ಇದಕ್ಕಾಗಿಯೇ ಕಾಯುತ್ತಿದ್ದ ಪುಟ್ಟರಾಮಣ್ಣ ಶ್ರೀಕಂಠನಂಥವರು ಜಗಳ ತೆಗೆಯುತ್ತಾರೆ. ಎರಡು ಕಡೆಯವರಿಗೂ ಕೈ ಮಿಲಾಯಿಸಿ ಕೊನೆಗೆ ಸಣ್ಣಪುಟ್ಟಗಾಯಗಳಾಗುತ್ತವೆ. ಜೊತೆಗೆ ಸಣ್ಣೂರಿಗೆ ಪೋಲಿಸ್ ಪಡೆಯ ಆಗಮನವಾಗುತ್ತದೆ.

ನಿಜಕ್ಕೂ ಈಗ ಬೋರೆಗೌಡರ ದೊಡ್ಡಟ್ಟಿ ಒಡೆಯಲಾರಂಭಿಸಿತು. ರಾಮಲಿಂಗನಿಗೆ ಅವನ ತಂದೆ ಸಾಯುವಾಗ ಹೇಳಿದ ಮಾತುಗಳು ನೆನಪಾದವು. ಮನಸ್ಸು ಮನೆತನದ ಹೆಸರನ್ನು ಉಳಿಸಲು ತವಕಿಸಿತು. ಇದರಿಂದ ತಮ್ಮಡೊನೆ ರಾಜಿ ಮಾಡಿಕೊಳ್ಳುವ ಮನಸ್ಸು ಮಾಡಿ ಅದನ್ನು ಪುಟ್ಟರಾಮನೊಡನೆ ಪ್ರಸ್ತಾಪಿಸುತ್ತಾನೆ. ದೊಡ್ಡಟ್ಟಿಯ ಗೋಡೆ ಉರುಳುವ ಪ್ರಸಂಗವನ್ನು ನೋಡಲು ಕಾಯುತ್ತಿದ್ದ ಪುಟ್ಟರಾಮಣ್ಣ ಅದನ್ನು ಕೇಳಿ 'ಏನ್ಲಾ ಹೀಗೇಳ್ತಿದ್ದಿ! ನೀನೊಪ್ಪಕೊಂಡ್ರೆ ಅವರೊಪ್ಪರಪ್ಪಾ. ನಿನ್ಗೂ ಬುದ್ದಿ ಇಲ್ಲ ಹೋಗಿ ಅಡ್ಡ ಬಿದ್ದು ಕೇಳ್ಕೋ' ಎಂಬ ವ್ಯಂಗ್ಯ ಮಾತುಗಳನ್ನು ಆಡುತ್ತಾನೆ.

ಕುಟುಂಬದಲ್ಲಿ ಪರಸ್ಪರರು ತಮ್ಮ ಕಲಹವನ್ನು ಮರೆತು ಒಂದಾಗಿ ಜೀವನ ನಡೆಸಲು ಬಯಸಿದರೂ ಸಹ ಸಮಾಜದ ಜನರು ಅದಕ್ಕೆ ಅವಕಾಶ ಕೊಡದೆ ದ್ವೇಷ ಮುಂದುವರಿಯುವಂತೆ ಮಾಡುತ್ತಾರೆ ಎಂಬುದಕ್ಕೆ ಇದು ನಿದರ್ಶನವಾಗಿದೆ.

ಪಾಳೇಗಾರಿಕೆಯ ಸವಿಯನ್ನು ಕಂಡ ದೊಡ್ಡಟ್ಟಿ ಒಳ್ಳೆಯ ಮನೆತನ ಎಂಬ ಹೆಸರು ಪಡೆದಿತ್ತು. ಅಂಥ ಮನೆತನದಲ್ಲಿ ಹುಟ್ಟಿದ ಬೋರೇಗೌಡರು ಯಾರಿಗೂ ಕೆಡುಕಾಗದಂತೆ, ದರ್ಪ ದಬ್ಬಾಳಿಕೆ ನಡೆಸದೆ ಪ್ರೀತಿಯಿಂದ ಉತ್ತಮ ಜೀವನ ನಡೆಸಿ ಒಳ್ಳೆಯ ಹೆಸರು ಪಡೆದಿದ್ದರು. ಆದರೆ ಅಂಥ ವ್ಯಕ್ತಿ ಮತ್ತು ಮನೆತನಗಳನ್ನು ಇಂದು ಕಾಣಲಾಗುತ್ತಿಲ್ಲ.

ಅಣ್ಣ ತಮ್ಮಂದಿರು ಬೆರೆಯವರ ಮಾತು ಕೇಳಿ ಪರಸ್ಪರ ದ್ವೇಷ ಸಾಧಿಸುತ್ತ ವ್ಯಾಜ್ಯವಾಡತೊಡಗಿದರು. ರಾಮಲಿಂಗ ಸಾಲಗಾರನಾಗುತ್ತಾ ಬಂದ. ಸಣ್ಣಪ್ಪ ತನ್ನ ಆಸ್ತಿಯನ್ನೆಲ್ಲ ಕಳೆದುಕೊಳ್ಳತೊಡಗಿದ. ಆದರೆ ರಾಮಲಿಂಗನಿಗೆ ತನ್ನ ತಂದೆ ವಂಶದ ಜ್ಯೋತಿಯನ್ನು ಎತ್ತುವ ಭಾರ ಹೊರಿಸಿದ್ದಾರೆ ಎಂಬುದು ಪದೇ ಪದೇ ನೆನಪಾಗುತ್ತಿತ್ತು. ಇತ್ತ ಸಾಲ ಹೆಚ್ಚಾಗಿ ಜೀವನ ನಡೆಸುವುದು ಕಷ್ಟವಾಯಿತು. ಅತ್ತ ಸಣ್ಣಪ್ಪನ ಸ್ಥಿತಿಯು ಹಾಗೆಯೇ ಆಯಿತು. ಆಗ ಜಮೀನನ್ನು ಮಾರುವುದೇ ದಾರಿ

ಎಂದುಕೊಂಡ. ಅದನ್ನು ಸಹಿಸಲಾಗದೆ ಸಾರಾಯಿ ಕುಡಿಯಲಾರಂಭಿಸಿದ. ಆಗ ಅಅವನಿಗೆ "ತಾತ ಮತ್ತಾತರ ಕಾಲದಿಂದ ಬೆಳೆದು ಬಂದ ಮನೆಯೊಂದಿದೆ. ಅದನ್ನು ಮಾರಿಬಿಟ್ಟರೆ ಇನ್ನು ಉಳಿಯೂವುದೇನೂ ಇಲ್ಲ. ಅದನ್ನು ಮಾರಲು ಅವನಿಗೆ ಇಷ್ಟವಿಲ್ಲ. ಅವನಿಗೆ ಹಣ, ಅಂತಸ್ತು, ಚಾಡಿ ಮಾತುಗಳು ತನ್ನನ್ನು ಯಾವ ರೀತಿ ಕೆಳಗೆ ತುಳಿದವು ಎಂಬುದು ಈಗ ಅರಿವಾಯಿತು". ನಂತರ ಇಬ್ಬರೂ ರಾಜಿಯ ಕಡೆ ಮನಸ್ಸು ಮಾಡಿ ರಾಜಿಯಾದರು. ಕೊನೆಗೆ ರಾಮಲಿಂಗ ಹೊಲದಲ್ಲಿ ಹೂತಿಟ್ಟಿದ್ದ ತಂದೆ ಕೊಟ್ಟಿದ್ದ ಆಸ್ತಿಯನ್ನು ತಮ್ಮನೊಡನೆ ಹೋಗಿ ತಂದು ಸಮನಾಗಿ ಪಾಲು ಮಾಡುತ್ತಾನೆ. ಜೊತೆಗೆ "ಹಸಿರು ಭೂಮಿಯಲ್ಲಿ ಕಪ್ಪು ಚುಕ್ಕಿಯಂತೆ ನಿಂತ ದೊಡ್ಡಟ್ಟಿಯ ಗದ್ದೆಯನನ್ನು ರಾಮಲಿಂಗ ಮತ್ತು ಸಣ್ಣಪ್ಪ ಇಬ್ಬರೂ ಉಳುತ್ತಿದ್ದರು" ದೊಡ್ಡಟ್ಟಿಯ ಮೆಲೆ ಕವಿದಿದ್ದ ಕತ್ತಲೆ ದೂರಾಗಿ ಮನೆ ಮತ್ತು ಮನದಲ್ಲಿ ಬೆಳಕು ಮೂಡಿತು.

ಹಿಂದಿನವರು ನಂಬಿಕೊಂಡು ಬಂದ ಆಚಾರ-ವಿಚಾರ, ಸಂಪ್ರದಾಯ ರೂಢಿಗಳನ್ನು ನಂಬಿ ಬದುಕುವ ರೀತಿನೀತಿಯನ್ನು ಇಂದಿನವರು ಮರೆಯುತ್ತಿದ್ದಾರೆ. ಇಂತಹ ವಂಚಕರ ಮೋಸದ ಮಾತುಗಳಿಗೆ ಬೆರಗಾಗಿ ಎಷ್ಟೋ ಬಡ ಕುಟುಂಬಗಳು ಹೊಡೆದು ಹೋಗುತ್ತಿವೆ. ತಂದೆ-ಮಕ್ಕಳ ಮಧ್ಯೆ ಅಣ್ಣ-ತಮ್ಮಂದಿರ ಮಧ್ಯೆ ವಿರಸವನ್ನು ತಂದು ತಮಾಷೆ ನೋಡುವ ಇಂಥ ನಯವಂಚಕರು ಸಮಾಜಕ್ಕೆ ಧಕ್ಕೆ ತರುವ ಕೆಟ್ಟ ಹುಳುಗಳಾಗಿದ್ದಾರೆ. ಅವುಗಳ ನಿರ್ನಾಮವಾಗದ ಹೊರತು ಪ್ರಗತಿ ಸಾಧ್ಯವಿಲ್ಲ. ಜೊತೆಗೆ ಅಂಥವರ ಮಾತು ಕೇಳಿ ಜೀವನದಲ್ಲಿ ನೋವನ್ನು ಅನುಭವಿಸದೆ ಎಚ್ಚರಿಕೆಯಿಂದ, ಹೊಂದಾಣಿಕೆಯಿಂದ ಇರಬೇಕೆಂದು ಕಥೆಗಾರರು ಹೇಳಿದ್ದಾರೆ.

ಸಮಾಜದಲ್ಲಿ ಹೆಣ್ಣು ಕೆಲವೊಮ್ಮೆ ಸ್ವಾರ್ಥ, ಲೋಭದಿಂದ ತಾನು ಕೈಗೊಳ್ಳುವ ಕಾರ್ಯಗಳು ಹೇಗೆ ತನಗೆ ಮತ್ತು ಸಮಾಜಕ್ಕೆ ಮುಳುವಾಗುತ್ತವೆ ಎಂಬುದನ್ನು **'ಸೇಡು'** ಕಥೆಯಲ್ಲಿ ಕಾಣಬಹುದು. ಅಷ್ಟೇ ಅಲ್ಲದೆ ಏನೂ ಅರಿಯದ ಪುಟ್ಟಕ್ಕನ ಮುಗ್ಧ ಮಗಳು ಅತ್ಯಾಚಾರಕ್ಕೊಳಗಾಗುವ ದುರಂತ ಘಟನೆಯು ನಡೆಯುತ್ತದೆ.

ಪುಟ್ಟಕ್ಕ ತನ್ನ ಸ್ವಾರ್ಥ ಬುದ್ಧಿಯಿಂದ ಜವರನನ್ನು ಉಪಯೋಗಿಸಿಕೊಂಡು ಜೀವನ ಸಾಗಿಸುತ್ತಿದ್ದಳು. ಪುಟ್ಟಕ್ಕನ ಮಗಳ ಮೇಲಿನ ಮೋಹದಿಂದ ಜವರ ಊರಲ್ಲಿ ತೆಂಗಿನಕಾಯಿ, ಬಾಳೆ, ಮುಂತಾದವುಗಳನ್ನು ಕಳ್ಳತನ ಮಾಡಿ ಪುಟ್ಟಕ್ಕನಿಗೆ ನೆರವು ನೀಡುತ್ತಿದ್ದ. ಅದೇ ಊರಿನ ಅಪ್ಪಾಜಿಯನ್ನು ಇಟ್ಟುಕೊಂಡು ಕುಟುಂಬಕ್ಕೆ ಆಧಾರವಾಗಿ ಪುಟ್ಟಕ್ಕನ ಅಕ್ರಮ ಸಂಬಂಧ ಗಂಡನಿಗೆ ಗೊತ್ತಾಗಿ ನೊಂದು ಗಂಡ ಸಾವಿಗೆ ಬಲಿಯಾಗುತ್ತಾನೆ. ಜವರನಿಂದ ಹೇಗೋ ಜೀವನ ಸಾಗಿಸುತ್ತಿದ್ದ ಪುಟ್ಟಕ್ಕ ದಿನದಿಂದ ದಿನಕ್ಕೆ ಜವರನಿಂದ ಕಳ್ಳತನದ ಕೆಲಸ ಹೆಚ್ಚು ಮಾಡಿಸಲು ಅವನನ್ನು ಪ್ರೇರೆಪಿಸುತ್ತಾಳೆ.

ಸಮಾಜದಲ್ಲಿ ಎಷ್ಟೋ ಕುಟುಂಬದಲ್ಲಿ ನಡೆಯುವ ಈ ರೀತಿಯ ಅಕ್ರಮ ಸಂಬಂಧಗಳನ್ನು ಕಾಣುತ್ತಲೇ ಬಂದಿದ್ದೇವೆ. ಸಮಾದಲ್ಲಿ ಹೆಣ್ಣಿಗೆ ನಿರ್ಬಂಧಗಳಿದ್ದರೂ, ಇಂತಹ ಕೆಟ್ಟ ಕೆಲಸಗಳಿಗೆ ಕೈ ಹಾಕುತ್ತಲೇ ಬಂದಿರುವುದು ಶೋಚನೀಯವಾದ ಸಂಗತಿಯಾಗಿದೆ. ಹೆಣ್ಣು ಕುಟುಂಬದಲ್ಲಿ ತಾಯಿಯಾಗಿ, ಹೆಂಡತಿಯಾಗಿ ಮಗಳಾಗಿ ಬದುಕುತ್ತಿದ್ದಾಳೆ. ಪುಟ್ಟಕ್ಕ ತನ್ನ ಸ್ವಾರ್ಥಕ್ಕೆ ಜವರನ ಜೀವನವನ್ನೇ ಹಾಳು ಮಾಡುವುದನ್ನು ಕಾಣಬಹುದು. ದಿನದಿಂದ ದಿನಕ್ಕೆ ಹೆಚ್ಚಾದ ಕಳ್ಳತನದಿಂದ, ಮಗಳು ದುಂಡಿಯ ಮೋಹಕ್ಕೆ ಬಿದ್ದು ಅವಳನ್ನೇ ಮದುವೆಯಾಗುವ ಆಸೆಯಲ್ಲಿದ್ದ ಜವರನಿಗೆ ಆದದ್ದೇ ಬೇರೆ.

ಚಿಕ್ಕೀರಣ್ಣನಿಗೆ ಮೂರು ಮಕ್ಕಳಲ್ಲಿ ಎರಡನೇಯವ ಜವರ ಒಳ್ಳೆಯ ತಂದೆಗೆ ಒಳ್ಳೆಯ ಮಗ ಹುಟ್ಟಲಿಲ್ಲ ಎಂಬುದೆ ಚಿಂತೆಯಾಗಿತ್ತು. ಐನೋರಾ ತೋಟದಲ್ಲಿ ಕದ್ದ ಬಾಳೆ, ತೆಂಗು, ಅಡಿಕೆಯನ್ನು ತಂದು ಪುಟ್ಟಕ್ಕನಿಗೆ ಕೊಡುತ್ತಿದ್ದುದು. ಚಿಕ್ಕೀರಣ್ಣನಿಗೆ ನುಂಗಲಾರದ ತುತ್ತಾಗಿತ್ತು. ಮಕ್ಕಳು ದೊಡ್ಡವರಾದ ಮೇಲೆ ಜೊತೆಗಾರನಾಗಿ ಕಾಣು ಎನ್ನುವ ಹಾಗೆ, ಆದರೆ ಗಿಡ ಬೆಳ್ದು ಮರವಾಗ್ಬುಟ್ಟಿದೆ ಎಂದು ಜವರನನ್ನು ನೆನೆದು ಚಿಂತೆಗೀಡಾಗುತ್ತಾನೆ. ಪುಟ್ಟಕ್ಕನಿಗೆ ಮನೆಯಲ್ಲಿ ಯಾರೂ ಗಂಡು ದಿಕ್ಕಿಲ್ಲದ್ದರಿಂದ ಜವರನನ್ನು ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂದಿದ್ದವಳು. ಜವರನಿಗೆ ತಂದೆ ಮನೆಯಲ್ಲಿ ಜಾಗವಿಲ್ಲ, ಆಸ್ತಿಯಲ್ಲಿ ಪಾಲು ಇಲ್ಲ ಎಂದಾಗ ಪುಟ್ಟಕ್ಕನಿಗೆ ತಲೆಯಲ್ಲಿ ಚಿಂತೆ ಕೊರೆಯತೊಡಗಿತು. ಕಳ್ಳತನದ ಜೀವನ 'ಕಳ್ಳನ ಹೆಂಡ್ತಿ ಯಾವತ್ತು ಮುಂಡೆ' ಎಂದು ಕೊಳ್ಳುತ್ತಾ, ತನ್ನ ಮಗಳ ಜೀವನವನ್ನು ನೆನೆದು ಜವರನಿಂದ ತಪ್ಪಿಸಿಕೊಳ್ಳಲು ಸಂಚು ಹಾಕುತ್ತಾಳೆ. ಇದರಿಂದ ಜವರನಿಗೆ ಇತ್ತ ಮನೆಯೂ ಇಲ್ಲ, ಅತ್ತ ಆಸೆ ಪಟ್ಟ ಪುಟ್ಟಕ್ಕನ ಮಗಳೂ ಇಲ್ಲದಂತಾಯಿತು.

ಒಬ್ಬ ರೈತನ ಮಗನಾಗಿ ಹುಟ್ಟಿ ಬೇಸಾಯ ಮಾಡಿ ಬದುಕಬೇಕಾಗಿದ್ದ ಜವರ ಪುಟ್ಟಕ್ಕನಂತಹ ಕೆಟ್ಟ ಹೆಂಗಸಿನ ಸಹವಾಸದಿಂದ ಕಳ್ಳನಾಗಿ ಬದುಕು ನಡೆಸಬೇಕಾಗಿ ಬಂದುದು ವಿಷಾದವೆನಿಸುತ್ತದೆ. ಇಂಥ ಕೆಟ್ಟ ಕೆಲಸದಿಂದ ತಂದೆಯ ಮೇಲಿನ ಗೌರವವಾಗಲಿ, ಭೂಮಿಯ ಮೇಲಿನ ಆಸೆಯಾಗಲಿ ಜವರನಿಗೆ ಬೇಕಿಲ್ಲ. ದುಂಡಿಯ ಮೋಹಕ್ಕೆ ಒಳಗಾಗಿ ಕೆಟ್ಟ ಕೆಲಸಕ್ಕೆ ಕೈ ಹಾಕಿ ಊರಿನಲ್ಲಿ, ಅಪವಾದಗಳ ಸರಮಾಲೆಯನ್ನೇ ಹೊತ್ತುಕೊಂಡು ಬದುಕುತ್ತಿರುತ್ತಾನೆ. ಪುಟ್ಟಕ್ಕನ ಅಕ್ರಮ ಸಂಬಂಧದದ ವಿಚಾರದಲ್ಲಿ ತನ್ನ ಗಂಡನ ಪ್ರಾಣವನ್ನೇ ಬಲಿತೆಗೆದುಕೊಳ್ಳುವುದು, ದುಂಡಿಯ ಮೇಲಿನಾ ಆಸೆಯಿಂದ ಜವರ ಒಬ್ಬ ಕೆಟ್ಟ ವ್ಯಕ್ತಿಯಾಗಿ, ಅಂದರೆ ಕಳ್ಳನಾಗಿ ಜೀವನದುದ್ದಕ್ಕೂ, ಬದುಕು ನಡೆಸುವುದು, ಇದನ್ನು ನೋಡಲಾರದ ಜವರನ ತಂದೆಯ ಪರಿಸ್ಥಿತಿ, ದುಂಡಿಯ ಅಸಹಾಯಕತೆ, ಎಲ್ಲವೂ ಕಣ್ಣಿಗೆ ಸ್ಪಷ್ಟವಾಗಿ ಗೋಚರಿಸುತ್ತವೆ.

ಸಮಾಜದಲ್ಲಿ ಬದುಕುತ್ತಿರುವ ಪ್ರತಿಯೊಬ್ಬ ವ್ಯಕ್ತಿಯು ಸಮಾಜಕ್ಕೆ ಆದರ್ಶವಾಗಿ, ಸ್ಫೂರ್ತಿಯಾಗಿ ಬದುಕಬೇಕು. ಆದರೆ ಪುಟ್ಟಕ್ಕ ಕೆಟ್ಟ ದಾರಿಯನ್ನು ಹಿಡಿಯುವುದರ ಜೊತೆಗೆ ಜವರನನ್ನು ಕೆಟ್ಟ ವೃತ್ತಿಗೆ ಇಳಿಸುತ್ತಾಳೆ. ಕುಟುಂಬದಲ್ಲಿ ಈ ರೀತಿಯ ಪರಿಸ್ಥಿತಿಗಳು ಸಮಾಜ ಅಧಃಪತನಕ್ಕೆ ಹೋಗುತ್ತಿದೆ ಎಂಬುದನ್ನು ತಿಳಿಸುತ್ತದೆ. ತನ್ನ ಜೀವನದಲ್ಲಿ ನೆಲೆ ಕಾಣಲು ಸಾಮಾನ್ಯ ಕುಟುಂಬದಲ್ಲಿ ಜೀವಿಸುತ್ತಿದ್ದ ಜವರನನ್ನು ಬಲಿಕೊಡುವುದು ಹೆಣ್ಣಿಗೆ ಸಮ್ಮತವಲ್ಲ. 'ಮಾಡಿದುಣ್ಣೋ ಮಹರಾಯ' ಎಂಬಂತೆ, ತಾನು ಎಣೆದ ಬಲೆಗೆ ತಾನೇ ಸಿಕ್ಕಿದಂತೆ, ಪುಟ್ಟಕ್ಕ ಎಣೆದ ಮೋಸದ ಬಲೆಗೆ ಜವರ ಸಿಲುಕಿ ಒದ್ದಾಡುತ್ತಾನೆ. ಇದರಿಂದ ಪುಟ್ಟಕ್ಕ ಎಣೆದ ಜವರನೆಂಬ ಬಲೆ ಪುಟ್ಟಕ್ಕನಿಗೆ ಸಾವಿನ ದಾರಿ ತೋರಿತು. ಮೋಸಕ್ಕೊಳಗಾದ ಜವರನಲ್ಲಿ ದ್ವೇಷದ ಕಿಡಿ ಕಾರಿದವು. ಪುಟ್ಟಕ್ಕ ತನ್ನ ಜೀವನವನ್ನು ಭದ್ರ ಪಡಿಸಿಕೊಳ್ಳುವ ಸಲುವಾಗಿ ಸಂಚು, ಮಾಡಿ ಜವರ ಕಳ್ಳತನ ಮಾಡುವಾಗ ಸಿಕ್ಕಿಹಾಕಿಕೊಳ್ಳುವಂತೆ ಮಾಡುತ್ತಾಳೆ. ಇದನ್ನು ತಿಳಿದು ಜವರ ದುಂಡಿಯನ್ನು ಬಲತ್ಕಾರ ಮಾಡಿ ಪುಟ್ಟಕ್ಕನನ್ನು ಕೊಲೆ ಮಾಡಿ ಪರಾರಿಯಾಗುತ್ತಾನೆ.

ಹೀಗೆ ಸಮಾಜದಲ್ಲಿ ಬದುಕುತ್ತಿರುವ ಹೆಣ್ಣು ಅದರಲ್ಲೂ ಕುಟುಂಬದಲ್ಲಿ ತಾಯಿಯಾಗಿ ನಿರ್ವಹಿಸಬೇಕಾದ, ಯಾವ ಕರ್ತವ್ಯವನ್ನು ಪುಟ್ಟಕ್ಕ ನಿರ್ವಹಿಸಲಿಲ್ಲ. ಬದಲಾಗಿ ತನ್ನ ಕೆಟ್ಟ ತನದಿಂದ ಎಲ್ಲವನ್ನು ಕಳೆದುಕೊಳ್ಳಬೇಕಾಯಿತು. ಪುಟ್ಟಕ್ಕನ ವಂಚನೆಯಿಂದ ಗಂಡ, ಮಗಳು, ಕೊನೆಗೆ ತಾನು ಮಾಡಿದ ಪಾಪಕ್ಕೆ ಪುಟ್ಟಕ್ಕನೂ ಬಲಿಯಾಗುವುದನ್ನು ಕಾಣಬಹುದು. ಇಂತಹ ದುರ್ಜನರ ಸಹವಾಸದಿಂದ ಸಮಾಜದಲ್ಲಿ ದುಷ್ಟ ವ್ಯಕ್ತಿಗಳು ಹುಟ್ಟುತ್ತಲೇ ಇದ್ದಾರೆ. ಇದು ಸಮಾಜದ ಅವನತಿಗೆ ಪ್ರಸ್ತುತದಲ್ಲಿ ನಡೆಯುತ್ತಿರುವ ಘಟನೆಗಳಿಗೂ ಕನ್ನಡಿ ಹಿಡಿದಂತಿದೆ. ಸಮಾಜದಲ್ಲಿ ಇಂಥ ಘಟನೆಗಳು

ಕೊನೆಯಾಗಬೇಕು. ಸಜ್ಜನರು ದುರ್ಜನರ ಸಹವಾಸವನ್ನು ಬಿಟ್ಟು ಅವರಿಗೂ ಒಳ್ಳೆಯ ದಾರಿಯನ್ನು ಒಳ್ಳೆಯ ಕೆಲಸವನ್ನು, ತಿಳಿಸಿ ಉತ್ತಮ ಜೀವನ ನಡೆಸುವಂತೆ ಬದಲಾಯಿಸಿ ಅದು ಸಜ್ಜನರ ನಾಡಗಬೇಕು. ಅಂದು ಗ್ರಾಮೀಣ ಜೀವನ ಹಸನಾಗುತ್ತದೆ. ಒಂದು ಹೆಣ್ಣಿನ ಸಂಚಿನಿಂದ, ಮತ್ತೊಬ್ಬ ಹೆಣ್ಣಿನ ಮೇಲಿನ ಮೋಹದಿಂದ ಒಬ್ಬ ವ್ಯಕ್ತಿ ಯಾವ ರೀತಿಯಲ್ಲಿ ಸಮಾಜಕ್ಕೆ ಮಾರಕವಾಗಿ ಬದಲಾಗುತ್ತಾನೆ ಎಂಬುದನ್ನು ಇಲ್ಲಿ ಕಾಣಬಹುದು.

ಅಂತೆಯೇ ಸಮಾಜದಲ್ಲಿ ಬದುಕುತ್ತಿರುವ ಹೆಣ್ಣಿಗೆ ಕುಟುಂಬದಲ್ಲಿ ಪ್ರೀತಿ ವಿಶ್ವಾಸ, ಆಸೆ ಆಕಾಂಕ್ಷೆಗಳು ಈಡೇರಬೇಕೆಂಬ ಬಯಕೆ ಎಲ್ಲರಂತೆ ಸಹಜವಾಗಿರುತ್ತದೆ. ಕೆಲವೊಮ್ಮೆ ಗಂಡನಿಂದ ಅದು ಸಿಗದಿದ್ದಾಗ ಹೆಣ್ಣು ಮತ್ತೊಬ್ಬರಲ್ಲಿ ಆ ಪ್ರೀತಿಯನ್ನು ಬಯಸುವುದನ್ನು ಕಾಣಬಹುದು. ಹಾಗೆಯೇ ಸಣ್ಣಕ್ಕ ಮದುವೆಯಾದಗಿನಿಂದ ಗಂಡನ ಜೊತೆಯಲ್ಲಿದ್ದರೂ ಒಂಟಿ ಜೀವನವನ್ನು ಸಾಗಿಸುತ್ತಿದ್ದು, ತಾನಾಗಿಯೇ ಅವನನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದರೂ ಅದು ಸಾಧ್ಯವಾಗದ ಪ್ರಸಂಗವನ್ನು **'ಹೋರಿ'** ಕಥೆಯಲ್ಲಿ ಕಾಣಬಹುದು.

ಸಣ್ಣಕ್ಕನ ಗಂಡ ಮರಿದಿಮ್ಮಣ್ಣನ ಹೋರಿ ಸುತ್ತಮುತ್ತಲಿನ ಹಳ್ಳಿಗೆ ಹೆಸರುವಾಸಿಯಾದದ್ದು. ಸುತ್ತಲಿನ ಹಳ್ಳಿಯ ಹಸುಗಳಿಗೆಲ್ಲಾ ಹೋರಿಯಿಂದ ಬಯಕೆ ತೀರಿಸುವ ಮರಿದಿಮ್ಮಣ್ಣನಿಗೆ ತನ್ನ ಹೆಂಡತಿಗೆ ಸುಖ ಕೊಡುವುದನ್ನೇ ಮರೆತಿದ್ದ. ಇದರಿಂದ ಬೇಸತ್ತಾ ಸಣ್ಣಕ್ಕ ಇಂತಹ ಗಂಡ ಇದ್ದರೂ ಒಂದೇ, ಇಲ್ಲದಿದ್ದರೂ ಒಂದೇ ಎಂದುಕೊಂಡು ವತ್ತಾರೆ ಎದ್ದರೆ ಹಿಟ್ಟು ಮಾಡಿ ಉಂಡರೆ ಬರೀ ಹೊಟ್ಟೆ ತುಂಬುತ್ತದೆ. ಆದರೆ ಮೈಯ ಹಸಿವು ತಡೆಯಲಾರದಷ್ಟು ಎಷ್ಟಾದರೂ ಉಪ್ಪುಕಾರ ತಿಂದ ಮೈಯ್ಯಲ್ಲವೇ ಅಂದುಕೊಳ್ಳುತ್ತಾಳೆ.

ಬಾಲ್ಯದಲ್ಲಿ ತಂದೆ ತಾಯಿ ಯೌವನದಲ್ಲಿ ಗಂಡ, ವಯಸ್ಸಾದ ಮೇಲೆ ಮಕ್ಕಳ ಆಸರೆ ಎಂಬಂತೆ ಹೆಣ್ಣಿಗೆ ಎಲ್ಲರ ಪ್ರೀತಿಯಂತೆ ಗಂಡನ ಪ್ರೀತಿಯು ಮುಖ್ಯವಾದುದ್ದು. ಸಹಜವಾಗಿ ಹೆಣ್ಣಿಗೆ ಬಯಕೆ ಆಸೆ ಆಕಾಂಕ್ಷೆಗಳು ಇರುತ್ತವೆ. ಆಕೆ ಗಂಡನಿಂದ ಒಲವನ್ನು ಬಯಸುತ್ತಾಳೆ. ಆದರೆ ಸಣ್ಣಕ್ಕನಿಗೆ ಪ್ರೀತಿ–ಪ್ರೇಮ, ಆಸೆ–ಆಕಾಂಕ್ಷೆ ಯಾವುದು ಮರಿದಿಮ್ಮಣ್ಣನಿಂದ ಸಿಗುವುದಿಲ್ಲ. ಇಂತಹ ಸನ್ನೀವೇಶಗಳನ್ನು ಹಲವಾರು ದಾಂಪತ್ಯಗಳಲ್ಲಿ ಕಾಣಬಹುದು.

ಅದು ಚನ್ನಕ್ಕ ಹೇಳಿದ ಮಾತು ನೆನಪಿಗೆ ಬರುತ್ತದೆ. 'ಅಲ್ಲ ಕನ್ಲೆ ಸಣ್ಣೀ ಆ ಕುಳ್ಳಿ ಹಂಗಾ ಮಾಡೋದು? ಮನ್ಲಿ ಗುಂಡು ಕಲ್ಲಿನಂತೆ ಗಂಡಿರೋವಾಗ ಯಾರ ಯಾರ ಜೋತೇಲೋ ಮನಿಕತಾಳಂತಲ್ಲ, ಸರಿಯೇ ಇದು? ಅವ್ನು ಊರಲ್ಲಿ ಇಲ್ಲ ಅಂದ್ರೆ ಸಾಕು, ಅವತ್ತು ಯಾರನಾರ ಜೊತೆಗೆ ಅಕೋಬುಡ್ತಾಳ್ಲೊ ಏನಪ್ಪ ಈ ಕಲಿಗಾಲ ! ಈ ಮಾತುಗಳಿಂದ ಸಣ್ಣಕ್ಕನಲ್ಲಿ, ಕೋಪ ವ್ಯಕ್ತವಾಗುವುದನ್ನು ಕಾಣಬಹದು. ಕಾರಣ ತನ್ನ ಸ್ಥಿತಿಯೂ ಹಾಗೆಯೇ ಎಂದುಕೊಳ್ಳುತ್ತಾಳೆ. ಸಮಾಜದಲ್ಲಿ ಎಷ್ಟೋ ಸಂಸಾರಗಳಲ್ಲಿ ಹೆಣ್ಣಿನ ಈ ರೀತಿಯ ಅಕ್ರಮ ಸಂಬಂಧಗಳ ಜೊತೆ ಬದುಕು ಸಾಗಿಸುವ ಸನ್ನಿವೇಶ ಸಂದರ್ಭಗಳನ್ನು ನೋಡುತ್ತಲೇ ಬಂದಿದ್ದೇವೆ. ಕೆಲವು ಹೆಂಗಸರಿಗೆ ಗಂಡನ ಪ್ರೀತಿಯಿದ್ದರೂ, ಮತ್ತೊಬ್ಬನನ್ನು, ಬಯಸಿ ಹೋಗುವುದು. ಹೆಣ್ಣಿಗೆ ಹೆಣ್ಣಿನ ಕುಲಕ್ಕೆ ಸಮ್ಮತವಲ್ಲ. ಆದರೆ ಸಣ್ಣಕ್ಕನಿಗೆ ಮದುವೆಯಾದಾಗಿನಿಂದ ಗಂಡನ ಪ್ರೀತಿ ಸಿಗದೆ ಒಂಟಿ ಜೀವನ ಅವಳನ್ನು ಕೆಟ್ಟ ದಾರಿಗೆ ಹೋಗಲು ಎಡೆಮಾಡಿಕೊಡುತ್ತದೆ. ಹೆಣ್ಣಿನ ಜೀವನ ಕನ್ನಡಿಯ ಹಾಗೆ ಒಡೆದು ಚೂರಾದರೆ ಮತ್ತೆ ಅದನ್ನು ಸರಿಪಡಿಸಲು ಸಾಧ್ಯವಿಲ್ಲ. ಹೆಣ್ಣಿನ ಮನಸ್ಸು ಅಷ್ಟೆ ಕನ್ನಡಿಯಂತೆ ಅದು ಒಡೆದು ಚೂರಾದರೆ ಮತ್ತೆ ಸರಿಹೋಗಲು ಸಾಧ್ಯವಿಲ್ಲ. ಸಾಂಸಾರಿಕ ಜೀವನದಲ್ಲಿ ಹೆಣ್ಣಿಗೆ ಸಿಗಬೇಕಾದ ಅಂದರೆ ಕಾಲಕಾಲಕ್ಕೆ

ಸಿಗಬೇಕಾದ ಪ್ರೀತಿ, ವಾತ್ಸಲ್ಯ, ಆಸೆ, ಆಕಾಂಕ್ಷೆಗಳು ಎಲ್ಲವೂ ಸಿಕ್ಕಾಗ ಮಾತ್ರ ಹೆಣ್ಣಿನ ಜೀವನ ಸಾರ್ಥಕ ಎನಿಸುತ್ತದೆ.

ತನ್ನ ಗಂಡನನ್ನು ಬಲವಂತವಾಗಿ ಒಲಿಸಿಕೊಳ್ಳಲು ತನ್ನೆಡೆಗೆ ಎಳೆದುಕೊಳ್ಳಲು ಪ್ರಯತ್ನಿಸ ಬೇಕೆಂದುಕೊಂಡ ಸಣ್ಣಕ್ಕ ಗಂಡ ಗಾಢನಿದ್ರೆಯಲ್ಲಿ ಗೊಟರು ಹಾಕುತ್ತಿದ್ದುದ್ದನ್ನು ನೋಡಿ ಅವನ ಬಗ್ಗೆ ಅಸಹ್ಯ ಹುಟ್ಟಿ ಸೇಡು ಮೂಡುತ್ತದೆ. ಮತ್ತೆ ತನ್ನ ಯೋಜನೆಯ ಬಗ್ಗೆ ತನಗೆ ಹೇಸಿಗೆಯಾಗಿ ಮನಸ್ಸು ಮತ್ತೊಂದು ಕಡೆ ಹರಿಯುತ್ತದೆ. ಬಸವಿಯನ್ನು ಊರಿನ ಕರಿಯ ಮತ್ತು ಅಪ್ಪಾಜಿ ಮಡಗಿಕೊಂಡವರೇ ಎಂಬ ಸುದ್ದಿಯಿಂದ ಪಂಚಾಯ್ತಿಯಲ್ಲಿ ದಂಡ ಹಾಕಿದ ದೃಶ್ಯ ಕಣ್ಣಮುಂದೆ ಬಂದು ಅಂತಹ ಬಾಳು ಬೇಡ, ಜೀವನ ಅಲ್ಲೋಗಿ ನಿಲ್ಲೋದು ಬೇಡವೆಂಬ ಚಿಂತೆಯಲ್ಲಿ ಮುಳುಗುತ್ತಾಳೆ.

ಒಂದು ಕಡೆ ಗಂಡ ತನ್ನನ್ನು ನಿರ್ಲಕ್ಷ್ಯ ಮಾಡುತ್ತಿರುವ ನೋವು, ಮತ್ತೊಂದು ಕಡೆ ತನ್ನ ಬದುಕಿನ ಬಗ್ಗೆ ತನಗೆ ಹೇಸಿಗೆಯಾಗಿ ಜೀವನವೇ ಬೇಸರವಾಗುತ್ತದೆ. ಸಣ್ಣಕ್ಕನಂಥ ಹೆಣ್ಣನ್ನು ಅನೇಕ ಕುಟುಂಬಗಳಲ್ಲಿ ನೋಡಬಹುದು. ಗ್ರಾಮೀಣ ಕುಟುಂಬದಲ್ಲಿ ಹುಟ್ಟಿ ಬೆಳೆದ ಲೇಖಕರು ಹೆಣ್ಣಿನ ಬದುಕನ್ನು ವಾಸ್ತವಕ್ಕೆ ಹತ್ತಿರವಾಗುವಂತೆ ಚಿತ್ರಿಸಿದ್ದಾರೆ. ಸಣ್ಣಕ್ಕ ತನ್ನ ಬಯಕೆಯಿಂದ ಬಸವಿಗೆ ಆದ ಸ್ಥಿತಿಯನ್ನು ನೆನೆದು ಆ ಬಾಳು ಬೇಡವೆಂಬ ನಿರ್ಧಾರಕ್ಕೆ ಬರುತ್ತಾಳೆ. ಇದ್ದಕ್ಕಿದ್ದ ಹಾಗೆ ತನ್ನ ಮನೆಯಲ್ಲಿದ್ದ ಎಮ್ಮೆ ಕಡಸು ಹಗ್ಗ ಜಡಿದುಕೊಂಡು ಓಡತೊಡಗಿದಾಗ ಸಂಗಣ್ಣನನ್ನು ಹಿಡಿದುಕೊಳ್ಳಲು ಹೇಳುತ್ತಾಳೆ. ಸಣ್ಣಕ್ಕನಿಗೆ ದಿನದಿಂದ ದಿನಕ್ಕೆ ಸಂಗಣ್ಣನಲ್ಲಿ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳಲು ಪ್ರಯತ್ನಿಸುತ್ತಾಳೆ. ಆದರೆ ಅದು ಸಾಧ್ಯವಾಗುವುದಿಲ್ಲ. "ಒತ್ತಾರೆಯಿಂದ ಇಟ್ಟುಕೊಂಡಿದ್ದ ಆಸೆಯಲ್ಲಾ ನಿರಾಶೆಯಾಯಿತು. ನಿದ್ದೆ ಬರಲಿಲ್ಲ. ಒದ್ದಾಡಿದಳು. ಎದ್ದು ಕುಳಿತು, ಹೊರಗೆ ಬಂದಳು. ದೀಪವಿಟ್ಟು ಹೋರಿಯ ಮೈ ಸವರುತ್ತಾ ಅದರ ಕತ್ತನ್ನು ತಬ್ಬಿಕೊಂಡಳು. ಮೈ ಮನಸ್ಸೆಲ್ಲಾ ಉಬ್ಬತೊಡಗಿದಾಗ ಹುಚ್ಚೆದ್ದು ಕುಣಿಯುವಂತಾಯಿತು. ಏಕೋ ಎನೋ ಅವಳಿಗೆ ಹಿತವೆನ್ನಿಸಲಿಲ್ಲ. ಮೈ ಕಾವು ಮತ್ತಷ್ಟು, ಹೆಚ್ಚಾದಂತಾಯಿತು. ಹಾಗೆಯೇ ಹೋಗಿ ತೊಟ್ಟಿಯಲ್ಲಿ ಕುಳಿತು ಹಂಡೆಯಲ್ಲಿದ್ದ ತಣ್ಣೀರನ್ನು ಮೈ ಮೇಲೆ ಸುರಿದು ಕೊಂಡಳು. ನೀರೆಲ್ಲಾ ಖಾಲಿಯಾದಾಗ ಇನ್ನಷ್ಟು ಬೇಕೆನಿಸಿತು" ಈ ಮಾತುಗಳನ್ನು ಗಮನಿಸಿದಾಗ ಹೆಣ್ಣಿನ ವಿರಹ ವೇದನೆಯಲ್ಲಿ ಹುಚ್ಚೆಬ್ಬಿಸುವದನ್ನು ಕಾಣಬಹುದು. ಗಂಡನಲ್ಲಿ ಸಿಗದ ಪ್ರೀತಿ, ಆಸೆ ಆಕಾಂಕ್ಷೆಗಳನ್ನು ಸಣ್ಣಕ್ಕ ಅದೇ ಊರಿನ ಸಂಗಣ್ಣನಲ್ಲಿ ಬಯಸಿ ಅದು ಸಾಧ್ಯವಾಗದೆ 'ಈ ಹೋರಿಲೀ ಗಬ್ಬಾ ನಿಲ್ಲಲ್ಲ' ಎಂದುಕೊಂಡು ಗಂಡ ನಾಳೆ ಹೊಸದಾದ ಹೋರಿ ತತ್ತಾನೆ ಆಗ ಖಂಡಿತವಾಗಿ ನಿಲ್ಲುತ್ತದೆ ಎಂದುಕೊಳ್ಳುತ್ತಾಳೆ. ಆದರೆ ಪ್ರಶ್ನೆಯೊಂದು ಮನದಲ್ಲಿ ಉದ್ಭವಿಸುತ್ತದೆ.

ಹೆಣ್ಣು ಸಹಜವಾದ ಬಯಕೆಯನ್ನು ಮುಂದೊಂದು, ದಿನವಾದರು ಈಡೇರಬಹುದೆಂಬ ನಿರೀಕ್ಷೆಯಲ್ಲಿ ಇರುತ್ತಾಳೆ. ಹಾಗೆಯೇ ನಾಳೆ ಬರುವ ಹೋರಿಯಿಂದ ಎಲ್ಲಾ ಹಸುವಿಗೆ ಗಬ್ಬಾ ನಿಲ್ಲಬಹುದು. ಆದರೆ ತನಗೆ ಸಿಗಬೇಕಾದ್ದು ಸಿಗಬಹುದೇ ಎಂಬ ಪ್ರಶ್ನೆ ಅವಳನ್ನ ಕಾಡುತ್ತದೆ.

ಸಾಮಾನ್ಯವಾಗಿ ಗಂಡು ಹೆಣ್ಣಿನಲ್ಲಿರುವ ಸಹಜವಾದ ಬಯಕೆಗಳನ್ನು ಕಥೆಯಲ್ಲಿನ **'ಹೋರಿ'** ಸಾಂಕೇತಿಸುತ್ತದೆ. ಸಣ್ಣಕ್ಕ ಹೆಣ್ಣಾಗಿ ಹುಟ್ಟಿ ತನ್ನ ಆಸೆ-ಆಕಾಂಕ್ಷೆಗಳನ್ನು ಗಂಡನಲ್ಲಿ ಬಯಸುವುದನ್ನೂ ಕಥೆ ಎತ್ತಿ ತೋರುತ್ತದೆ. ಆದರೆ ಗಂಡನಲ್ಲಿ ಆ ಪ್ರೀತಿ ಸಿಗದೇ ಹೊದಾಗ ಮತ್ತೊಬ್ಬನಲ್ಲಿ ಕಾಣುವ ಮನಸ್ಸು ಮಾಡುತ್ತಾಳೆ. ಜೊತೆಗೆ ಗಂಡ ಆಕೆಯ ಬಯಕೆ ಪೂರೈಸದೆ, ಅದರ ಬಗ್ಗೆ ತಲೆಕೆಡಿಸಿಕೊಳ್ಳದೆ ಇರುವುದು ಹೆಣ್ಣಿನ ಮನಸ್ಸು ಮತ್ತು ಜೀವನದಲ್ಲಿ ಆಟವಾಡುವ ಬಗೆಯಂತಿದೆ. ಆಕೆಯನ್ನು ಹೇಗೆ ಶೋಷಣೆ ಮಾಡುತ್ತಾರೆ ಎಂಬುದನ್ನು ತಿಳಿಸುತ್ತದೆ.

ಶತಶತಮಾನದಿಂದಲೂ ಗಂಡಿನ ಅಡಿಯಾಳಾಗಿ ಬದುಕುತ್ತಿರುವ ಹೆಣ್ಣು ಗಂಡಿನಿಂದ ಶೋಷಣೆಗೆ ಮೋಸ ವಂಚನೆಗೆ ಒಳಗಾಗಿ ಸ್ವತಃ ತಾನೇ ದುಡಿದು ಜೀವನ ನಡೆಸುತ್ತಿದ್ದಾಳೆ. ಗಂಡಿನಿಂದ ಅನುಭವಿಸುವ ನೋವು-ನಿರಾಶೆಯನ್ನು ಸಹಿಸಿಕೊಂಡು ಕುಟುಂಬದೊಳಗೆ ನಡೆಯುವ ಕ್ರೌರ್ಯ ಅಸಹಾಯಕತೆಯನ್ನು **'ಮಂಚಮ್ಮ'** ಕತೆಯಲ್ಲಿ ಕಾಣಬಹುದು.

ಎಲ್ಲೋ ಒಂದು ಮರದ ಕೆಳಗೆ ಬಿದ್ದಿದ್ದ ಮಂಚಮ್ಮನನ್ನು ಕರೆದುಕೊಂಡು ಬಂದು ಆಸರೆ ನೀಡಿ ಅವಳ ಜೀವನದ ಅನುಭವವನ್ನು ತಿಳಿಸುವುದರೊಂದಿಗೆ ಕಥೆ ಬಿಚ್ಚಿಕೊಳ್ಳುತ್ತದೆ.

ಕುಡುಕ ಗಂಡನನ್ನು ಕಟ್ಟಿಕೊಂಡು ಜೀವಿಸುತ್ತಿದ್ದ ಮಂಚಮ್ಮ ಗಂಡನಿಂದ ಹಲವಾರು ಕಷ್ಟಗಳನ್ನು ಸಹಿಸಿಕೊಂಡಿದ್ದಳು. ಕೈಗೆ ಸಿಕ್ಕಿದ್ದನ್ನೆಲ್ಲಾ ಮಾರಿ ಕುಡಿಯುತ್ತಿದ್ದ. ಆರು ತಿಂಗಳಲ್ಲೇ ಮೈಮೇಲಿನ ಒಡವೆ ವಸ್ತ್ರವೆಲ್ಲ ಮಾಯವಾಗಿದ್ದವು. ತನ್ನಪ್ಪನೇ ಮನೆಗೆ ಆಧಾರವಾಗಿದ್ದ. ಕೂಲಿಯ ಬಗ್ಗೆ ಕಲ್ಪನೆಯೇ ಇಲ್ಲದಿದ್ದವಳಿಗೆ ಈಗೇನೂ ಮಾಡಲಾಗದೆ ತಂದೆಯ ಮನೆಗೆ ಬಾಣಂತನಕ್ಕೆ ಸೇರಿದ ಮೇಲೆ ಮತ್ತೊಂದು ಆಘಾತ ಎದುರಾಯಿತು. ಗಂಡ ಯಾವೊಳನ್ನೋ ಕರೆದುಕೊಂಡು ಓಡಿಹೋಗಿದ್ದ.

ಸಮಾಜದಲ್ಲಿ ಬದುಕು ಸವೆಸುತ್ತಿರುವ ಹೆಣ್ಣು ಇಂದಿಗೂ ಗಂಡನಿಂದ ಶೋಷಣೆಗೆ ಒಳಗಾಗಿ ದುಡಿದು ಮಕ್ಕಳನ್ನು ಸಾಕುತ್ತಿದ್ದಾಳೆ. ಮನೆಗೆಲಸ, ಗಾರ್ಮೆಂಟ್ಸ್ ನಂತಹ ಕೆಲಸಕ್ಕೆ ಸೇರಿ ದುಡಿದು ಬದುಕು ಸಾಗಿಸುತ್ತಿದ್ದಾರೆ. ಮದುವೆಯಾಗಿ ಗಂಡನ ಜೊತೆ ಸುಖವಾಗಿ ಬದುಕುವ ಕನಸು ಕಂಡ ಮಂಚಮ್ಮನಂಥವರು ಸಮಾಜದಲ್ಲಿ ಹಲವಾರು ಜನರಿದ್ದಾರೆ. ಆದರೆ ಗಂಡನಾಗಲಿ ಸಾಕಿ ಬೆಳೆಸಿದ ಮಕ್ಕಳಾಗಲಿ, ಅಣ್ಣ-ತಂಗಿಯರಾಗಲಿ, ಬಂಧು-ಬಳಗವಾಗಲಿ, ಯಾರೂ ಸಹ ಕೊನೆಯವರೆಗೂ ಆಶ್ರಯ ನೀಡುವುದಿಲ್ಲ ಎಂಬುದನ್ನು ಅರಿತು, ಅದರ ಆಸೆಯನ್ನು, ನಂಬಿಕೆಯನ್ನು ಬಿಟ್ಟು ದುಡಿದು ಬದುಕುವವರನ್ನು ಸಹ ಕಾಣಬಹುದು.

ಮಂಚಮ್ಮನ ಕೈಗಳು ಇಟ್ಟಿಗೆ ಗಾರೆಯನ್ನು ಹೊತ್ತು ತೂತು ಬಿದ್ದಿವೆ. ಇದೇ ಸಂದರ್ಭದಲ್ಲಿ ವಾರಗಿತ್ತಿಯ ಮಗ ಗಾರೆ ಕೆಲಸದವಳನ್ನು ಕರೆದುಕೊಂಡು ಬಂದು ಮಂಚಮ್ಮನ ಬಳಿ ಆಶ್ರಯ ಪಡೆಯುತ್ತಾನೆ. ಜೊತೆಗೆ ಅವಳ ಬಳಿ ಹಣ ಇರುವುದನ್ನು ಕಂಡು ಆಕೆಯನ್ನು ತಾನೇ ನೋಡಿಕೊಳ್ಳುವುದಾಗಿ ಹೇಳುತ್ತಾನೆ. ಆದರೆ ಮಂಚಮ್ಮ ಚೀಟಿ ನಡೆಸುವವರಿಂದ ಮೋಸ ಹೋಗಿ ಹಣ ಕಳೆದುಕೊಳ್ಳುತ್ತಾಳೆ.

ಸಕ್ಕರೆ ಇರುವ ಕಡೆ ಇರುವೆ ದಾಳಿ ಮಾಡುವಂತೆ ಮಂಚಮ್ಮನಲ್ಲಿ ಹಣವಿದೆ ಎಂಬುದಕ್ಕೆ ನೋಡಿಕೊಳ್ಳುತ್ತಿದ್ದ ಮಗ, ಅದು ಇಲ್ಲ ಎಂದಾಗ ರಾತ್ರಿಯೇ ಅವಳನ್ನು ಮನೆಯಿಂದ ಹೊರಹಾಕುತ್ತಾನೆ. ಇಂಥ ಘಟನೆಗಳನ್ನು ಪ್ರಸ್ತುತ ಸಂದರ್ಭದಲ್ಲೂ ಕಾಣಲಾಗುತ್ತಿದೆ. ಹೆಣ್ಣು ಎಲ್ಲರಿಂದ ಶೋಷಣೆಗೆ ಒಳಗಾಗುವುದನ್ನು ನೋಡಲಾಗುತ್ತಿದೆ. ಮಗಳು ಸಹ ಹಣ ಬೇಕೆಂದು ಬಂದು ಹೋದವಳು ಮತ್ತೆ ಸುಳಿವೇ ಇಲ್ಲ. ಹೇಗೋ ದುಡಿದು ಬದುಕು ನಡೆಸುತ್ತಿದ್ದ ಮಂಚಮ್ಮ ಬಳಿಗೆ ಗಂಡ ಹಿಂದಿರುಗಿ ಬರುತ್ತಾನೆ. ಆದರೆ ಮಂಚಮ್ಮ ಆತನನ್ನು ಒಪ್ಪಿಕೊಳ್ಳದೆ 'ಕತ್ತೆ ಮುನುಸ್ಕೊಂಡು ಹಿತ್ಲುಗೋಯ್ತು, ಕತ್ತಲಾಯ್ತೆ ಮನೇಗ್ಬಂತು' ಎಂಬಂತೆ ಗಂಡನನ್ನು ತಿರಸ್ಕರಿಸುತ್ತಾಳೆ. ಮಂಚಮ್ಮನ ಮಾತುಗಳು ಸರಿ ಎನಿಸುತ್ತದೆ. "ಹರೆಯದಲ್ಲಿ ಇಲ್ಲದ ಗಂಡ ಈಗೇಕೆ ಎಂಬುದು ಸಮಯೋಚಿತವಾಗಿತ್ತು. ಸಮಾಜದಲ್ಲಿ ಎಷ್ಟೊಂದು ಮಂಚಮ್ಮಗಳಿದ್ದಾರೋ! ವಿದ್ಯೆ ಕಲಿಯದಿದ್ದರೂ ಗಂಡನ ಅಡಿಯಾಳಾಗಿ ಬಾಳದೆ ಮೈ ಬಗ್ಗಿಸಿ ದುಡಿದು ಬೆವರು ಸುರಿಸಿ ಬದುಕುತ್ತಿದ್ದಾರೋ! ಯೋಚಿಸಿದಂತೆಲ್ಲಾ ಮನಸ್ಸು ಪ್ರಮುಲ್ಲವಾಯಿತು" ಈ

ಮಾತುಗಳನ್ನು ಗಮನಿಸಿದಾಗ ಲೇಖಕರು ಒಂದು ಹೆಣ್ಣಿನ ನೈಜ ಅಥವಾ ಅಸಹಾಯಕ ಸ್ಥಿತಿಯನ್ನು ಹತ್ತಿರದಿಂದ ಕಂಡು ಕೇಳಿದ ಸಂಗತಿಗಳನ್ನು ಮನದಟ್ಟಾಗುವಂತೆ ತಿಳಿಸಿದ್ದಾರೆ.

ಸಮಾಜದಲ್ಲಿ ಹೆಣ್ಣಿಗೆ ಎಷ್ಟೇ ಉತ್ತಮ ಸ್ಥಾನಮಾನಗಳಿದ್ದರೂ ಎಲ್ಲೋ ಒಂದು ಕಡೆ ಈ ಮಂಚಮ್ಮನಂತೆ ಬದುಕು ಸಾಗಿಸುತ್ತಿರುವ ಪ್ರಸಂಗಗಳನ್ನು ಕಾಣಬಹುದು. ಹುಟ್ಟಿನಿಂದ ಸಾಯುವರೆಗೆ ಬದುಕಿನ ನಡುವೆ ನಡೆಯುವ ಜಂಜಾಟವನ್ನು, ಅದರೊಳಗೆ ಉಸಿರಾಡುವ ಕ್ರೌರ್ಯ ಅಸಹಾಯಕತೆಯನ್ನು ಹೆಣ್ಣು ಕುಟುಂಬದಲ್ಲಿ ಅನುಭವಿಸುತ್ತಲೇ ಇದ್ದಾಳೆ. ಸಮಾಜದಲ್ಲಿ ಹೆಣ್ಣಿಗೆ ಬದುಕಿನ ಜೊತೆಗೆ ಉತ್ತಮವಾದ ಸ್ಥಾನಮಾನಗಳು ದೊರೆತಾಗ ಅಂದು ಸಮಾಜ ಏಳಿಗೆಯನ್ನು ಕಾಣುತ್ತದೆ.

ಆಧುನಿಕ ಪ್ರಭಾವಕ್ಕೆ ಸಿಲುಕಿ ನಲುಗುತ್ತಿರುವ ಎಷ್ಟೋ ಸಂಸಾರಗಳು ಬದುಕುವ ಆಸೆಯನ್ನು ಕಳೆದುಕೊಳ್ಳುತ್ತವೆ. ಗ್ರಾಮೀಣ ಬದುಕಿಗೂ ನಗರ ಪ್ರದೇಶದ ಬದುಕಿಗೂ ಇರುವ ವ್ಯತ್ಯಾಸ ಅವು ಎದುರಿಸುತ್ತಿರುವ ಸಮಸ್ಯೆಗಳನ್ನು **'ಜಂಜಾಟದ ಬದುಕು'** ಎಂಬ ಕಥೆಯಲ್ಲಿ ನೋಡಬಹುದು.

ಗೌಡರಿಗೆ ಊರಿಗೋಗುವ ತವಕ ನಗರದ ಜೀವನ ಸಾಕಾಗಿತ್ತು. "ವತ್ತಾರಿಂದ ಸಂಜೆ ತನಕ ಅಬೇಪಾರಿಯಂಗೆ ಮಲಗಿದಲ್ಲೇ ಕಾಲು ದಿಂಬಿನ ಮೇಲಿಟ್ಟು ಮಲಗುವುದು. ಈ ವತ್ತು ಮುಗಿಯುತ್ತದೆ. ನಾಳೆ ಮುಗಿಯುತ್ತದೆ ಎಂದುದೇ ಬಂತು. ಮಗನ ಮನೆಯಲ್ಲೇನೂ ಆಡಚಣೆಗಳಿಲ್ಲದಿದ್ದರೂ ವತ್ತಾರೆಯೇ ಎದ್ದರೆ ಬಿಸಿಲು ಕಾಯಲು ಹೊರಗೆ ಹೋಗುವ ಹಾಗಿಲ್ಲ. ಅಕ್ಕಪಕ್ಕದಲ್ಲೇ ಮನೆಗಳು. ಕಾಲು ಬೇರೆ ಕುಂಟು. ಅಂಗಿ ಹಾಕಿಕೊಂಡು ಪಂಚೆ ಹಾಕಿಕೊಂಡು ಕೋಲೂರಿಕೊಂಡು ಯಾವಾಗ ಬೇಕಾದರೂ ಎಲ್ಲಿ ಬೇಕಾದರೂ ಚಡ್ಡಿ ಬನಿಯನ್‌ನಲ್ಲಿ ತಿರುಗಬಹುದು. ಇಲ್ಲಿ ಹಾಗಲ್ಲ. ಬಟ್ಟೆ ಹಾಕಿಕೊಂಡೇ ಕುಳಿತಿರಬೇಕು. ಓಡಾಡಬೇಕು ರಸ್ತೆಯಲ್ಲಿ ಜೋಪಾನವಾಗಿ ನಡೆಯದೆ ಇದ್ದರೆ ಯಾರಾದರೂ ಬಸ್ಸು, ಕಾರು, ಗಾಡಿಗಳಲ್ಲಿ ಗುದ್ದಿ ಬಿಟ್ಟರೆ ! ಆ ಮೇಲೆ ಹರಾಶಿವ ಎನ್ನಬೇಕಾಗುತ್ತದೆ. ಹಳ್ಳಿಯ ಹಾಗೆ ಹಟ್ಟಿ ಬಿಟ್ಟು ಆಚೆ ಕದಲುವ ಹಾಗಿಲ್ಲ".

ಆಧುನಿಕತೆಯ ಕಡೆ ಮುಖ ಮಾಡುತ್ತಿರುವ ಇಂದಿನ ಯುವ ಜನಾಂಗ ಎಷ್ಟೇ ಕಷ್ಟದ ಪರಿಸ್ಥಿತಿಯಿದ್ದರೂ ಕಸ ಗುಡಿಸುವ ಕೆಲಸವಾಗಲಿ ನಗರದಲ್ಲಿ ಬದುಕಲು ಬಯಸುತ್ತಾರೆ. ಇಂಥ ಜಂಜಾಟದ ನಡುವೆಯು ಬದುಕು ನಡೆಸುವ ಮಕ್ಕಳಂತೆ ಬದುಕುವುದು ಹಳ್ಳಿಯಲ್ಲಿ ಹುಟ್ಟಿ ಬೆಳೆದ ಹಿರಿಯರಿಗೆ ಸಾಧ್ಯವಾಗದ ಮಾತಾಗಿದೆ. ಹಳ್ಳಿಗಳಲ್ಲಿ ಹೊಲ, ಗದ್ದೆ, ತೋಟ, ತುಡಿಕೆ, ಸಂಸಾರದೊಂದಿಗೆ ಬದುಕುವವರಿಗೆ ಇಲ್ಲಿ ಇಲಿಯ ಬೋನಿನ ಹಾಗೆ ಇರುವ ಮನೆಗಳು ರಸ್ತೆಯ ತುಂಬಾ ಹೊಗೆಯ ಅಲೆಗಳು, ವಾಹನಗಳು, ಕರ್ಕಶ ಶಬ್ದಗಳು ಈ ರೀತಿಯ ವಾತಾವರಣದ ಜೀವನವು ಬೇಡವೆನಿಸಿ ಬೇಸರವನ್ನುಂಟುಮಾಡುತ್ತದೆ.

ಇದ್ದಕ್ಕಿದ್ದ ಹಾಗೆ ಗೌಡರಿಗೆ ಕಾಲಿಗೆ ಏನೋ ಚುಚ್ಚಿದಂತಾಗಿ ನೋವು ಕಾಣಿಸಿಕೊಂಡಿತು. ಕಾಲು ಊದು ಇಳಿಯುವ ಲಕ್ಷಣ ಕಾಣದೆ ಕೊನೆಗೆ ಹೆಂಡತಿಯ ಜೊತೆ ಮಗನ ಮನೆ ಸೇರಿದ ಗೌಡರು, ಉತ್ತಿ ಬಿತ್ತುವ ಕಾಲದಲ್ಲಿ ತಮಗಾದ ಗ್ರಹಚಾರದ ಸಂಗತಿಯನ್ನು ನೆನೆದು ಘಾಸಿಗೊಳ್ಳುತ್ತಾರೆ. ಏನೋ ಮಗನ ಮನೆ ಸೇರಿ ಆಸ್ಪತ್ರೆಗೆ ಹೋದ ಮೇಲೆ ಸಕ್ಕರೆ ಕಾಯಿಲೆ ಇಲ್ಲವೆಂದ ಮಾತು ಗೌಡರಿಗೆ ನಿರಾಳವಾಯಿತು. ಎಲ್ಲಾ ಮುಗಿಯಿತು, ಎನ್ನುವಷ್ಟರಲ್ಲಿ ಐದಾರು ಸಾವಿರ ಖಾಲಿಯಾಯಿತು. ಇದರಿಂದ ಮಗನಿಗೆ ಯೋಚನೆ ತಲೆಹತ್ತಿತ್ತು. ಕೆಲಸಕ್ಕೆ ರಜೆ ಹಾಕದೆ ತಂದೆಯ ಆರೋಗ್ಯದ ಕಡೆಗೆ ತಿರುಗಿದ್ದು ಒಂದು ಕಡೆ ಯೋಚನೆಯಾದರೆ, ಇನ್ನೊಂದು ಕಡೆ ಎಲ್ಲದಕ್ಕೂ ದುಡ್ಡು ಹೊಂಚುವುದು. ಹೀಗೆ ಮಕ್ಕಳ ಓದು, ಮನೆ

ಖರ್ಚು, ಮತ್ತೆ ಅಪ್ಪನ ಖರ್ಚು ಎಲ್ಲವು ಮಗನಿಗೆ ನುಂಗಲಾರದ ತುತ್ತಾಯಿತು. ಜೀವನವೇ ಬೇಡವಾಯಿತು.

ಸಮಾಜ ಬದಲಾವಣೆಗೊಂಡು ಗ್ರಾಮೀಣ ಜೀವನವನ್ನು ಬಿಟ್ಟು ನಗರದತ್ತ ಧಾವಿಸುತ್ತಿರುವ ಯುವ ಪೀಳಿಗೆ ಆರ್ಥಿಕ ಸಂಕಷ್ಟದಲ್ಲಿ ಸಿಲುಕಿ ಒದ್ದಾಡುತ್ತಿದ್ದಾರೆ. ತಾವು ಹುಟ್ಟಿ ಬೆಳೆದ ಊರಲ್ಲಿ ದುಡಿದು ಬದುಕುವ ಆಸೆ ಕಣ್ಮರೆಯಾಗುತ್ತಿದೆ. ಸಾಲದಿಂದ ಬೆಂದು ಬದುಕುತ್ತಿದ್ದ ಮಗ ಊರಲ್ಲಿರುವ ಭೂಮಿಯನ್ನು ಮಾರುವ ಆಲೋಚನೆಯಲ್ಲಿದ್ದ. ನಾನಿರೂತನ್ಕ ಜಮೀನು ಮಾರುವ ಹಾಗಿಲ್ಲ ಎಂದ ತಂದೆಯ ಮಾತಿನಿಂದ ತಲೆ ಕೆಟ್ಟು ಸಾಲದ ಶೂಲ ಅವನನ್ನು ಘಾಸಿಗೊಳಿಸಿತು. ತಂದೆ ತಾಯಿಗೆ ನಗರದ ಜೀವನ, ಜಂಜಾಟದ ಬದುಕಾದರೆ ಮಗನಿಗೆ ಹಳ್ಳಿಯ ಜೀವನ ಜಂಜಾಟದ ಬದುಕಾಗಿತ್ತು. ಕುಟುಂಬದ ಹೊರೆಯನ್ನು ಹೊರಲಾಗದೆ, ಬದುಕು ಸಾಗಿಸುತ್ತಿರುವುದನ್ನು ಇಂದು ಕಾಣಬಹುದು.

ಪ್ರಸ್ತುತದಲ್ಲಿ ಯುವ ಪೀಳಿಗೆ ನಗರದ ಆಕರ್ಷಣೆಗೆ ಒಳಗಾಗಿ ಪಡುತ್ತಿರುವ ಕಷ್ಟವನ್ನು ನೋಡಿದರೆ ಗ್ರಾಮೀಣ ಪ್ರದೇಶದಲ್ಲಿ ದುಡಿದು ಸಂಪಾದಿಸುವ ಸ್ವಾಭಿಮಾನದ ಬದುಕನ್ನು ಕಾಣದೆ ಇನ್ನೊಬ್ಬರ ಕೈ ಕೆಳಗೆ ದುಡಿದು ತಮ್ಮತನವನ್ನು ಮರೆಯುತ್ತಿರುವ ಯುವ ಜನಾಂಗಕ್ಕೆ ಮುಂದೆ ಒದಗುವ ಪರಿಸ್ಥಿತಿಯ ಬಗ್ಗೆ ಲೇಖಕರು ಎಚ್ಚರಿಕೆಯನ್ನು ತಿಳಿಸಿದ್ದಾರೆ.

ಸಮಾಜದಲ್ಲಿ ದುಡಿದು ಸಂಪಾದಿಸುವ ಬುದ್ದಿಯಿಲ್ಲದೆ ಸೋಮಾರಿತನದಿಂದ ತನ್ನ ಸ್ವಾರ್ಥಕ್ಕೆ ಇನ್ನೊಬ್ಬರ ಜೀವನದಲ್ಲಿ ಸುಳ್ಳಿನ ಮಾತುಗಳನ್ನಾಡಿ, ತಮ್ಮ ಹೊಟ್ಟೆ ತುಂಬಿಸಿಕೊಳ್ಳುವ ವಂಚಕರನ್ನು ಇಂದಿಗೂ ಕಾಣಲಾಗುತ್ತದೆ. ಹಾಗೆಯೇ ತಾನು ಮಾಡಿದ ಪಾಪಕ್ಕೆ ಕೊನೆಗೆ ತನ್ನ ಕುಟುಂಬವೇ ಎದುರಿಸುವ ಕಷ್ಟ ಸ್ಥಿತಿಯನ್ನು **'ಪ್ರತಿಫಲ'** ಕಥೆಯಲ್ಲಿ ಕಾಣಬಹುದು.

ಚಿಕ್ಕಂದಿನಲ್ಲಿಯೇ ಸೋಮಾರಿಯಾಗಿ ಕಾಲ ಕಳೆಯುತ್ತಿದ್ದ ವೀರಪ್ಪ ತಂದೆತಾಯಿಗಳಿಗೆ ಇದ್ದ ಒಬ್ಬನೇ ಮಗ. ಜೊತೆಗೆ ಆತ ಇಸ್ಪೀಟು, ಬೀಡಿ, ಕುಡಿತ ಮುಂತಾದ ಕೆಟ್ಟ ಚಟಗಳ ದಾಸನಾಗಿದ್ದ. ಇದರಿಂದಾಗಿ ಹೆಂಡತಿಯ ಮೈಮೇಲಿನ ಒಡವೆಗಳನ್ನು ಹರಾಜು ಮಾಡಿದನು. ಎಲ್ಲದರಿಂದ ಬೇಸತ್ತು ಒಂದು ಹೊತ್ತು ಕೂಲಿಗಾಗಿ ಮದುವೆ ದಳ್ಳಾಳಿಯಾಗಿ ಅದನ್ನೇ ಉದ್ಯೋಗವನ್ನಾಗಿ ಮಾಡಿಕೊಂಡಿದ್ದ.

ಗ್ರಾಮೀಣ ಸಮಾಜದಲ್ಲಿ ಇಂತಹ ಕೆಟ್ಟವರನ್ನು ಮುಖ್ಯವಾಗಿ ಗುರುತಿಸಬಹುದು. ಮೈ ಬಗ್ಗಿಸಿ ದುಡಿಯದೇ ಸೋಮಾರಿತನದಿಂದ ಇನ್ನೊಬ್ಬರ ಬದುಕಿನಲ್ಲಿ ಆಟವಾಡಿ ತಮ್ಮ ಬದುಕಿನಲ್ಲೇ ನೆಲೆ ಕಾಣಲು ಮಾಡುವ ಮೋಸ, ವಂಚನೆಗಳು ಹೆಚ್ಚಾಗಿವೆ. ಸಮಾಜದಲ್ಲಿ ಎಷ್ಟೇ ಬದಲಾವಣೆಯ ಗಾಳಿ ಬೀಸಿದರೂ ಇಂಥ ಘಟನೆಗಳಿಗೆ ಜನರು ಬಲಿಯಾಗುವುದನ್ನು ಕಾಣಬಹುದು. ವೀರಪ್ಪನಿಗೆ ಒಬ್ಬ ಮಗಳಿದ್ದಳು. ಸುಂದರಿ ಎಂಬ ಹೆಸರಿಗೆ ತಕ್ಕಂತೆ ಸುಂದರವತಿಯಾಗಿದ್ದಳು. ದಿನದಿಂದ ದಿನಕ್ಕೆ ವೀರಪ್ಪ ತನ್ನ ದಳ್ಳಾಳಿ ಕೆಲಸದಿಂದ ಚಾಡಿ ಹೇಳಲು ಶುರುವಾದ ಕಾರಣ ತನಗೆ ಸಿಗುತ್ತಿದ್ದ ಊಟ ಮತ್ತು ಪುಡಿಕಾಸಿಗಾಗಿ. ಇದರಿಂದ ಎಷ್ಟೋ ಹೆಣ್ಣುಮಕ್ಕಳ ಕೊರಳು ಮಂಗಳಸೂತ್ರ ಕಾಣದಾದವು. ಕೆಲವು ಮುಂಚೆಯೇ ನಿಂತು ಹೋದರೆ, ಇನ್ನೂ ಕೆಲವು ಮದುವೆಯ, ನಂತರ ಸಂಕಟದ ಪರಿಸ್ಥಿತಿಗೆ ಸಿಲುಕುತ್ತಿದ್ದವು. ಹೆಂಡತಿ ಸತ್ತ ಮೇಲೆಯೇ ಅವನಿಗೆ ತನಗೂ ಒಬ್ಬ ಮಗಳಿದ್ದಾಳೆ ಎಂಬ ಸತ್ಯ ಅರಿವಾಗಿದ್ದು.

ತಂದೆ ಮಾಡಿದ ಪಾಪಕ್ಕೆ ಸುಂದರಿಯಂತೆ ಇದ್ದ ಮಗಳು ದಿನದಿಂದ ದಿನಕ್ಕೆ ಕಾಡುಕುಸುಮದಂತೆ ಆಗಿ ಮದುವೆ ಬಗ್ಗೆ ಕಟ್ಟಿದ ಆಶಾಗೋಪುರ ಗಾಳಿಯಲ್ಲಿ ತೇಲಿಹೋಗಿತ್ತು. ವೀರಪ್ಪ ತನ್ನ ಕೆಲಸದಿಂದ ಮುಂದೆ ಒದಗಬಹುದಾದ ಪರಿಣಾಮವನ್ನು ನೆನೆಯದೆ ಎಷ್ಟೋ ಹೆಣ್ಣು ಮಕ್ಕಳ ಜೀವನಕ್ಕೆ ಕಲ್ಲು

ಹಾಕಿದ್ದನು. ಅವನ ಪಾಪದ ಕೊಡ ತುಂಬಿ ತನ್ನ ಮಗಳು ವಯಸ್ಸಾಗಿ ಬಾಡಿ ಹೋಗುವುದನ್ನು ಕಂಡು ಗಂಡು ಹುಡುಕಲು ತಯಾರಾಗುತ್ತಾನೆ.

ಸಮಾಜ ಮುಂದುವರಿದು ಅಭಿವೃದ್ಧಿ ಹೊಂದುತ್ತಿದ್ದ, ಗ್ರಾಮೀಣರಲ್ಲಿ ವೀರಪ್ಪನಂತವರ ಮಾತುಗಳಿಗೆ ಮರುಳಾಗಿ ಮೋಸ ಹೋಗುವುದನ್ನು ಇಂದು ಕಾಣಲಾಗುತ್ತಿದೆ. ತಾವೇ ಮಾಡಿದ ಪಾಪಕ್ಕೆ ತನ್ನ ಮಗಳಿಗೆ ಶಿಕ್ಷೆ ಎಂಬಂತೆ ಮೂರನೇ ಹೆಂಡತಿಯಾಗಿ ವಯಸ್ಸಾದವನಿಗೆ ಮದುವೆ ಮಾಡಿ ವೀರಪ್ಪ ಇದನ್ನು ಮನದಲ್ಲೇ ನೆನೆದು ಚಿಂತೆಗೀಡಾಗುವುದನ್ನು ನೋಡಿದರೆ, 'ಮಾಡಿದ್ದುಣ್ಣೋ ಮಹಾರಾಯ', 'ಉಪ್ಪು ತಿಂದ ಮೇಲೆ ನೀರು ಕುಡಿಯಲೇ ಬೇಕು' ಎಂಬ ಗಾದೆಗಳಂತೆ ತನ್ನ ಮಗಳ ಬಾಳು ತರಗಲೆಯ ಹಾಗೆ ದೂಳಿಪಟವಾಯಿತು. ಮದುವೆಯ ಬಗ್ಗೆ ಕನಸು ಕಂಡಿದ್ದ ಸುಂದರಿ ಯಾವುದೇ ಉದ್ಗಾರವಿಲ್ಲದೆ ತಂದೆಯ ಮಾತಿಗೆ ಕೊರಳೊಡ್ಡಿದಳು.

"ಸೂರ್ಯ ಆಗತಾನೇ ಉದಯಿಸುತ್ತಿದ್ದ ವೀರಪ್ಪ ತಲೆತಗ್ಗಿಸಿಕೊಂಡು ಬರುತ್ತಿದ್ದ ಅವನ ಹಿಂದೆ ಮಗಳು ಅಳಿಯ ಬರುತ್ತಿದ್ದರು. ಹೊಸಳ್ಳಿಯ ಜನರಿಗೆ ಏನೋ ಆಶ್ಚರ್ಯ ಎಂಥದೋ ಸಂತೋಷ! ಎಷ್ಟು ಮನೆ ಮುರಿದು ಎಷ್ಟೊಂದು ಹೆಣ್ಣುಗಳ ಮನೆ ಹಾಳು ಮಾಡಿದ್ನೋ ಇವನು! ಯಾರೋ ಗಹಗಹಿಸಿ ನಕ್ಕಂತಾಯಿತು".

ತನ್ನ ಹೊಟ್ಟೆ ತುಂಬಿಕೊಳ್ಳಲು ಈ ರೀತಿಯ ಪಾಪದ ಕೆಲಸಕ್ಕೆ ಕೈ ಹಾಕಿದ ವೀರಪ್ಪನು ಕೊನೆಗೆ ತನ್ನ ಮಗಳ ಬಾಳಿಗೆ ಮುಳ್ಳಾದ. ಸಹಜವಾಗಿ ಹೆಣ್ಣಿನಲ್ಲಿರುವಂತೆ ಸುಂದರಿಗೂ ಮದುವೆಯ ಬಗ್ಗೆ ಕನಸುಗಳಿದ್ದವು. ತನ್ನ ಅಸಹಾಯಕ ಸ್ಥಿತಿಯಿಂದ ಎಲ್ಲವೂ ತನ್ನೊಳಗೆ ಕಮರಿಹೋಗುತ್ತವೆ. ತಾನು ಮಾಡಿದ ಕೆಲಸದಿಂದ ಎಷ್ಟು ಕುಟುಂಬಗಳು ಬೀದಿಪಾಲಾಗಿದ್ದವು. ಅವರ ನೋವು, ನಿರಾಶೆ, ಕಣ್ಣೀರು ಶಾಪ ಎಲ್ಲವೂ ತನ್ನ ಮಗಳ ಬಾಳಿಗೆ ಮುಳ್ಳಿನ ಹಾಸಿಗೆಯಾಗಿದ್ದು, ತನ್ನ ಜೀವನವೇ ಮರುಭೂಮಿಯಾಯಿತು. ಪ್ರಸ್ತುತದಲ್ಲಿ ಇಂಥವರು ಬದಲಾಗಬೇಕು. ಮತ್ತೊಬ್ಬರಿಗೆ ಹಿತವನ್ನು ಬಯಸುವ ಮನೋಭಾವ ಬೆಳೆಯಬೇಕು ಎಂಬುದು ವ್ಯಕ್ತವಾಗುತ್ತದೆ. ಪ್ರತಿಯೊಬ್ಬರೂ ಸಮಾಜಕ್ಕೆ ಉತ್ತಮ ಆದರ್ಶ, ವ್ಯಕ್ತಿಯಾಗಿ ಬಾಳಬೇಕು ಎಂಬುದನ್ನು ತಿಳಿಯಬೇಕಾದ ಸಂಗತಿಯಾಗಿದೆ.

ಸಮಾಜದಲ್ಲಿ ನಡೆಯುತ್ತಿರುವ ಕೆಲವೊಂದು ಘಟನೆಗಳಿಂದ ಮನುಷ್ಯ, ಗೊಂದಲಕ್ಕೆ ಸಿಕ್ಕಿ ಬದುಕುತ್ತಿರುವುದನ್ನು ಕಾಣಬಹುದು. ವೈಜ್ಞಾನಿಕವಾಗಿ ಚಿಂತನೆ ಮಾಡದೆ, ತಾವು ನಂಬಿಕೊಂಡು ಬಂದ ನಂಬಿಕೆಯಲ್ಲಿ ಜೀವನ ನಡೆಸುವುದನ್ನು **'ಮತ್ತೊಂದು ಅವಕಾಶಕ್ಕಾಗಿ'** ಕಥೆಯಲ್ಲಿ ಕಾಣಬಹುದಾಗಿದೆ.

ಗ್ರಾಮೀಣ ಸಮಾಜದಲ್ಲಿ ಬರುವ ಸಂಬಂಧಗಳ ನಡುವಿನ ಅಂತರ, ಸಂಬಂಧಗಳಲ್ಲಿ ಮದುವೆಯಾದರೆ ಅದರಿಂದಾಗುವ ಪರಿಣಾಮ ಜನರಲ್ಲಿ ಆಳವಾಗಿ ಬೇರೂರಿದೆ ಎಂಬುದನ್ನು ಕಾಣಲಾಗುತ್ತದೆ. ಪುಟ್ಟಿಂಗವ್ವನ ಮಗನಿಗೆ ಮೊಮ್ಮಗಳನ್ನು ಮದುವೆ ಮಾಡಿಕೊಂಡದ್ದು ಸುತಾರಂ ಇಷ್ಟವಿರಲಿಲ್ಲ. ಅಕ್ಕನ ಮಾತಂತೆ ಚಿಕ್ಕಿಂಗಿಯನ್ನು ಮದುವೆಯಾದ. ಆದರೆ ಪುಟ್ಟಿಂಗವ್ವನಿಗೆ ಸೊಸೆಯ ಕಾರುಬಾರಿನದೇ ಯೋಚನೆ ಶುರುವಾಗಿ "ಹಟ್ಟಿಯೇ ಹಾಳಾಗೋಯ್ತು ಈ ಎಳಗಾಲ್ಮುಂಡೆ ಬಂದು ಮೂರೊರ್ಷಾದ್ರು ಒಂದು ಮಕ್ಕಿಲ್ಲಾ, ಮರಿಲ್ಲಾ, ಒಳ್ಳೆ ಗಣೆಮರ್ದೆಂಗ್ ನಿಂತವ್ಳೆ. ಆ ನನ್ಮಗನ್ಗೂ ಅಷ್ಟೆಲ್ಲಾ ಹೇಳ್ದೆ, ಇವ್ಳು ಬೇಡಕಲ ಅಂತ. ಈ ಸುಪ್‌ನಾತಿ ಏನ್ ಮೋಡಿ ಮಾಡಿಸಿದ್ಲೊ ಇವ್ಳೆ ಆಗ್ಬೇಕು ಅಂತ ಕುಂತ್ಬುಟ್ಟ." ಈ ಮಾತುಗಳನ್ನು ಗಮನಿಸಿದಾಗ ಪ್ರಸ್ತುತದಲ್ಲೂ ಈ ರೀತಿಯ ಅಪನಿಂದನೆಗಳನ್ನು ಹೆಣ್ಣು ಹೊರುತ್ತಲೇ ಬಂದಿದ್ದಾಳೆ. ಗಂಡಿನಲ್ಲಿ ದೋಷವಿದ್ದರೂ, ಸಹ ಅದು ಸಹಜವಾಗಿ ಕಾಣುತ್ತದೆ. ಆದರೆ

ಅಪವಾದಗಳನ್ನು ಹೊರುವವಳು ಹೆಣ್ಣೇ, ಹೊರಿಸುವವಳು ಹೆಣ್ಣೇ. ಸಮಾಜದಲ್ಲಿ ಬದುಕುತ್ತಿರುವ ಪ್ರತಿಯೊಬ್ಬರು ಈ ರೀತಿಯ ನಂಬಿಕೆಗಳಿಂದ ಹೊರಬರಬೇಕು. ಅಂದು ಸಮಾಜದ ಏಳಿಗೆಯನ್ನು ಕಾಣಲು ಸಾಧ್ಯ.

ಅವ್ವನಿಗೆ ಮಗನ ಚಿಂತೆ, ತಲೆಯಲ್ಲಿ ಕೊರೆಯ ತೊಡಗಿತು. ಬೇರೆ ಕಡೆ ಹೆಣ್ಣು ತಂದಿದ್ದರೆ ಮೈ ತುಂಬಾ ಒಡವೆ, ವಸ್ತ್ರ ಹಾಕುತ್ತಿದ್ದರು. ಇದ್ದೊಬ್ಬ ತಮ್ಮನಿಗೆ ಒಂದ್ ವಡವೇನಾದ್ರು ಹಾಕ್ದೆ ಕಳಿಸಿದ್ಲಲ್ಲ ಎಂದು ಒಳಗೊಳಗೆ ಸಂಕಟ ಪಡುತ್ತಾಳೆ. ಮೂರು ವರ್ಷವಾದರೂ ಮಕ್ಕಳಾಗದೇ ಇರುವುದು ಈಗ ಮೊನ್ನೆ ಮೊನ್ನೆ ತಾನೆ ಬಸಿರಾಗಿ ಮೈ ಇಳಿದುದು. ಎಲ್ಲಾವು ಅವ್ವನ ಶಾಪವೇ ತಗುಲಿತೇನೋ, ಎಂದು ಹೆದರಿದ ಚೆಂಬಣ್ಣನಿಗೆ ಜೀವನವೇ ಬೇಸರವಾಗತೊಡಗಿತು. ಇಲ್ಲಿಯೂ ಸಹ ಚೆಂಬಣ್ಣನಿಗೆ ತನ್ನ ತಪ್ಪು ಒಪ್ಪುಗಳಿಗಿಂತ ತನ್ನವ್ವನ ಶಾಪದಿಂದ ಹೆಂಡತಿಗೆ ಮೈ ಇಳಿದಿರಬಹುದು ಎಂಬ ಮನೋಭಾವವನ್ನು ನೋಡಿದರೆ ಪ್ರತಿ ಹಂತದಲ್ಲೂ ಕುಟುಂಬದೊಳಗೆ ಹೆಣ್ಣು ನಿಂದನೆಗೆ ಗುರಿಯಾಗುವುದನ್ನು ಕಾಣಲಾಗುತ್ತದೆ. ಚಿಕ್ಕಂದಿನಿಂದ ಬಡತನದಲ್ಲೇ ಬೆಳೆದ ಚಿಕ್ನಿಂಗಿಗೆ ಮಾವನನ್ನು ಮದುವೆಯಾಗದೆ ವಿಧಿ ಇರಲಿಲ್ಲ. ಗೌಡರ ಮಗ ಆನಂದನ ಮೇಲೆ ಇದ್ದ ಪ್ರೀತಿ ತಾಯಿಯಾಡಿದ ಮಾತಿನಿಂದ ದೂರವಾಗುತ್ತದೆ. ತನಗೆ ಮಕ್ಕಳಾಗದೆ ಇರುವ ಯೋಚನೆಯ ಜಾಡು ಹೆಮ್ಮರವಾಗಿ ಬೆಳೆಯಿತು. ಇದರಿಂದ ಮಗನ ಬಾಳು ಹಾಳಾಯಿತು ಎಂದು ಅಳುವ ಪುಟ್ನಿಂಗವ್ವನಿಗೂ ತನ್ನ ಮಗಳಿಗೂ ವಾಗ್ವಾದ ಪ್ರಾರಂಭವಾಗುತ್ತದೆ.

ಸಮಾಜ ಬದಲಾವಣೆಯ ಹಾದಿಯಲ್ಲಿದ್ದರೂ ವೈಜ್ಞಾನಿಕವಾಗಿ ಚಿಂತಿಸದೇ ತಾವು ನಂಬಿಕೊಂಡು ಬಂದ ಆಚರಣೆಗಳಲ್ಲಿ ಬದುಕು ಸಾಗಿಸುವ ಜನರನ್ನು ನೋಡಿದರೆ ಇಂದಿಗೂ ಮರುಕ ಹುಟ್ಟುತ್ತದೆ ಹೆಣ್ಣಿಗೆ ಹೆಣ್ಣೆ ಶತ್ರುವೆಂಬಂತೆ ತಾಯಿ ಮಗಳಲ್ಲಿ ಉಂಟಾಗುವ ಘರ್ಷಣೆಗಳು ಪ್ರಸ್ತುತಕ್ಕೆ ಹತ್ತಿರದಂತೆ ಇವೆ. ತಾಯಿಯ ತಮ್ಮನನ್ನು ಮದುವೆಯಾಗುವುದರಿಂದ ಅದು ಒಂದೇ ರಕ್ತ ಸಂಬಂಧವಾದ್ದರಿಂದ ಹುಟ್ಟಿದ ಮಗು ಹೆಚ್ಚು ದಿನಗಳ ಕಾಲ ಬದುಕುವುದಿಲ್ಲ, ಎಂಬ ನಂಬಿಕೆಯಂತೆ ಇಂದು ಸಹ ಈ ರೀತಿಯ ನಂಬಿಕೆಯಿಂದಲ್ಲೇ ಸಂಬಂಧಗಳಿಗೆ ಮದುವೆ ಮಾಡಲು ಹೆತ್ತವರು ಬಯಸುವುದಿಲ್ಲ. ಕಥೆಯಲ್ಲಿನ ಚಿಕ್ಕಿನಿಂಗಿಯೂ ಸಹ ಮಾವನನ್ನು ವಿಧಿಯಿಲ್ಲದೆ ಮದುವೆಯಾಗಿದ್ದರಿಂದ ಮಗು ಮರಣ ಹೊಂದುತ್ತದೆ. ಹಾಗಾಗಿ ಈ ರೀತಿಯ ನಂಬಿಕೆಯಿಂದ ಬದುಕುತ್ತಿರುವ ಜನರಲ್ಲಿ ಶಿಕ್ಷಣ ಕಲಿತವರು ಸಹ ಇದನ್ನು ತಡೆಗಟ್ಟಲು ಸಾಧ್ಯವಾಗುತ್ತಿಲ್ಲ.

ವೈಜ್ಞಾನಿಕ ಚಿಂತನೆಯ ಪ್ರಕಾರ ಒಂದೇ ಕುಟುಂಬದಲ್ಲಿ ಮದುವೆಯಾಗುವುದು ಮಕ್ಕಳಾಗಲು ತೊಂದರೆ ಎಂಬುದನ್ನು ತಮ್ಮ ಕಥೆಗಳ ಮೂಲಕ ಲೇಖಕರು ಎತ್ತಿ ಹಿಡಿಯುವ ಪ್ರಯತ್ನ ಮಾಡಿದ್ದಾರೆ. ಗ್ರಾಮೀಣರಲ್ಲಿ ಹೆಚ್ಚಾಗಿ ಸಂಬಂಧಗಳಲ್ಲಿ ಮದುವೆ ಮಾಡಿಕೊಂಡರೆ, ಸಂಬಂಧಗಳು ಹತ್ತಿರ ಇರುತ್ತಾರೆ ಎಂಬ ನಂಬಿಕೆಯಿಂದ ಮದುವೆ ಮಾಡಿಕಳಿಸುತ್ತಾರೆ. ಆದರೆ ಈ ರೀತಿಯ ಮದುವೆಗಳಿಂದ ಮಕ್ಕಳು ಅಂಗವಿಕಲರಾಗಿ, ಬುದ್ಧಿಮಾಂದ್ಯರಾಗಿ ಹುಟ್ಟಿತ್ತಿರುವುದನ್ನು ನೋಡುತ್ತಲೇ ಬಂದಿದ್ದೇವೆ.

ಇದೆಲ್ಲದರಿಂದ ಚೆಂಬಣ್ಣನ ಮನಸ್ಸಿಗೆ ಅತಿಯಾದ ನೋವಾಗಿ ಜೀವನವೇ ಬೇಡವಾಗುತ್ತದೆ. ಹೆಂಡತಿ ತಾಯಿಯ ಮನೆ ಸೇರಿದ್ದರಿಂದ ಬೆಂಬಣ್ಣ ಒಂಟಿಯಾದ. ಚಿಕ್ನಿಂಗಿಗೆ ತಾನು ಪ್ರೀತಿಸಿದ ಆನಂದನ ಜೊತೆ ಸೇರುವ ಆಸೆಯಾಗಿ ಕೊನೆಗೆ ಗಂಡನನ್ನು ಬಿಟ್ಟು ಹೊರಡುತ್ತಾಳೆ. "ಆಲದ ಮರ ಒರಗಿ ಕುಳಿತ ಚೆಂಬಣ್ಣ ಆಕಾಶದ ಕಡೆ ಶೂನ್ಯ ನೋಟ ಬೀರುತ್ತಾ ಕುಳಿತವನಿಗೆ ಚಿಕ್ನಿಂಗಿ ಓಡಿ ಹೋದುದು ಆಕಾಶವೇ ಮೇಲೆ ಬಿದ್ದ ಹಾಗಾಗಿತ್ತು. ಎಷ್ಟು ದಿನ ಹೀಗೆ ಬಂದು ಕುಳಿತಿದ್ದನೋ, ಆದರೆ ಆ ದಿನ ಮಾತ್ರ ಕತ್ತಲಾಗುವುದನ್ನೇ ಕಾಯುತ್ತಿದ್ದು ಕೊಂಬೆಗೆ ಹಗ್ಗ ಹಾಕಿ ತನ್ನ ಜೀವನವನ್ನೇ ಸಮಾಪ್ತಿ ಮಾಡಿಕೊಂಡ."

ಈ ಮಾತುಗಳನ್ನು ಗಮನಿಸಿದಾಗ ಕುಟುಂಬದಲ್ಲಿ ಒದಗುವ ಈ ರೀತಿಯ ಶೋಚನೀಯ ಸ್ಥಿತಿಯನ್ನು ಪ್ರಾರಂಭದಿಂದಲೂ ಗ್ರಾಮೀಣರು ಎದುರಿಸುತ್ತಿದ್ದಾರೆ. ವೈಚಾರಿಕವಾಗಿ ವಿಚಾರ ಮಾಡದೆ, ಸಂಬಂಧಗಳಿಗೆ ಬೆಲೆ ಕೊಟ್ಟು ತಮ್ಮ ಜೀವನವನ್ನೇ ಬಲಿಕೊಡುವ ಪ್ರಸಂಗಗಳನ್ನು ಕಾಣುತ್ತಲೇ ಬಂದಿದ್ದೇವೆ. ಆದ್ದರಿಂದ ಇಂತಹ ವಿಚಾರಗಳ ಬಗ್ಗೆ ಎಚ್ಚರ ವಹಿಸಿ ತಿಳುವಳಿಕೆ ಮೂಡಿಸುವ ಪ್ರಯತ್ನ ಮಾಡಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಗ್ರಾಮೀಣ ಜೀವನದಲ್ಲಿ ನಡೆಯುವ ಕೌಟುಂಬಿಕ ಕಲಹಗಳು ಹೆಣ್ಣಿನ ಬದುಕು ಅದರೊಳಗೆ ಉಸಿರಾಡುವ ಬದುಕಿನ ಏರಿಳಿತಗಳು, ಕುಟುಂಬದಲ್ಲಿ ಯಾವ ರೀತಿಯ ಪರಿಣಾಮ ಉಂಟುಮಾಡುತ್ತಿವೆ ಎಂಬುದನ್ನು ಕಾಣಬಹುದು. ಹಿಂದಿನಿಂದ ನಂಬಿಕೊಂಡು ಬಂದ ಆಚರಣೆಗಳು ಸಂಬಂಧಗಳ ಜೊತೆಗಿನ ಆತ್ಮೀಯತೆ ಎಲ್ಲವು ಮರೆಯಾಗುತ್ತಿದೆ. ಎಲ್ಲರಲ್ಲಿ ಬದಲಾವಣೆಯಾಗಬೇಕು. ಆಗ ಮಾತ್ರ ಗ್ರಾಮೀಣ ಸಮಾಜದಲ್ಲಿ ಸಾಮರಸ್ಯವನ್ನು ಕಾಣಲು ಸಾಧ್ಯ.

೪.೩. ಹೆಣ್ಣಿನ ಬದುಕು:

ಶತಶತಮಾನದಿಂದಲೂ ಉಪೇಕ್ಷೆಗೆ ಒಳಗಾಗಿ ಬದುಕುತ್ತಿರುವ ಹೆಣ್ಣು ಅದರಲ್ಲೂ ಗ್ರಾಮೀಣರಲ್ಲಿ ಹೆಣ್ಣಿನ ಸ್ಥಿತಿ ಶೋಚನೀಯವಾಗಿದೆ. ಎರಡನೇ ದರ್ಜೆಯಾಗಿ ಕಾಣುವ ಹೆಣ್ಣನ್ನು ಸಮಾಜದಲ್ಲಿ ನಿಕೃಷ್ಟವಾಗಿ ಕಾಣಲಾಗುತ್ತಿದೆ. ಗ್ರಾಮೀಣ ಸಮಾಜದಲ್ಲಿ ಹೆಣ್ಣಿಗೆ ಹಲವಾರು ಕಟ್ಟುಪಾಡುಗಳು, ವರದಕ್ಷಿಣೆಯ ಕಿರುಕುಳ, ಅತ್ಯಾಚಾರ ಮುಂತಾದವುಗಳನ್ನು ಅನುಭವಿಸುತ್ತಲೇ ಬಂದಿದ್ದಾಳೆ. ಗ್ರಾಮೀಣದಲ್ಲಿರುವ ನಂಬಿಕೆ ಆಚರಣೆಗಳಿಂದ ಹೆಣ್ಣು ಇಂದಿಗೂ ಶೋಷಣೆ, ತುಳಿತಕ್ಕೆ, ಸಿಕ್ಕಿ ಬದುಕುತ್ತಿರುವುದನ್ನು ಕೃಷ್ಣಪ್ಪ ಅವರ ಕತೆಗಳಲ್ಲಿ ಕಾಣಬಹುದು.

ಸಮಾಜ ಎಷ್ಟೇ ಮುಂದುವರಿದರೂ ಸಹ ಇಂದು ವರದಕ್ಷಿಣೆಯಂತಹ ಪಿಡುಗಿನಿಂದ ಬಳಲಿ ಬದುಕುತ್ತಿರುವುದನ್ನು ಕಾಣಬಹುದು. ಹೆಣ್ಣು ತಾಯಿಯಾಗಿ, ತಂಗಿಯಾಗಿ, ಹೆಂಡತಿಯಾಗಿ, ಮಗಳಾಗಿ ಬದುಕು ನಡೆಸುತ್ತಿದ್ದಾಳೆ. ಶ್ರೀಮಂತರ ದರ್ಪದಿಂದ ಅವರ ಕಾಮುಕತೆಗೆ ಬಲಿಯಾಗಿ ಅಸಹಾಯಕಳಾಗಿ ಬದುಕುತ್ತಿರುವುದನ್ನು ಇಂದಿಗೂ ಕಾಣುತ್ತಿದ್ದೇವೆ. ಕೌಟುಂಬಿಕ ಜೀವನದಲ್ಲಿ ದುಡಿದು ಬದುಕುತ್ತಿರುವ ಹೆಣ್ಣು ಗಂಡಿನಿಂದ ಶೋಷಣೆಗೆ ಗುರಿಯಾಗುತ್ತಲೇ ಬಂದಿದ್ದಾಳೆ. ಹೆಣ್ಣು ಶ್ರೀಮಂತ ವರ್ಗಕ್ಕೆ ಸೇರಿರಲಿ, ಬಡವರ್ಗಕ್ಕೆ ಸೇರಿರಲಿ ಶಿಕ್ಷಣ ಪಡೆಯಲಿ, ಪಡೆಯದಿರಲಿ, ಆಕೆಯನ್ನು ಗಂಡಿಗಿಂತ ಕೆಳಮಟ್ಟದಲ್ಲಿ ಕಂಡು ಅನಾದಿ ಕಾಲದಿಂದಲೂ ಶೋಷಣೆಗೆ ಗುರಿ ಮಾಡಿರುವುದನ್ನು ಕಾಣಬಹುದು. ಹುಟ್ಟಿನಿಂದಲೇ ಹೆಣ್ಣನ್ನು ತಾರತಮ್ಯ ಮಾಡುವುದನ್ನು ಕಾಣಬಹುದು. ಗ್ರಾಮೀಣರಲ್ಲಿರುವ ಮೂಢನಂಬಿಕೆಗಳು, ಕಂದಾಚಾರ, ಎಂಬ ಕಟ್ಟುಪಾಡುಗಳನ್ನು ಎದುರಿಸುತ್ತಲೇ ಬಂದಿದ್ದಾಳೆ. ಇದರಿಂದಾಗಿ ಸಮಾಜದಲ್ಲಿ ಬದಲಾವಣೆಯಾಗಿ ಗಂಡಿನಂತೆ ಹೆಣ್ಣಿಗೆ ಎಲ್ಲಾ ರೀತಿಯ ಸ್ಥಾನಮಾನಗಳನ್ನು ಕೊಟ್ಟಿದರೂ ಸಹ ಹೆಣ್ಣನ್ನು ಸಮನಾಗಿ ನೋಡದೆ, ಗಂಡು ಮೇಲು ಹೆಣ್ಣು ಕೀಳು ಎಂಬಂತೆ ಹೆಣ್ಣು ಕೆಳಗೆ ಇರಬೇಕೆಂದು ಬಯಸುತ್ತಿರುವುದು ಸಮಾಜಕ್ಕೆ ಸಮ್ಮತವಲ್ಲ. ಕೃಷ್ಣಪ್ಪ ಅವರು ಹಳ್ಳಿಯಲ್ಲಿ ಹುಟ್ಟಿ ಬೆಳೆದು ಹತ್ತಿರದಿಂದ ತಾವು ಕಂಡ ಹೆಣ್ಣಿನ ಜೀವನವನ್ನು ತಮ್ಮ ಕಥೆಗಳ ಮೂಲಕ ಎತ್ತಿ ಹಿಡಿದ್ದಾರೆ. ಗ್ರಾಮೀಣರಲ್ಲಿ ಬದುಕುತ್ತಿರುವ ಹೆಣ್ಣು ಇಂದಿಗೂ ಗಂಡಿನಿಂದ ಶೋಷಣೆಗೆ ಒಳಗಾಗುತ್ತಿರುವುದು, ಮೂಢನಂಬಿಕೆಗಳು, ಮೇಲ್ವರ್ಗದವರ ಕಾಮುಕತೆಗೆ ಬಲಿಯಾಗಿರುವುದು ಮುಂತಾದ ವಿಚಾರಗಳನ್ನು ಕಾಣಬಹುದು. ಲೇಖಕರು ಹೆಣ್ಣಿಗೆ ಉತ್ತಮವಾದ ಸ್ಥಾನವನ್ನು ಕೊಟ್ಟಿದ್ದಾರೆ. ವಿದ್ಯಾವಂತರಾಗಿ ಗಂಡಿಗೆ ಸರಿಸಮನಾಗಿ ದುಡಿಯುತ್ತಿದ್ದರೂ ಸಹ, ಹೆಣ್ಣನ್ನು

ಕೆಳಹಂತದಲ್ಲಿ ನೋಡುವುದು ತಮ್ಮ ಶ್ರೀಮಂತಿಕೆಯ ದರ್ಪ ದೌರ್ಜನ್ಯಕ್ಕೆ, ಕೆಳವರ್ಗದವರ ಹೆಣ್ಣು ಮಕ್ಕಳನ್ನು ಬಳಸಿಕೊಳ್ಳುವುದನ್ನು ಅವರ ಕಥೆಗಳಲ್ಲಿ ಕಾಣಬಹುದು. ಗಂಡಿನಂತೆ ಸರಿಸಮನಾಗಿ ಹೆಣ್ಣನ್ನು ಕಾಣುವ ಸಮಾಜವನ್ನು ಲೇಖಕರು ಬಯಸಿದ್ದಾರೆ. ಗ್ರಾಮೀಣರಲ್ಲಿ ಈ ಎಲ್ಲಾ ಶೋಷಣೆಗಳು ನಿಂತು ಹೆಣ್ಣಿಗೆ ಉತ್ತಮ ಸ್ಥಾನಮಾನ ಸಿಕ್ಕಿದಾಗ ಸಮಾಜ ಪ್ರಗತಿ ಹೊಂದುತ್ತದೆ.

ಗ್ರಾಮೀಣ ಪ್ರಪಂಚದಲ್ಲಿ ಬದುಕುತ್ತಿರುವ ಹೆಣ್ಣು ಇಂದಿಗೂ ಹಲವಾರು ಕಟ್ಟುಪಾಡುಗಳೊಂದಿಗೆ ಜೀವನ ಸಾಗಿಸುತ್ತಿದ್ದಾಳೆ. ಗಂಡಿಗೆ ಅಡಿಯಳಾಗಿ ಬದುಕುತ್ತಿರುವ ಹೆಣ್ಣು ದುಷ್ಟಶಕ್ತಿಗಳಿಗೆ ಬಲಿಯಾಗಿ ನೊಂದು ಕೊನೆಗೆ ತನ್ನ ಸಂಸಾರವೇ ಸಾವಿಗೆ ಶರಣಾಗುವುದನ್ನು ಇಂದಿಗೂ ಕಾಣಬಹುದು. ಕೃಷ್ಣಪ್ಪ ಅವರು ಸಹ ತಮ್ಮ ಕಥೆಗಳ ಮೂಲಕ ಹೆಣ್ಣಿನ ಜೀವನವನ್ನು ಆಕೆ ಶೋಷಣೆಗೆ ಒಳಗಾಗುವ ಪರಿಯನ್ನು ನೇರವಾಗಿ ಎತ್ತಿ ಹಿಡಿದಿದ್ದಾರೆ. ಗಂಡಿನಂತೆ ಹೆಣ್ಣು ಕೂಡ ದುಡಿದು ಜೀವನ ಸಾಗಿಸಬಲ್ಲ ಶಕ್ತಿಯನ್ನು ಹೊಂದಿದ್ದರೂ ಸಹ ಹೆಣ್ಣನ್ನು ಮೇಲ್ವರ್ಗದವರು ಲೈಂಗಿಕ ಶೋಷಣೆಗೆ ಒಳಗು ಮಾಡುವುದನ್ನು ನೋಡಬಹುದು.

ಗಂಡನನ್ನು ಕಳೆದುಕೊಂಡ ಹೆಣ್ಣನ್ನು ಸಮಾಜ ಯಾವ ರೀತಿಯಲ್ಲಿ ನೋಡುತ್ತದೆ ಎಂಬುದಕ್ಕೆ **'ಮಣ್ಣಿನ ಬದುಕು'** ಕಥೆಯಲ್ಲಿನ ಚಿಗವ್ವ ಉದಾಹರಣೆಯಾಗುತ್ತಾಳೆ. ಕೂಲಿ ಮಾಡಿ ಮಕ್ಕಳೊಂದಿಗೆ ಬದುಕುತ್ತಿದ್ದ ಚಿಗವ್ವನ ಕುಟುಂಬದೊಂದಿಗೆ ರಂಗಪ್ಪ ಆಪ್ತನಾಗಿದ್ದು, ತನ್ನ ಸಮಸ್ಯೆಗಿಂತ ಚಿಗವ್ವನ ಸಮಸ್ಯೆಗೆ ಮರುಗುತ್ತಿದ್ದನು. ಆದರೆ ಆತನೇ ಆ ಕುಟುಂಬಕ್ಕೆ ಹಾನಿಯನ್ನು ಉಂಟು ಮಾಡುವ ಪ್ರಸಂಗವನ್ನು ಇಲ್ಲಿ ಕಾಣಬಹುದು. ರಂಗಪ್ಪ ಮತ್ತು ಕರಿಯಪ್ಪನಂಥವರು ಒಂಟಿ ಹೆಣ್ಣನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾರೆ. ಕರಿಯಪ್ಪನ ಕೆಟ್ಟ ಕಣ್ಣು ಚಿಗವ್ವನಂತಹ ಎಷ್ಟೋ ಹೆಣ್ಣುಗಳನ್ನು ಹಾಳು ಮಾಡಿದ್ದವು. ಅವಳನ್ನು ತನ್ನ ಆಸೆಗಾಗಿ ಮತ್ತು ಸ್ವಾರ್ಥದಿಂದ ರಂಗಪ್ಪನ ಮೂಲಕ ತನ್ನ ಕಾರ್ಯವನ್ನು ಸುಲಭ ಮಾಡಿಕೊಂಡು ಕೆಳವರ್ಗದ ಹೆಣ್ಣನ್ನು ಮೋಸಗೊಳಿಸುತ್ತಾನೆ. ಹೀಗೆ ಜೀವನ ಸಾಗಿಸುತ್ತಿರುವ ಅನೇಕ ಪ್ರಸಂಗಗಳನ್ನು ಇಂದಿಗೂ ಕಾಣಬಹುದು. ಗಂಡ ಇದ್ದಾಗ ಗುತ್ತಿಗೆಗೆಂದು ಕೊಟ್ಟ ಭೂಮಿಯನ್ನು ಹಣದಾಸೆಯಿಂದ ಕರಿಯಪ್ಪನ ಚಾಡಿ ಮಾತು ಕೇಳಿ ರಂಗಪ್ಪ ಚಿಗವ್ವನಿಗೆ ಹಿಂದಿರುಗಿಸುವುದಿಲ್ಲವೆಂದು ಹೇಳುತ್ತಾನೆ. ಚಿಗವ್ವ ಅಂಗಲಾಚಿ ಬೇಡಿಕೊಂಡರೂ ಸಹ ಒಪ್ಪುವುದಿಲ್ಲ. ಇದು ಅಸಹಾಯಕ ಒಂಟಿ ಹೆಣ್ಣಿನ ಒಂದು ಪರಿ ಅಷ್ಟೆ.

ತಿಳಿಯಾಗಿದ್ದ ರಂಗಪ್ಪನ ಮನಸ್ಸನ್ನು ಕದಡಿ ಬಗ್ಗಡ ಮಾಡಿದ ಕರಿಯಪ್ಪ ತನ್ನ ಕೆಲಸ ಸುಲಭ ಮಾಡಿಕೊಂಡ. ಇಂತಹ ವ್ಯಕ್ತಿಗಳು ಗ್ರಾಮೀಣ ಜೀವನದ ಬಡತನದಲ್ಲಿರುವ ಒಬ್ಬ ಅಸಹಾಯಕ ಸ್ಥಿತಿಯಲ್ಲಿರುವ ಹೆಣ್ಣಿನ ಜೀವನಕ್ಕೆ ಕುತ್ತನ್ನು ತರುವ ಕಾಮುಕ ವ್ಯಕ್ತಿಗಳಾಗಿದ್ದಾರೆ. ಓದು ಬರಹ ಬಾರದ ಚಿಗವ್ವ ತನ್ನ ಭೂಮಿ ಸಿಕ್ಕರೆ ಸಾಕೆಂದು ಮನದ ಮೂಲೆಯಲ್ಲಿ ದೇವರನ್ನು ನೆನೆದು ಭೂಮಿಗಾಗಿ ಕರಿಯಪ್ಪನೊಂದಿಗೆ ಕೋರ್ಟು ಕಛೇರಿಯೆಂದು ತಿರುಗಾಡುತ್ತಾಳೆ. ಹೀಗೆ ಚಿಗವ್ವನ ಸಂಗವನ್ನು ಪಡೆಯುವುದು ಕರಿಯಪ್ಪನ ಉದ್ದೇಶವಾಗಿತ್ತು.

ಕೆಳವರ್ಗದ ಹೆಣ್ಣನ್ನು ತನ್ನ ಸ್ವಾರ್ಥಕ್ಕಾಗಿ, ತನ್ನ ಕಾಮುಕತೆಯನ್ನು ತೀರಿಸಿಕೊಳ್ಳುವ ಸಲುವಾಗಿ ಚಿಗವ್ವನಂತಹ ಎಷ್ಟೋ ಬಡ ಕುಟುಂಬಗಳ ಜೊತೆ ಆಟವಾಡಿದ ಕರಿಯಪ್ಪ ಸಮಾಜದಲ್ಲಿ ಕೆಟ್ಟ ಪರಿಣಾಮ ಬೀರಬಲ್ಲ ವ್ಯಕ್ತಿಯಗಿದ್ದಾನೆ. ತನ್ನ ಕೆಟ್ಟ ಚಟಕ್ಕಾಗಿ ಗಂಡ ಸತ್ತ ಹೆಣ್ಣಿನ ಜೀವನದಲ್ಲಿ ಮಾಡುವ ಮೋಸ, ವಂಚನೆ ಇಂದಿಗೂ ಕಾಣುತ್ತಲೇ ಬಂದಿದ್ದೇವೆ. ಹೆಣ್ಣಿಗೆ ಎಷ್ಟೇ ಉತ್ತಮ ಸ್ಥಾನ ಗೌರವಗಳಿದ್ದರೂ, ಮತ್ತೊಂದೆಡೆ ಹೆಣ್ಣು ಶೋಷಣೆ, ಅತ್ಯಾಚಾರಕ್ಕೆ ಬಲಿಯಾಗುತ್ತಿರುವುದನ್ನು ಕಾಣಬಹುದು.

ಇಂತಹ ದುಷ್ಟ ಶಕ್ತಿಗಳು ಸಮಾಜದ ಅವನತಿಗೆ ಕಾರಣವಾಗುವುದರ ಜೊತೆಗೆ ಹೆಣ್ಣಿನ ಜೀವನಕ್ಕೆ ಮುಳುವಾಗುತ್ತಾರೆ ಎಂಬ ಎಚ್ಚರಿಕೆಯ ಮಾತನ್ನು ಲೇಖಕರು ತಿಳಿಸಿದ್ದಾರೆ. ಒಂದು ಹೆಣ್ಣು ಬೇರೆ ಗಂಡಿನ ಜೊತೆ ಮಾತಾನಾಡಿದರೆ ಹಲವಾರು ಅಪವಾದಗಳನ್ನು ಕಟ್ಟುವ, ಸಮಾಜದಲ್ಲಿ ಅದರಲ್ಲೂ ಆಚಾರ-ವಿಚಾರ ಸಂಪ್ರಾದಾಯಗಳ ಜೊತೆಗೆ ಬದುಕು ಸಾಗಿಸುವ ಜನರ ಮಧ್ಯೆ ಬದುಕುವ ಹೆಣ್ಣಿನ ಜೀವನ ತುಂಬಾ ಶೋಚನೀಯ ಸ್ಥಿತಿಯಲ್ಲಿರುತ್ತದೆ. ಕಥೆಯಲ್ಲಿನ ಚಿಗವ್ವ ಈ ರೀತಿಯ ಗೊಂದಲದ ನಡುವೆ ಸಿಲುಕಿ ಜಂಜಾಟದ ಬದುಕು ಸಾಗಿಸುತ್ತಾಳೆ. ತನ್ನಟ್ಟಿಯಲಿದ್ದ "ಕುರಿಗಳೆಲ್ಲಾ ಕೊಟ್ಟಿಗೆ ತುಂಬಾ ಓಡಾಡುತ್ತಿದ್ದವು. ಟಗರು ಹೆಣ್ಣು ಕುರಿಗಳನ್ನು ಓಡಾಡಿಸುತ್ತಿತ್ತು". ಅದನ್ನು ಕಂಡ ಚಿಗವ್ವ ಒಮ್ಮೆ ತನ್ನ ಸ್ಥಿತಿಯನ್ನು ನೆನೆದು ಬೆಚ್ಚಿ ಬೀಳುತ್ತಾಳೆ.

ಸಮಾಜದಲ್ಲಿ ಹೆಣ್ಣನ್ನು ಯಾವ ರೀತಿಯಲ್ಲಿ ಶೋಷಣೆಗೆ ಗುರಿ ಮಾಡುತ್ತಾರೆ ಎಂಬುದಕ್ಕೆ ಇಂಥ ಅನೇಕ ಅಂಶಗಳು ನಿದರ್ಶನವಾಗುತ್ತವೆ. ಹೆಣ್ಣಿಗೆ ಯಾರು ಆಸರೆ ಇಲ್ಲವೆಂದಾಗ ಅವಳನ್ನು ನೋಡುವ ಸಮಾಜ ನೋಡುವ ದೃಷ್ಟಿಯೇ ಬೇರೆಯಾಗಿರುತ್ತದೆ. ತನ್ನ ಅಸಹಾಯಕ ಸ್ಥಿತಿಯನ್ನು ನೆನೆದು, ಸಾವಿಗೆ ಬಲಿಯಾದ ಚಿಗವ್ವನಂತ ಹೆಣ್ಣುಮಕ್ಕಳು ಇಂದಿಗೂ ಕಾಣಸಿಗುತ್ತಾರೆ. ಸಮಾಜ ಉತ್ತಮವಾದ ಅಭಿವೃದ್ಧಿಯನ್ನು ಕಾಣಬೇಕಾದರೆ ಹೆಣ್ಣಿಗೆ ಉತ್ತಮಸ್ಥಾನಮಾನಗಳು ದೊರೆಯಬೇಕು ಎಂಬುದು ವ್ಯಕ್ತವಾಗುತ್ತದೆ.

'ಒಂದು ಆತ್ಮಹತ್ಯೆಯ ಕಥೆ' ಯಲ್ಲಿ ಬರುವ ಮಾನಿಂಗಕ್ಕ ಅದೇ ರೀತಿಯ ಪರಿಸ್ಥಿತಿಯನ್ನು ಎದುರಿಸುತ್ತಾಳೆ. ತನ್ನ ಜಮೀನನ್ನು ಪಡೆಯಲು ಇನ್ನೊಬ್ಬರ ಜೊತೆ ಕಛೇರಿಗೆಂದು ಹೋಗುವುದು ಎಲ್ಲಕ್ಕಿಂತ ತನ್ನ ಮಗಳು ಬೇರೊಬ್ಬನ ಜೊತೆ ಮಾತನಾಡುತ್ತಿದ್ದ ವಿಷಯವನ್ನು ದೊಡ್ಡದು ಮಾಡಿ ಕೆಟ್ಟ ರೀತಿಯಲ್ಲಿ ಮಾತಾಡುವ ಸಮಾಜ ಹೆಣ್ಣಿಗೆ ಕಟ್ಟುಪಾಡುಗಳನ್ನು ಹಾಕಿ ನಿಕೃಷ್ಟವಾಗಿ ಕಾಣುವುದನ್ನು ನೋಡುತ್ತಿದ್ದೇವೆ. ಗಂಡನನ್ನು ಎಲೆಕ್ಷನ್ ಎಂದು ನಿಲ್ಲಿಸಿ ಗೆದ್ದು ಸ್ವರ್ಗಕ್ಕೆ ಮೂರೇಗೇಣು ಎನ್ನುವಾಗ ಅವನು ಹೆಣವಾಗಿ ಬರುತ್ತಾನೆ. ಎಲ್ಲಾವು ಅವಳ ಬದುಕಿನಲ್ಲಿ ಆಟವಾಡಿದ ಮೋಸದ ಕೈಗಳಾಗಿದ್ದವು. ದಿನದಿಂದ ದಿನಕ್ಕೆ ಸಾವಿಗೆ ಬಲಿಯಾಗುತ್ತಿರುವ ಹೆಣ್ಣು ಹುಟ್ಟಿನಿಂದಲೂ ತಾರತಮ್ಯಕ್ಕೆ ಗುರಿಯಾಗಿದ್ದಾಳೆ. ಇಲ್ಲದ ಆರೋಪವನ್ನು ಮಗಳಿಗೆ ಹೊರಿಸಿ ಪಂಚಾಯ್ತಿಗೆ ನಿಲ್ಲಿಸಿದಾಗ ಅವಮಾನ ಸಹಿಸಲಾರದೆ ನೋವಿನಿಂದ ಕಬ್ಬಿನ ಗದ್ದೆಗೆ ಹೊಡೆಯಲು ತಂದಿದ್ದ ಔಷಧಿಯನ್ನು ಸಾರಿನಲ್ಲಿ ಬೆರಸಿ ತಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುತ್ತಾರೆ.

ಈ ರೀತಿಯ ಘಟನೆಗಳನ್ನು ಹೆಚ್ಚಾಗಿ ಗ್ರಾಮೀಣ ಸಮಾಜದಲ್ಲಿ ಕಾಣಲಾಗುತ್ತಿದೆ. ಬಡತನದಲ್ಲಿ ಬದುಕುತ್ತಿರುವ ಕೆಳವರ್ಗದವರ ಸ್ಥಿತಿ ದಿನದಿಂದ ದಿನಕ್ಕೆ ಕೆಳಮಟ್ಟದಲ್ಲೆ ಇರುವುದನ್ನು ಗುರುತಿಸಬಹುದು. ಗಂಡಿಗೆ ಸರಿಸಮನಾಗಿ, ದೃಢವಾಗಿ ನಿಂತಾಗ ಸಮಾಜದಲ್ಲಿ ಉತ್ತಮವಾದ ಬದುಕನ್ನು ಕಾಣಲು ಸಾಧ್ಯವಾಗುತ್ತದೆ.

ಸಮಾಜದಲ್ಲಿ ಹೆಣ್ಣಿಗೆ ಅತಿಯಾಗಿ ಕಾಡುತ್ತಿರುವ ಭೂತವೆಂದರೆ ವರದಕ್ಷಿಣೆ ಪಿಡುಗು. ಇದರಿಂದ ನೊಂದು ಎಷ್ಟೋ ಹೆಣ್ಣು ಮಕ್ಕಳ ಜೀವನವೇ ನರಕವಾಗಿರುವುದನ್ನು ಕಾಣುತ್ತಿದ್ದೇವೆ. ಪ್ರಸ್ತುತ ಸಮಾಜದಲ್ಲಿ ಈ ಸಮಸ್ಯೆ ಹೆಣ್ಣಿಗೆ ಶಾಪವಿದ್ದಂತೆ, ಶತಶತಮಾನಗಳಿಂದ ಆಚರಿಸಿಕೊಂಡು ಬಂದಿರುವ ಈ ಪದ್ದತಿಯನ್ನು ಕಾಣಬಹುದಾಗಿದೆ. **'ಸ್ಮರಣೆಯ ಸುಳಿಯಲ್ಲಿ'** ಕಥೆಯಲ್ಲಿ ಬರುವ ಪಾರ್ವತಿಯ ಜೀವನವು ಸಹ ಈ ಶಾಪಕ್ಕೆ ಗುರಿಯಾಗಿ ಜೀವನದುದ್ದಕ್ಕೂ ಗಂಡನ ಮನೆಯವರ ನಿಂದನೆಗೆ ಬಲಿಯಾಗಿ ಬದುಕುತ್ತಿರುವುದನ್ನು ಕಾಣಬಹುದು. "ಹೌದು! ತಾನೂ ಕೂಡ ಮುಂಡೆಯಂತೆ ಈ ರೀತಿ ಎಷ್ಟು ದಿನ

ಇರಲು ಸಾಧ್ಯ? ತನ್ನನ್ನು ಜನರು ದೂಷಿಸುತ್ತಾರೆ. ಆದರೆ ಜನರಿಗೇನು ಗೊತ್ತು ತನ್ನ ಬಾಳ ಅಳಲು... ಹೆಣ್ಣು ಹೆತ್ತವರು ಜೊತೆಯಲ್ಲಿ ಹಣದ ಖಜಾನೆಯನ್ನು ಭರ್ತಿ ಮಾಡಿಕೊಂಡಿರಬೇಕು. ಇಲ್ಲದಿದ್ದರೆ ಅವಳ ಬಾಳು ತನ್ನಂತೆಯೇ... ತನ್ನ ಬಾಳು... ತನ್ನ ಬಾಳೇಕೆ ನರಕ ಸದೃಶವಾಗಿದೆ? ಯಾವಾಗ ತಾನು ಗಂಡನ ಮನೆಯನ್ನು ತೊರೆದೆನೋ ಅಂದೇ ತನ್ನ ಬಾಳು ನರಕವಾಯಿತು. ಆದರೆ ಬದುಕಬೇಕೆಂಬ ಆಸೆ ಮಾತ್ರ ಇನ್ನೂ ಇದೆ ಏತಕ್ಕೆ? ಏಕೆ ಬದುಕಬೇಕು?... ಉತ್ತರವಿಲ್ಲ. ಹೆಣ್ಣಿನ ಬಾಳೇ ಕಣ್ಣೀರು ... ಅಯ್ಯೋ, ತನ್ನಂತೆಯೇ ಎಷ್ಟೊಂದು ಹೆಣ್ಣುಗಳು ತಮ್ಮ ಜೀವನವನ್ನು ಮಣ್ಣುಗೂಡಿಸಿಕೊಂಡಿದ್ದಾರೋ ! ತಾನೂ ಕೂಡ ಅದೇ ದಿವಸವೇ ತನ್ನ ಬಾಳಿನ ಅಂತ್ಯ ಗೀತೆಯನ್ನು ಹಾಡ ಬಹುದಿತ್ತು".

ಹುಟ್ಟಿನಿಂದಲೇ ತಂದೆಯನ್ನು ಕಳೆದುಕೊಂಡು ಬಡತನದಲ್ಲಿ ಜೀವಿಸುತ್ತಿದ್ದ ಪಾವರ್ತಿಗೆ ಅನೇಕ ಕಷ್ಟಗಳು ಬಂದರು ಸಹಿಸಿಕೊಂಡು ಗಂಡನ ಮನೆಯಲ್ಲಿ ಸುಖ ಬಯಸಿದ್ದು ಅವಳ ಪಾಲಿಗೆ ಮುಳ್ಳಾಯಿತು. ಸಮಾಜದಲ್ಲಿ ವರದಕ್ಷಿಣೆಯ ಶಾಪಕ್ಕೆ ಗುರಿಯಾಗಿ ಎಷ್ಟೋ ಹೆಣ್ಣು ಮಕ್ಕಳ ಪ್ರಾಣ ಪಕ್ಷಿ ಹಾರಿ ಹೋಗಿದೆಯೋ, ತಿಳಿಯಲಾಗದು. ಗ್ರಾಮೀಣ ಸಮಾಜದಲ್ಲಿ ಹೆಣ್ಣು ಧೈರ್ಯದಿಂದ ಜೀವನ ನಡೆಸಿದರೂ ಅಥವ ಜೀವನ ಕಳೆದುಕೊಂಡರೂ ಸಮಾಜ ನಗುತ್ತದೆ. ಅಂಥ ಸಮಾಜದಲ್ಲಿ ಜೀವಿಸುವುದೇ ಕಷ್ಟ. ಪಾರ್ವತಿಯ ಜೀವನವು ಹಾಗೆಯೇ ತನ್ನ ಗಂಡನ ಮನೆಯಲ್ಲಿ ಆಗುವ ಅನ್ಯಾಯವನ್ನು ನುಂಗಿ ಬದುಕಲಾರದೆ ತವರಿಗೆ ಬಂದದ್ದರಿಂದ ಸಮಾಜ ಅವಳನ್ನು ದೂಷಿಸುತ್ತದೆ. ಹೆಣ್ಣನ್ನು ಕೆಟ್ಟ ರೀತಿ ನಿಂದನೆಗೆ ಗುರಿಪಡಿಸುವವಳು ಹೆಣ್ಣೇ ಅವಳನ್ನು ಬದುಕಿಸುವಳು ಹೆಣ್ಣೇ. ಪಾರ್ವತಿ ಎಲ್ಲವನ್ನು ನೆನೆದು ತನ್ನ ಬದುಕಿನಲ್ಲಾದ ಘಟನೆಯಿಂದ ಬದುಕೇ ಬೇಡವಾಗುತ್ತದೆ.

ಸಮಾಜದಲ್ಲಿ ಪಾರ್ವತಿಯಂತಹ ಹೆಣ್ಣುಗಳು ಪ್ರಸ್ತುತದಲ್ಲೂ ವರದಕ್ಷಿಣೆಯ ಭೂತಕ್ಕೆ ಸಿಕ್ಕಿ ಬೆಂದು ಹೋಗುತ್ತಿದ್ದಾರೆ. ಹೆಣ್ಣಿನ ಬದುಕು ಕತ್ತರಿಯ ಮಧ್ಯೆ ಸಿಕ್ಕ ಅಡಿಕೆಯಂತೆ ಆಗಿದೆ. ದಿನವೆಲ್ಲಾ ಗಂಡನ ಮನೆಯಲ್ಲಿ ದುಡಿದರೂ ಕರುಣೆ ತೋರುವವರೊಬ್ಬರಿಲ್ಲದೆ, ಎಲ್ಲವನ್ನು ಸಹಿಸಿಕೊಂಡು ಬದುಕುವ ಹೆಣ್ಣನ್ನು ಕಾಣುತ್ತೇವೆ. ಸಮಾಜದಲ್ಲಿ ಇದೊಂದು ಸಹಿಸಲಾರದ ಕೆಟ್ಟ ಪದ್ದತಿಯಾಗಿದೆ. ಇದು ಸಂಪೂರ್ಣವಾಗಿ ತೊಲಗಿ ಹೆಣ್ಣು ಸ್ವಾವಲಂಬಿಯಾಗಿ ಬದುಕಬೇಕು ಎಂಬುದು ಲೇಖಕರ ಮಾತಿನಿಂದ ವ್ಯಕ್ತವಾಗುತ್ತದೆ. ಬದಲಾವಣೆಯನ್ನು ಬಯಸುತ್ತಿರುವ ಸಮಾಜದಲ್ಲಿ ಪಾರ್ವತಿಯನ್ನು ಗಂಡನ ಮನೆಯಿಂದ ಹೊರಹಾಕಿದ್ದಕ್ಕೆ ಮತ್ತೊಬ್ಬ ಹೆಣ್ಣು ಅವಳ ಮೇಲೆ ಕೆಲವೊಂದು ಅಪವಾದಗಳನ್ನು ಹೇಳುವ ಮಾತುಗಳನ್ನು ಎಲ್ಲ ಕಡೆಯು ನೋಡಬಹುದು.

"ಗಂಡಸರ ಹಾವಳಿಗಿಂತ ಹೆಂಗಸರ ಹಾವಳಿಯೇ ಅಧಿಕವಾಯಿತು. ಹೆಣ್ಣನ್ನು ಸಮಾಜದಲ್ಲಿ ದೂರುವಳು ತಾನೇ, ದೂರಿಸಿಕೊಳ್ಳುವವಳೂ ತಾನೆ. 'ಅತ್ತೆಗೊಂದು ಕಾಲ, ಸೊಸೆಗೊಂದು ಕಾಲವೆಂಬಂತೆ" ಸೊಸೆಯೆ ಕಾಲದಲ್ಲಿ ದೂರಿಸಿಕೊಂಡರೆ ಅತ್ತೆಯ ಕಾಲದಲ್ಲಿ ದೂರುತ್ತಾಳೆ. ಇದೊಂದು ಹೆಣ್ಣಿನ ವಿಚಿತ್ರ ನಡತೆ". ಹೆಣ್ಣಿಗೆ ಹೆಣ್ಣೇ ಶತ್ರುವೆಂಬಂತೆ, ತಪ್ಪು ತಿಳುವಳಿಕೆಯಿಂದ, ಕೆಟ್ಟ ನಡವಳಿಕೆಯಿಂದ ಹೆಣ್ಣನ್ನು ದೂಷಿಸುವುದನ್ನು ಕಾಣಲಾಗುತ್ತಿದೆ. ಇದರಿಂದ ಪಾರ್ವತಿಗೆ ಜೀವನವೇ ಬೇಡವೆಂದು ನಿರ್ಧಾರ ಮಾಡುತ್ತಾಳೆ. ಗ್ರಾಮೀಣ ಸಮಾಜದಲ್ಲಿ ಹೆಣ್ಣಿಗೆ ಉತ್ತಮವಾದ ಸ್ಥಾನಮಾನಗಳನ್ನು ಕೊಟ್ಟು, ಗಂಡಿನಷ್ಟೇ ಸರಿಸಮಾನವಾಗಿ ಬದುಕು ನಡೆಸಲು ಸಾಧ್ಯವಾದಾಗ ಹೆಣ್ಣಿನ ಬದುಕು ಸಾರ್ಥಕ ಎನಿಸುತ್ತದೆ. ಅಂತಹ ಸಮಾಜವನ್ನು ನೋಡಲು ಲೇಖಕರು ಬಯಸಿದ್ದಾರೆ.

ಸಮಾಜದಲ್ಲಿ ಗಂಡಿನಷ್ಟೇ ಹೆಣ್ಣು ಕೂಡ ಸಮನಾಗಿ ದುಡಿಯುತ್ತಿದ್ದಾಳೆ. ತಂದೆ ತಾಯಿ, ಗಂಡ ಮಕ್ಕಳು ಎಲ್ಲರನ್ನು ನೋಡಿಕೊಂಡು ಬದುಕು ಸಾಗಿಸುತ್ತಿರುವ ಹೆಣ್ಣು ಹಲವಾರು ಸಮಸ್ಯೆಗಳನ್ನು

ಎದುರಿಸುತ್ತಲೇ ಬಂದಿದ್ದಾಳೆ. ಗ್ರಾಮೀಣ ಹೆಣ್ಣು ಮಕ್ಕಳು ಗಾರ್ಮೆಂಟ್ಸ್‌ನಲ್ಲಿ ದುಡಿಯುವುದನ್ನು ಅವರ ಕಷ್ಟ ಸುಖ ನೋವು ನಲಿವುಗಳನ್ನು ಹತ್ತಿರದಿಂದ ಕಂಡು ಕೇಳಿದ ವಿಚಾರಗಳನ್ನು ತಮ್ಮ ಕಥೆಯಲ್ಲಿ ತಿಳಿಸಿದ್ದಾರೆ. ಸಮಾಜದಲ್ಲಿ ಬದುಕು ಸಾಗಿಸಲು ಹೆಣ್ಣು ಕಷ್ಟ ಪಟ್ಟು ದುಡಿಯುತ್ತಿದ್ದಾಳೆ. ಗಾರ್ಮೆಂಟ್ಸ್ ಕೆಲಸಕ್ಕೆ ಹೋಗುವವರು ಬೆಳಿಗ್ಗೆ ನಿಂತರೆ ಸಂಜೆಯ ತನಕ ದುಡಿದು ಬಸ್ಸು ಹಿಡಿದು ಮನೆ ಸೇರುವುದು,ಹತ್ತು ಗಂಟೆಗಳಾಗುತ್ತದೆ. ಅವರು ಅನುಭವಿಸುವ ಕಷ್ಟ ಅವರಿಗೆ ಮಾತ್ರ ತಿಳಿದಿದೆ. "ಗಾರ್ಮೆಂಟ್ಸ್ ಕಾರ್ಮಿಕರ ದುಸ್ಥಿತಿ, ಬೆಳಗಿನಿಂದ ಸಂಜೆ ತನಕ ದುಡಿದರೆ ಮೈ ಮನಸ್ಸುಗಳೇನಾಗುವುದಿಲ್ಲ? ಯೋಚಿಸಿದಾಗೆ ತಲೆ ಧಿಮ್ಮೆಂದಿತು ಎಂಬ ಸಾಲುಗಳು ಅದನ್ನು ಸ್ಪಷ್ಟಪಡಿಸುತ್ತವೆ.

ಹೆಣ್ಣು ಬೆಳಗಿನಿಂದ ಸಂಜೆ ತನಕ ದುಡಿದು ಬದುಕುವುದನ್ನು ನೆನೆದರೆ ಅವಳು ಸಹ ಗಂಡಿನಂತೆ ದುಡಿಯಬಲ್ಲಳು. ಗಾರ್ಮೆಂಟ್ಸ್ ಕೆಲಸಕ್ಕೆ ಹೋಗುವ ಹಳ್ಳಿಗಾಡಿನ ಹೆಣ್ಣು ಮಕ್ಕಳು ಲೈಂಗಿಕ ಶೋಷಣೆಗೆ ಗುರಿಯಾಗುತ್ತಾರೆಂಬ ಸುದ್ದಿಗಳನ್ನು ಸಹ ಕೇಳುತ್ತಿದ್ದೆವು. ಆದರೆ ಕೆಲವರು ಮಾತ್ರ ಈ ರೀತಿಯ ಕೂಪಕ್ಕೆ ಬಲಿಯಾಗುತ್ತಿದ್ದರು ಎಂದೆನ್ನಿಸುತ್ತದೆ. ಹೆಣ್ಣು ಈ ರೀತಿಯ ಕೆಲಸದಲ್ಲೂ ತನ್ನ ಎಲ್ಲಾ ಕಷ್ಟಗಳನ್ನು ಸಹಿಸಿಕೊಂಡು ದುಡಿಯುತ್ತಿದ್ದಾಳೆ.

ಸಮಾಜದಲ್ಲಿ ವರದಕ್ಷಿಣೆಯ ಶಾಪಕ್ಕೆ ಸಿಲುಕಿರುವ ಹೆಣ್ಣು ಹಲವಾರು ಕಟ್ಟುಪಾಡುಗಳೊಂದಿಗೆ ದುಡಿಯುತ್ತಿದ್ದಾಳೆ. ಹೆಣ್ಣು ಹೆತ್ತವರು ಇದರಿಂದ ಬೆಂದು ಹೋಗುತ್ತಿದ್ದಾರೆ. ಗಾರ್ಮೆಂಟ್ಸ್‌ನಲ್ಲಿ ದುಡಿದು ಹೆತ್ತವರಿಗೆ ಹೊರೆಯನ್ನು ಕಡಿಮೆ ಮಾಡುತ್ತಿದ್ದಾಳೆ. ಸಮಾಜದಲ್ಲಿ ದುಡಿಯುವ ಜೀವಿಗಳಲ್ಲಿ ಹೆಣ್ಣು ಕೂಡ ಒಬ್ಬಳು ತನ್ನ ಎಲ್ಲಾ ಆಸೆ ಆಕಾಂಕ್ಷೆಗಳಿಂದ ಹೊರ ಉಳಿದು ದುಡಿಯುತ್ತಿದ್ದಾಳೆ. ಸಮಾಜದಲ್ಲಿ ಹೆಣ್ಣಿಗೆ ಎಷ್ಟೇ ಸ್ಥಾನಮಾನ ಗೌರವಗಳಿದ್ದರೂ ಅವಳಿಗೆ ಏನಾದರೂ ಒಂದು ಹೊರೆಯನ್ನು ಹೊರಿಸುತ್ತಾರೆ. ಎಂಬುದಕ್ಕೆ **'ದುಡಿಯುವ ಜೀವಿಗಳು'** ಕಥೆಯಲ್ಲಿನ ಗಾರ್ಮೆಂಟ್ಸ್ ಕೆಲಸಕ್ಕೆ ಹೋಗುವ ಹೆಣ್ಣಿನ ಜೀವನ ಗಮನಿಸಬಹುದು. ಕೆಲವರು ದುಷ್ಟ ವ್ಯಕ್ತಿಗಳ ಕಾಮುಕತೆಗೆ ಬಲಿಯಾಗುತ್ತಾರೆ. ಆದರೆ ಎಲ್ಲರನ್ನು ಅದೇ ದೃಷ್ಟಿಯಿಂದ ನೋಡುವ ಸಮಾಜ ಹೆಣ್ಣಿನ ಕಷ್ಟವನ್ನು ನೋಡದು. ಇಂದಿಗೂ ಸಹ ಹೆಣ್ಣು ನಿಂದನೆಗೆ ಗುರಿಯಾಗಿ ಬದುಕುತ್ತಿರುವುದನ್ನು ಕಾಣಬಹುದು. ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು ಬಡತನದಿಂದ ಬೆಂದು ಈ ರೀತಿ ದುಡಿದು ಬದುಕು ನಡೆಸುತ್ತಿರುವುದನ್ನ ಕಾಣಬಹುದು. ಸಮಾಜದಲ್ಲಿ ಮಂತ್ರಿ ಮಹೋದಯರು ರಾಜಕೀಯ ಪುಡಾರಿಗಳು ಗಂಟೆಗಟ್ಟಲೆ ಭಾಷಣ ಮಾಡುವವರು ಈ ವಿಚಾರದ ಬಗ್ಗೆ ಚಿಂತಿಸಬೇಕು. ಮಠಮಂದಿರಗಳಲ್ಲಿ ಕುಳಿತ ಸ್ವಾಮೀಜಿಗಳು ಮದುವೆಯ ಬಗ್ಗೆ ತಿಳುವಳಿಕೆ ಮೂಡಿಸಿ ಸರಳ ವಿವಾಹ, ಸಾಮೂಹಿಕ ವಿವಾಹದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿದಾಗ ಇದರಲ್ಲಿ ಬದಲಾವಣೆಯನ್ನು ಕಾಣಬಹುದು. ತನ್ನನ್ನು ಹೆತ್ತವರಿಗೆ ಹೊರೆಯನ್ನು ಕಡಿಮೆ ಮಾಡಲು ಈ ರೀತಿಯ ಜೀವನ ಸಾಗಿಸುತ್ತಿರುವುದು ಶೋಚನೀಯ ಸಂಗತಿಯಾಗಿದೆ. ಈ ವರದಕ್ಷಿಣೆ ಎಂಬ ಪಿಡುಗನ್ನು ಸಂಪೂರ್ಣವಾಗಿ ತಡೆಗಟ್ಟಬೇಕು. ಗಂಡಿಗೆ ಸಮನಾಗಿ ಎಲ್ಲಾ ರಂಗದಲ್ಲೂ ದುಡಿಯುತ್ತಿರುವ ಹೆಣ್ಣು ಇದರಿಂದ ಮುಕ್ತಿ ಪಡೆದಾಗ ಉತ್ತಮ ಸಮಾಜದ ನಿರ್ಮಾಣವನ್ನು ಕಾಣಬಹುದು.

ಸಮಾಜ ಎಷ್ಟೇ ಮುಂದುವರಿದರೂ ಸಹ ಕೆಳವರ್ಗದವರ ಮೇಲಾಗುವ ಶೋಷಣೆಯನ್ನು ಕಾಣುತ್ತಲೇ ಬಂದಿದ್ದೇವೆ. ಗ್ರಾಮೀಣರಲ್ಲಿ ಶ್ರೀಮಂತರ ದರ್ಪದಿಂದ ತಮ್ಮ ಕಾಮುಕತೆಯನ್ನು ತೀರಿಸಿಕೊಳ್ಳಲು ಕೆಳವರ್ಗದ ಹೆಣ್ಣು ಇಂದಿಗೂ ಬಲಿಯಾಗುವುದನ್ನು **'ಕತ್ತಲು'** ಕಥೆಯಲ್ಲಿ ನೋಡಬಹುದು.

ಸಣ್ಣೂರಿಗೆ ಹೇಳಿಕೊಳ್ಳುವ ಕುಳ ಎಂದರೆ ಶಿವನಂಜೇಗೌಡ. ಅಪ್ಪನ ಕಾಲದಿಂದಲೂ ಬಡ ಒಕ್ಕಲುಗಳ ಜಮೀನನ್ನು ಗೋರಿ ಹಾಕಿಕೊಂಡು ಪ್ರಸಿದ್ಧಿ ಪಡೆದವನು. ಪ್ರತಿಯೊಂದು ವಿಚಾರವಾಗಲಿ, ಕಾರ್ಯವಾಗಲಿ, ಅದರಲ್ಲಿ ಶಿವನಂಜೇಗೌಡನ ಕೈವಾಡವಿರುತ್ತಿತ್ತು. ಇಂತಹ ಶ್ರೀಮಂತಿಕೆಯ ದರ್ಪದಲ್ಲಿ ಮೆರೆಯುವ ಗೌಡನಿಂದ ಕೆಳವರ್ಗದವನಾದ ಕೊಣ್ಣನ ಕುಟುಂಬವೇ ನಾಶವಾಗುವುದನ್ನ ನೋಡಬಹುದು.

ಸಮಾಜದಲ್ಲಿ ಕೆಳವರ್ಗದವರಿಗೂ ಉತ್ತಮ ಸ್ಥಾನಮಾನಗಳನ್ನು ಕೊಟ್ಟು ಅವರು ಎಲ್ಲರಂತೆ ಸ್ವತಂತ್ರ್ಯವಾಗಿ ಬದುಕುವ ಹಕ್ಕನ್ನು ಹೊಂದಿದ್ದರೂ ಸಹ ತುಳಿತಕ್ಕೆ ಒಳಗಾಗಿ ಬದುಕುತ್ತಿರುವ ಸಂಗತಿಗಳನ್ನು ಕಾಣಬಹುದು. ತನ್ನ ಸ್ವಾರ್ಥಕ್ಕೆ ಕೊಣ್ಣನನ್ನು ಚುನಾವಣೆಗೆಂದು ನಿಲ್ಲಿಸಿ ಹಣದಾಸೆ ತೋರಿಸಿ ತನ್ನ ವಶಮಾಡಿಕೊಳ್ಳುವುದನ್ನು ಕಾಣಬಹುದು. ಕೊಣ್ಣನನ್ನು ಕಾಣಲು ಬಂದ ಗೌಡ ಕೊಣ್ಣನ ಮಗಳನ್ನು ನೋಡಿ ಅವಳನ್ನು ಪಡೆಯಬೇಕೆಂದು ತೀರ್ಮಾನಿಸುತ್ತಾನೆ. ಇದರಿಂದ ಏನು ಅರಿಯದ ಮುಗ್ಧ ಕೊಣ್ಣನಿಗೆ "ಅಲ್ಲ ಕನೊ ಬೊಡ್ಡಿ ಮಗ್ನೆ, ಈಸತಿ ಹೊಲೇಗೂ ಒಂದು ಸೀಟು ರಿಜರ್ವ ಮಾಡುವ್ರಂತೆ, ನೋಡ್ಲಾ , ನಿನ್ನ ಖರ್ಚೆಲ್ಲಾನೂ ನಾನೇ ವಹಿಸ್ಕೋತಿನಿ ಎಂದ ಶಿವನಂಜೇಗೌಡ ಜೋಬಿನಿಂದ ಎರಡು ರೂಪಾಯಿ ತೆಗೆದು ತಕೊ ಇದ ಎಂದಾಗ ಕೊಣ್ಣನಿಗೆ ಎಲ್ಲಿಲ್ಲದ ಸಂತೋಷ ಬಂದು ಜೊಲ್ಲು ಸುರಿಸುತ್ತ ಎದ್ದು ಅದನ್ನು ತೆಗೆದುಕೊಂಡು ಕಚ್ಚೆಯಲ್ಲಿ ಮುದುರಿ ಸಿಕ್ಕಿಸಿಕೊಂಡು ಆಗ್ಲಿ ಕಣ್ರಪೋ" ಎಂದ. ಈ ಮಾತುಗಳನ್ನು ಗಮನಿಸಿದಾಗ ತನ್ನ ಕಾಮುಕತೆಯನ್ನು ತೀರಿಸಿಕೊಳ್ಳಲು ಕೆಳವರ್ಗದವರನ್ನು ಶೋಷಣೆ ಮಾಡಿದ್ದಲ್ಲದೆ, ಕೂಣ್ಣನ ಮಗಳು ಜವ್ನಿಯನ್ನು ಬಲವಂತವಾಗಿ ವಶಮಾಡಿಕೊಳ್ಳುತ್ತಾನೆ.

ಎಲ್ಲೋ ಒಂದು ಕಡೆ ಜವ್ನಿಗೆ ತನ್ನ ಅಸಹಾಯಕ ಸ್ಥಿತಿಯನ್ನು ನೆನೆದು ಸಾಯುವ ಯೋಚನೆ ಮನಸ್ಸಿನಲ್ಲಿ ಉದ್ಭವಿಸುತ್ತದೆ. ಅದು ಸಾಧ್ಯವಾಗದೆ ತನ್ನಗೆ ಒದಗಿದ ಸ್ಥಿತಿಯಿಂದ ನೊಂದು, ಗೌಡನಿಗೆ ಬಲಿಯಾಗುತ್ತಾಳೆ.

ಅಪ್ಪ ಗೌಡನಟ್ಟಿಯಲ್ಲಿ ದುಡಿದು ಬದುಕುತ್ತಿರುವುದು, ತನಗಾದ ಅನ್ಯಾಯ ಯಾವುದರ ಪರಿವೆಯು ಇಲ್ಲದೆ ಹರಕೆಯ ಕುರಿಯಂತೆ ಗೌಡನ ಸೊಪ್ಪಿಗೆ ಬಲಿಯಾದಳು. ಜವ್ನಿಯ ಜೀವನದ ಪ್ರತಿ ಕ್ಷಣವು ಜೀವನದಲ್ಲಾದ ಘಟನೆಗಳು ಅವಳಲ್ಲಿ ಗಿರಕಿ ಹೊಡೆಯುತ್ತಿದ್ದವು.

ಜವ್ನಿಯ ಜೀವನದಲ್ಲಾದ ಅನ್ಯಾಯದಿಂದ ಎಚ್ಚೆತ್ತು ವಾಸ್ತವಕ್ಕೆ ಬರುತ್ತಾಳೆ. "ಒಂದು ಹೆಣ್ಣು ನಾಯಿಯನ್ನು ಮೂರು ನಾಲ್ಕು ಗಂಡು ನಾಯಿಗಳು ಅಟ್ಟಿಸಿಕೊಂಡು ಬರುತ್ತಿವೆ. ಒಂದೊಂದು ಸಾರಿ ಹೆಣ್ಣು ನಾಯಿ ಪ್ರತಿಭಟಿಸಿದಾಗ ಎಲ್ಲಾ ನಾಯಿಗಳಲ್ಲೂ ಜಗಳವಾಗುತ್ತಿತ್ತು".

ಹೆಣ್ಣಿಗೆ ಎಷ್ಟೇ ಸ್ವತಂತ್ರ ಸಮಾನತೆ ಇದ್ದರೂ ಅವಳು ದುರ್ಬಲಳು ಎಂಬ ದೃಷ್ಟಿಯಿಂದ ನೋಡುವ ಸಮಾಜದಲ್ಲಿ ಹೆಣ್ಣು ಮೇಲ್ವರ್ಗದವರ ಶೋಷಣೆಗೆ ಬಲಿಯಾಗುತ್ತಲೇ ಇರುವುದನ್ನು ಕಾಣಲಾಗುತ್ತಿದೆ. ಹೆಣ್ಣು ಎಂದರೆ ಕೇವಲವಾಗಿ ಕಾಣುವ, ತಮ್ಮ ಆಸೆಯನ್ನು ಪೂರೈಸುವ ಭೋಗದ ವಸ್ತುವಿನಂತೆ ಕಾಣುವುದು ಮರೆಯಾಗಬೇಕು. ಇಂತಹ ಪರಿಸ್ಥಿತಿಯನ್ನು ಕಥೆಯಲ್ಲಿನ ಜವ್ನಿ ಎದುರಿಸುತ್ತಾಳೆ. ತನ್ನ ಸ್ಥಿತಿಯು ಸಹ ಹಾಗೆಯೇ ಎಂಬುದು ಮನದಲ್ಲಿ ಮಿಂಚಿ ಮರೆಯಾಗುತ್ತದೆ. ಇಂದಿಗೂ ಪ್ರತಿದಿನ ಹೆಣ್ಣು ದುಷ್ಟ ಶಕ್ತಿಗಳಿಗೆ ಬಲಿಯಾಗಿ ಬದುಕುತ್ತಿರುವ ಸನ್ನಿವೇಶಗಳನ್ನು ಸಮಾಜದಲ್ಲಿ ಕಾಣಬಹುದು. ಗೌಡನ ನಿರೀಕ್ಷೆಯಂತೆ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಕೆಡವಿದ್ದು ಗೌಡನಿಗೆ

ಸಂತಸದ ಸಂಗತಿಯಾಗಿತ್ತು. ಇಂತಹ ವ್ಯಕ್ತಿಗಳು ಸಮಾಜಕ್ಕೆ ಮಾರಕವಾಗುವ ಕೆಟ್ಟ ಹುಳುಗಳಾಗಿದ್ದಾರೆ. ಇಂತಹ ಕೆಟ್ಟ ಹುಳುಗಳನ್ನು ನಾಶಪಡಿಸಿದರೆ, ಸಮಾಜದಲ್ಲಿ ಹೆಣ್ಣಿಗೆ ಉತ್ತಮವಾದ ಬದುಕು ಸಿಗುತ್ತದೆ.

ಮೇಲ್ವರ್ಗದವರು ತಮ್ಮ ತಮ್ಮಲ್ಲಿರುವ ಸೇಡು, ಒಳಿತು, ಕೆಡುಕು ದ್ವೇಷ, ಅಸೂಯೆಗಳಿಗೆ ಹೆಣ್ಣನ್ನು ಬಲಿಕೊಡುವುದನ್ನು ಕಾಣಬಹುದು. ಶಿವನಂಜೇಗೌಡನ ಮೇಲಿನ ಕೋಪಕ್ಕೆ ಊರಿನ ದಾಸಣ್ಣ ಮತ್ತು ಕರಿಯಪ್ಪ ಜವ್ನಿಯನ್ನು ಬಲವಂತವಾಗಿ ತಮ್ಮ ವಶಕ್ಕೆ ಬಳಸಿಕೊಳ್ಳುತ್ತಾರೆ. ಇದರಿಂದ ಕೆಳವರ್ಗದವರ ಶೋಷಣೆ ಎಷ್ಟರ ಮಟ್ಟಿಗೆ ಗ್ರಾಮೀಣ ಪ್ರದೇಶದಲ್ಲಿ ಬೇರುಬಿಟ್ಟಿದೆ ಎಂಬುದು ಗೋಚರವಾಗುತ್ತದೆ. ಪ್ರತಿ ಹಂತ ಹಂತದಲ್ಲೂ ಶೋಷಣೆಗೆ ಗುರಿಯಾಗಿ ಬದುಕು ನಡೆಸುತ್ತಿರುವ ಹೆಣ್ಣು ಎಲ್ಲವನ್ನು ಸಹಿಸಿಕೊಂಡು ಕೊನೆಗೆ ಆತ್ಮಹತ್ಯೆಗೆ ಶರಣಾಗುತ್ತಿದ್ದಾಳೆ. ದೇವರು, ಧರ್ಮ, ಜಾತಿ, ಮೇಲು-ಕೀಳು ಎಂಬುದನ್ನು ನಂಬಿ ಪ್ರತಿದಿನ ದೇವರಿಗೆ ಪೂಜೆ ಸಲ್ಲಿಸುವ ಪೂಜಾರಿ ಶಿವರುದ್ರಪ್ಪನಂತಹ ಕೆಟ್ಟ ಮನುಷ್ಯರು ತಮ್ಮ ಸ್ವಾರ್ಥಕ್ಕೆ ಹೆಣ್ಣನ್ನ ಬಳಸಿಕೊಳ್ಳುತ್ತಾರೆ.

048872

ಜೀವನದಲ್ಲಿ ಹಂತ ಹಂತವಾಗಿ ಹೆಣ್ಣು ಕತ್ತಲೆಯಲ್ಲಿ ಮುಳುಗಿ ಹೋಗುತ್ತಿದ್ದಾಳೆ. ದುಷ್ಟ ಕಾಮುಕರಿಗೆ ಬಲಿಯಾಗಿ ಬದುಕುತ್ತಿರುವ ಜವ್ನಿಯಂತಹ ಹೆಣ್ಣುಗಳು ಗ್ರಾಮೀಣ ಸಮಾಜದಲ್ಲಿ ಶೋಚನೀಯ ಪರಿಸ್ಥಿತಿಯಲ್ಲಿ ಬದುಕುತ್ತಿರುವುದನ್ನು ಕಾಣಬಹುದು. ಮೋಸದ ದಾರಿಯಿಂದ ಕೊಣ್ಣ ಮತ್ತು ಅವನ ಮಗಳು ಜವ್ನಿಯನ್ನು ಊರಿನಿಂದ ಬಹಿಷ್ಕಾರ ಹಾಕುವುದನ್ನು ನೋಡಿದರೆ ತಮ್ಮ ತಮ್ಮ ತಪ್ಪುಗಳನ್ನು ಮುಚ್ಚಿಟ್ಟು ಮೋಸ ವಂಚನೆಯಿಂದ ಕೆಳವರ್ಗದವರನ್ನು ಶೋಷಣೆ ಮಾಡುವ ಇಂತಹ ಗೋಮುಖವ್ಯಾಘ್ರರು ಪ್ರತಿ ಸಮಾಜದಲ್ಲೂ ಇರುವುದನ್ನು ಕಾಣಬಹುದು. ಆಕ್ರೋಶದಿಂದ, ನೋವಿನಿಂದ "ಇನ್ನು ಮುಂದೆ ಹೊಲಗೇರಿಯ ಯಾವ ಹೆಣ್ಣೂ ತನ್ನ ರೀತಿ ಆಗಬಾರದೆಂದು ಕೊಂಡಳು". ತನ್ನ ಗುಡಿಸಲಿಗೆ ಬೆಂಕಿ ತೋರಿದಳು. ಇದರಿಂದ ಇಡೀ ಕೇರಿಯೆ ನಿರ್ನಾಮವಾಯಿತು.

ಸಮಾಜದಲ್ಲಿ ಹೆಣ್ಣನ್ನು ಗೌರವಿಸುವ, ಪೂಜಿಸುವ ಕಾಲ ಕಣ್ಮರೆಯಾಗುತ್ತಿದೆ. ಹಂತ ಹಂತವಾಗಿ ಹೆಣ್ಣನ್ನು ತುಳಿದು ಬದುಕುವ ಜನರೇ ಹೆಚ್ಚಾಗಿರುವುದನ್ನು ಕಾಣುತ್ತಲೇ ಬಂದಿದ್ದೇವೆ. ಅಮಾಯಕಳಾದ ಕೆಂಪಜ್ಜಿಯ ಕುಟುಂಬದಲ್ಲಿ ಆಟವಾಡಿದ ವಂಚಕರು ದುಷ್ಟತನವನ್ನು ಲೇಖಕರು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಅಸಹಾಯಕ ಸ್ಥಿತಿಯಲ್ಲಿ ಬದುಕುತ್ತಿರುವ ಕೆಂಪಜ್ಜಿಯ ಕುಟುಂಬವನ್ನೇ ಭಕ ಪಕ್ಷಿಗಳ ಹಾಗೆ ಕಿತ್ತು ತಿನ್ನುವ ಸನ್ನಿವೇಶವನ್ನು **'ರಣಹದ್ದುಗಳು'** ಕಥೆಯಲ್ಲಿ ಅನಾವರಣಗೊಳಿಸಿದ್ದಾರೆ.

ಕೆಂಪಜ್ಜಿ ಭಾರವಾದ ನಿಟ್ಟುಸಿರು ಬಿಟ್ಟಳು. ದೇವರು ಅವಳಿಗೆ ಏಕೆ ಅನ್ಯಾಯ ಮಾಡಿದನೆಂದು ತಿಳಿಯಲಿಲ್ಲ. ಗಂಡ ಸತ್ತು ಐದು ವರ್ಷವಾಗಿತ್ತು. ಅದಾದ ಎರಡು ವರ್ಷಕ್ಕೆ ಹಿರಿಯ ಮಗನ ಸಾವು, ಹೋದ ವರ್ಷ ಎರಡನೇಯವನು ಸತ್ತ. ಒಬ್ಬರಾದರೂ ಸಾವು ಬಂದು ಸಾಯಲಿಲ್ಲ. ಜಾತ್ರೆಗೆಂದು ಹೋದ ಗಂಡ ಹೆಣವಾಗಿ ಬಂದಿದ್ದ. ಪುಟ್ಟರಾಮಣ್ಣ ಹಣದಾಸೆಯಿಂದ ಅವನನ್ನು ಕೊಂದು ಕೆಂಪಜ್ಜಿಯ ಮುಂದೆ ಸುಳ್ಳು ಹೇಳಿದ್ದ. ಬಡತನದಿಂದ ಕೊನೆಯ ಮಗನನ್ನು ಜೀತಕ್ಕಿರಿಸಿದಳು. ದಿನದಿಂದ ದಿನಕ್ಕೆ ಕೆಂಪಜ್ಜಿಯ ಜೀವನ ಕುಗ್ಗ ತೊಡಗಿತು.

ಬಡತನದಲ್ಲಿ ಜೀವನಸಾಗಿಸುತ್ತಿದ್ದ ಅಸಹಾಯಕ ಹೆಣ್ಣು ಬದುಕಿನಲ್ಲಿ ಯಾವ ರೀತಿಯಲ್ಲಿ ಮೋಸ ವಂಚನೆಗಳಿಗೆ ಒಳಗಾಗುತ್ತಾಳೆ ಎಂಬುದನ್ನು ಕಾಣಬಹುದು. ಹಣದಾಸೆಯಿಂದ ಕೆಂಪಜ್ಜಿಯ ಗಂಡನನ್ನು ಕೊಲೆ ಮಾಡಿದ ಪುಟ್ಟರಾಮಣ್ಣ ನಂತಹವರು ಇಂದಿಗೂ ಹೆಣ್ಣನ್ನು ಶೋಷಣೆ ಮಾಡುತ್ತಲೇ ಬಂದಿದ್ದಾರೆ. ಗ್ರಾಮೀಣದಲ್ಲಿರುವ ಈ ರೀತಿಯ ಘಟನೆಗಳಿಂದ ಸಮಾಜದಲ್ಲಿ ಕೆಟ್ಟ ಜನರು ಹುಟ್ಟುತ್ತಲೇ

ಇದ್ದಾರೆ. ಸಾಕಿ ಬೆಳೆಸಿದ ಹಿರಿಯ ಮಗ ಹೆಂಡತಿಯ ಮನೆ ಸೇರಿ ಕೊನೆಗೆ ಪರಲೋಕವಾಸಿಯಾಗಿದ್ದು ಕೆಂಪಜ್ಜಿಗೆ ಆಕಾಶವೇ ಕಳಚಿ ಬಿದ್ದಂತಾಯಿತು. ಗಂಡ ಕೆಂಪೀರಪ್ಪ ಹೆಂಡತಿಗೆಂದು ಬಿಟ್ಟು ಹೋಗಿದ್ದುದು ಒಂದು ಗುಡಿಸಲು, ಅರ್ಧ ಎಕರೆ ಹೊಳ. ಅದರಲ್ಲಿ ಬೆಳೆ ಆಗುತ್ತಿರಲಿಲ್ಲ. ಇದೆಲ್ಲದರ ಜೊತೆ ಮಳೆಯಾಗದೆ ಇದ್ದದ್ದು ನಿರಾಸೆಯಾಯಿತು. ಹೊಟ್ಟೆ ಪಾಡಿಗಾಗಿ ಮಗನನ್ನು ಜೀತಕ್ಕಿರಿಸಿದಳು. ಗ್ರಾಮೀಣ ಸಮಾಜದಲ್ಲಿ ಇಂದಿಗೂ ಕಿತ್ತು ತಿನ್ನುವ ಬಡತನದಿಂದ ಇನ್ನೊಬ್ಬರ ಮನೆಯಲ್ಲಿ ಜೀತಕ್ಕಿರಿಸುವ ಪದ್ಧತಿಯನ್ನ ಕಾಣುತ್ತಲೇ ಇದ್ದೇವೆ. ಈ ಪದ್ದತಿಯನ್ನು ತಡೆಗಟ್ಟಲು ಸರ್ಕಾರ ಹಲವಾರು ಯೋಜನೆಗಳನ್ನ ಜಾರಿಗೊಳಿಸಿದರು, ಅದು ಅವರ ಕೈ ಸೇರದೇ ಅವುಗಳಿಂದ ವಂಚಿತರಾಗಿ ಹೊಟ್ಟೆಪಾಡಿಗಾಗಿ ಈ ರೀತಿಯ ಜೀವನವನ್ನ ನಡೆಸುತ್ತಲೇ ಬದುಕುತ್ತಿದ್ದಾರೆ.

ಕೆಂಪಜ್ಜಿಯ ಜೀವನದಲ್ಲಿ ಪ್ರತಿಹಂತದಲ್ಲೂ ತುಳಿತಕ್ಕೆ ಒಳಗಾದ ಭಾವನೆ ಉಂಟಾಗುವುದರಿಂದ ಜೀವನವೇ ಬೇಸರವಾಗತೊಡಗಿತು. ಬದುಕುಬೇಕೆಂಬ ಮಹಾದಾಸೆಯಿಂದ ಇದ್ದ ಕೆಂಪಜ್ಜಿಗೆ ಮತ್ತೊಂದು, ಆಘಾತ ಎದುರಾಗುತ್ತದೆ. ನಾಲಾ ಸೀಮೆಯಲ್ಲಿದ್ದ ಮಗ ನಿಂಗ ಮಾದೇಗೌಡನ ಮನೆಯಲ್ಲಿ ಹಿರಿಯ ಮಗನಂತಿದ್ದ ಹಾಗೆಯೇ ಸ್ವತಂತ್ರನಾಗಿದ್ದವನು. ಈಗ ಹೆಣವಾಗಿದ್ದಾನೆ. ಮಾದೇಗೌಡನ ದಾಯಾದಿ ನಾಗಪ್ಪನ ಹೆಂಡತಿಯ ಕಾಮುಕದಾಹಕ್ಕೆ ಒಳಗಾಗಿ ಕೊನೆಗೆ ನಾಗಪ್ಪ ಮತ್ತು ಮಾದೇಗೌಡನ ಸಂಚಿನಿಂದ ಕೊಲೆಯಾಗುತ್ತಾನೆ.

ಸಮಾಜದಲ್ಲಿ ಒಂದು ಕಡೆ ಹೆಣ್ಣಿಗೆ ಅನ್ಯಾಯ, ಶೋಷಣೆಯಾದರೆ, ಅದೇ ಹೆಣ್ಣಿನಿಂದ ನಿಂಗನಂಥವರು ಸಾವಿಗೆ ಬಲಿಯಾಗುವುದನ್ನು ಕಾಣಬಹುದು. ನಾಗಪ್ಪನ ಹೆಂಡತಿ ಗಂಡನಿಂದ ಸಿಗದಿರುವ ಸುಖವನ್ನು ನಿಂಗನಲ್ಲಿ ಬಯಸಿದ್ದರಿಂದ ಅವನು ಸಾವಿಗೆ ಕೊರಳೊಡ್ಡಬೇಕಾಯಿತು.

ಕೆಂಪಜ್ಜಿಗೆ ಜೀವನವೇ ಬರಡಾಯಿತು. ತನ್ನ ಜೀವನದಲ್ಲಿ ಬರಿನೋವು, ಹತಾಶೆಗಳೇ ತುಂಬಿ ಹೋದವು. ಬದುಕು ಸಾಕಾಗಿತು. ಸತ್ತ ಮಗನ ಹೆಣವನ್ನು ನೋಡಿ ನಾನು ಸಾಯಬಾರದೆ ಎನ್ನಿಸಿತು.

ಗ್ರಾಮೀಣ ಪ್ರದೇಶದಲ್ಲಿರುವ ಕೆಂಪಜ್ಜಿಯಂತಹ ಒಬ್ಬ ಮುಗ್ಧ ಅಸಹಾಯಕ ಹೆಣ್ಣಿನ ಸ್ಥಿತಿ ಚಿಂತಾಜನಕವಾಗಿದೆ. ಬದುಕಿದಷ್ಟು ದಿನ ಸುಖವನ್ನು ಕಾಣಲಿಲ್ಲ. ಹೆಣ್ಣಿಗೆ ಕಣ್ಣೀರು ದೇವರು ಕೊಟ್ಟ ಶಾಪವೆಂಬಂತೆ ಕೆಂಪಜ್ಜಿಯ ಜೀವನ ಕಣ್ಣೀರಿನಲ್ಲಿ ತೇಲಿಹೋಯಿತು. ಮಗ ಸತ್ತು ಹೆಣವಾಗಿದ್ದರೆ ಅವಳು ಬದುಕಿಯೇ ಹೆಣವಾಗಿದ್ದಳು. ಎಲ್ಲರೂ ಸತ್ತ ಹೆಣವನ್ನು ಕಿತ್ತು ತಿನ್ನುವ ರಣಹದ್ದುಗಳಾಗಿದ್ದರು. ಮಾದೇಗೌಡ ಮತ್ತು ನಾಗಪ್ಪನ ಕುತಂತ್ರದಿಂದ ಹೆಣವಾದ ನಿಂಗನ ಸಾವಿಗೆ ಹಣಕೊಡಬೇಕೆಂದು, ಪುಟ್ಟರಾಮಣ್ಣ ಇನ್ನಿತರರು ಕೇಳಿದಾಗ ಮೋಸದಿಂದ ಹೆಣಕ್ಕೆ ಬೆಂಕಿ ಹಾಕಿ ಹೆಣ್ಣಿನ ಜೀವನದಲ್ಲಿ ಆಟವಾಡಿದರು. ಇಷ್ಟೆಲ್ಲಾ ಆದರೂ ಕೊನೆಗೂ ಪುಟ್ಟರಾಮಣ್ಣನ ಒಳಸಂಚು ಕೆಂಪಜ್ಜಿಯ ಕುಟುಂಬವನ್ನೇ ನಾಶಪಡಿಸಿತ್ತು. ಮಗನ ಸಾವಿನಲ್ಲಿ ಬೆಂದು ಹೋಗಿದ್ದ ಕೆಂಪಜ್ಜಿಯ ಅಸಹಾಯಕತೆಯನ್ನು ಬಳಸಿಕೊಂಡಿದ್ದು, ಎಲ್ಲವೂ ಅವಳನ್ನು ಜರ್ಜರಿತಳಾನ್ನಾಗಿ ಮಾಡಿದವು.

ಸಮಾಜದಲ್ಲಿ ಹೆಣ್ಣಿಗೆ ಉತ್ತಮವಾದ ಶಿಕ್ಷಣ ಕೊಟ್ಟು, ಇಂತಹ ದುಷ್ಟ ಶಕ್ತಿಗಳಿಂದ, ಮುಕ್ತಿ ಪಡೆಯುವ ಧೈರ್ಯ, ಸಹನೆ ಅವಳಲ್ಲಿ ಹುಟ್ಟಬೇಕು. ಅಂದು ಹೆಣ್ಣಿನ ಬದುಕು ಸಾರ್ಥಕವಾಗುತ್ತದೆ. ಅಸಹಾಯಕ ಮುಗ್ಧೆ ಹೆಣ್ಣಿನ ಜೀವನ ಇಂದಿಗೂ ಸಹ ರಣಹದ್ದುಗಳಿಗೆ ಬಲಿಯಗುತ್ತಲೇ ಇರುವುದನ್ನ

ಕಾಣಬಹುದು. ಅದರಿಂದ ಹೊರ ಬಂದು ಬದುಕಿನಲ್ಲಿ ಯಶಸ್ಸು ಕಂಡರೆ ಉತ್ತಮ ಆರೋಗ್ಯಕರ ಸಮಾಜವನ್ನು ಕಾಣಬಹುದು ಎಂಬುದು ಲೇಖಕರ ಆಶಯವಾಗಿದೆ.

ಸಂಪ್ರದಾಯಗಳೊಂದಿಗೆ ಬದುಕು ಸಾಗಿಸುವ ಸಮಾಜದಲ್ಲಿ ಹೆಣ್ಣು ಸಹಜವಾಗಿ ಸಾವು ಬಂದು ಸತ್ತರೂ ಇಲ್ಲಸಲ್ಲದ ಅಪವಾದಗಳನ್ನು ಹೊತ್ತುಕೊಳ್ಳಬೇಕಾಗುತ್ತದೆ ಎಂಬುದಕ್ಕೆ **'ಒಂದು ಹೆಣ್ಣಿನ ಕಥೆ'**ಯಲ್ಲಿನ ಗೌರಿ ಉದಾಹರಣೆಯಾಗುತ್ತಾಳೆ. ಬೀದಿಗಳಲ್ಲಿ ವಿದ್ಯುತ್ ಕಂಬಗಳಿದ್ದರೂ ದೀಪಗಳಿಲ್ಲದ್ದರಿಂದ ಉದ್ದಕ್ಕೆ ನಿಂತ ಕಲ್ಲಿಗೆ ಎಡವುತ್ತಾ ಊರನ್ನು ನೋಡಿದರೆ ಮನಸ್ಸಿಗೇಕೋ ಮರುಕ ಹುಟ್ಟುತ್ತದೆ. ಮುಂದಿನ ಮನೆಯ ಗೌರಿಯ ಸಾವು ಎಲ್ಲರನ್ನು ಚಿಂತೆಗೀಡು ಮಾಡಿತು. "ಗೌರಿ ಎಂತಹ ಹೆಣ್ಣು ನಿಜವಾಗಿಯೂ ಊರಿಗೆ ಒಂದೇ ಹೆಣ್ಣೆಂದರೆ ಅವಳೊಬ್ಬಳೇ. ಅವಳಿಗೇನಾಗಿತ್ತೋ ಗೊತ್ತಿಲ್ಲ. ಬಹುಶಃ ಖಾಯಿಲೆ ಇರಬಹುದು. ಆ ದೇವರಿಗೆ ಕರುಣೆ ಇಲ್ಲವೇನೋ, ಜಗತ್ತಿನಲ್ಲಿ ಒಳ್ಳೆಯವರನ್ನೆಲ್ಲಾ ಕರೆದುಕೊಂಡು ಕೆಟ್ಟವರನ್ನು ಭೂಮಿಯ ಮೇಲಿರಿಸಿ ಜಗತ್ತಿನಲ್ಲೆಲ್ಲ ಪ್ರಳಯ ತರಬೇಕೆಂದಿದ್ದಾನೇನೋ" ಎಂಬ ಮಾತುಗಳು ವಾಸ್ತವತೆಗೆ ಹತ್ತಿರವಾಗಿ ಕಾಣುತ್ತವೆ. ಅಪ್ಪ ಅಮ್ಮನ ನಡುವಿನ ಜಗಳದಲ್ಲಿ ಮೂಕ ಪ್ರೇಕ್ಷಕಳಂತೆ ನಿಲ್ಲುತ್ತಿದ್ದ ಗೌರಿಯನ್ನು ನೆನೆದರೆ ಮರುಕ ಹುಟ್ಟುತ್ತದೆ.

ಸಂಪ್ರದಾಯಬದ್ಧ ಕುಟುಂಬದಲ್ಲಿ ಇಂತಹ ಹೆಣ್ಣು ಸಹಜವಾಗಿ ಸಾವು ಬಂದು ಸತ್ತಾಗ ಎದುರಾಗುವ ನಿಂದನೆಗೆ ಹೆಣ್ಣು ಗುರಿಯಾಗಿದ್ದಾಳೆ. ಗಂಡಿನಂತೆ ಮನೆಯ ಜವಾಬ್ದಾರಿಯನ್ನು ನಿಭಾಯಿಸುತ್ತಿದ್ದ ಮುಗ್ಧ ಹೆಣ್ಣು ಗೌರಿಗೆ ಮದುವೆ ಗೊತ್ತಾದ ಮೇಲೆ ಸತ್ತದ್ದರಿಂದ ಊರಿನ ಹಿರಿಯರು ಒಂದೊಂದು ರೀತಿ ಮಾತನಾಡುವುದನ್ನು ನೋಡಿದರೆ ಬೇಸರವಾಗುತ್ತದೆ.

ವಿದ್ಯಾವಂತನಾದ ಸುಧಾಕರ ಹಳ್ಳಿಯಲ್ಲಿನ ಕೆಟ್ಟ ಪದ್ಧತಿಗಳನ್ನು ವಿರೋಧಿಸುತ್ತಾ ತಾನು ಕಂಡ ಹುಡುಗಿ ಗೌರಿಗೆ ಇಂತಹ ಪರಿಸ್ಥಿತಿಯೇ ಎಂದು ಮರುಗುತ್ತಾನೆ. " ಸತ್ತ ಹೆಣಗಳನ್ನು ಮುಚ್ಚಿಟ್ಟು ಹಳೆಯ ಪದ್ಧತಿಗಳನ್ನು ಎತ್ತಿ ಹಿಡಿದು ದೊಡ್ಡತನವನ್ನು ತೋರಿಸಿಕೊಳ್ಳುವ ಊರಿನ ಹಿರಿಯರ ಬಗ್ಗೆ ಯೋಚಿಸಿದಾಗ ಬೇಸರವಾಗುತ್ತದೆ. ಯಾವ ಬಡ್ಡೀ ಮಗ ಇವೆಲ್ಲವನ್ನು ರೂಪಿಸಿದ ಎಂದೆನಿಸಿ ಮನಸ್ಸಿನಲ್ಲೇ ಶಪಿಸುತ್ತೇನೆ. ಇಂತಹ ಕ್ರೂರ ಪದ್ಧತಿಗಳನ್ನು ತೊಡೆದು ಹಾಕುವ ಮಾರ್ಗ ತಿಳಿಯದಾದಾಗ ಮೈ ಪರಚಿಕೊಳ್ಳುವಂತಾಗುತ್ತದೆ." ಈ ಮಾತುಗಳನ್ನು ಗಮನಿಸಿದಾಗ ಹಳ್ಳಿಯಲ್ಲಿರುವ ಕೆಟ್ಟ ಪದ್ದತಿಗಳು, ಆಚರಣೆಗಳು, ಎಷ್ಟರಮಟ್ಟಿಗೆ ಪ್ರಭಾವ ಬೀರಿವೆ ಎಂಬುದನ್ನು ತಿಳಿಯಬಹುದು. ಹೆಣ್ಣು ಸಹಜವಾಗಿ ಸತ್ತಾಗ ಎದುರಾಗುವ ನಿಂದನೆ, ಅಪವಾದಗಳನ್ನು ನೋಡಿದರೆ ಹೆಣ್ಣು ಎಲ್ಲರಿಂದ ಪ್ರತಿ ಹಂತದಲ್ಲೂ ಶೋಷಣೆಗೆ ಒಳಗಾಗಿ ಬದುಕುತ್ತಿರುವುದನ್ನು ಗುರುತಿಸಬಹುದು. ಒಬ್ಬ ಶಿಕ್ಷಣ ಕಲಿತ ವ್ಯಕ್ತಿಯಿಂದ ಈ ಪದ್ಧತಿಗಳನ್ನು, ಆಚರಣೆಗಳನ್ನು ವಿರೋಧಿಸಲಾಗದಷ್ಟು ಆಳವಾಗಿ ಬೇರನ್ನು ಬಿಟ್ಟಿವೆ ಎಂಬುದು ವ್ಯಕ್ತವಾಗುತ್ತದೆ.

ಸಮಾಜದಲ್ಲಿರುವ ಕೆಟ್ಟ ಆಲೋಚನೆಗಳಿಂದ ಹೆಣ್ಣಿನ ಮೇಲೆ ಮಾಡುವ ಅಪನಿಂದನೆಯಿಂದ ಸಮಾಜದಲ್ಲಿ ಹೆಣ್ಣನ್ನು ಕೆಳಮಟ್ಟದಲ್ಲಿ ಕಾಣಲು ಕಾರಣವೆನ್ನಬಹುದು.

"ಅದೇನೋ ಅವಳು ಔಷಧಿ ನುಂಗ್ಲಿದಂತೆ ಕಾಣಕ್ಕಾ"!

'ಯಾರ್ಗೆಳ್ತಾ ಇದ್ದೀ"?

'ಯಾರನೂ ಕಾಣದ ಮಳ್ಳಿ ನೀನು. ಅದೇನೋ ಹೇಳ್ತಾರಲ್ಲ, ಮಳ್ಳಿ ಮಳ್ಳಿ ಮಂಚಕ್ಕೆಷ್ಟು ಕಾಲು ಅಂದರೆ ಮೂರು ಮತ್ತೊಂದು ಅಂತ ಅನ್ತಿದ್ದಳಂತಲ್ಲ ಅವಳ್ಯಾರೋ, ಹಂಗೆ'

'ಯಾರ ಇಷ್ಯಾ ಹೇಳ್ತಾ ಇದ್ದೀಲೆ'?

'ಅದೇ ಆ ಗೌರಿದು' !

'ಅವಳ್ಗೇನು ಬಂದಿತ್ತು ದೊಡ್ಡ ರೋಗ ಔಷಧಿ ನುಂಗುವಂತದ್ದು? ಬುಡು ಬುಡು ಜನ ನಂಬು ಮಾತೇ ಇದು?'

'ನಂಬುದ್ರೆ ನಂಬು ಬುಟ್ರೆ ಬುಡು, ನಂಗಂತೂ ಯಾರೋ ಹೇಳಿದ್ರು, ಮೊದ್ಲೇನೋ ಸುಳ್ಳು ಅಂತ ಇದ್ದೆ. ಆಮೇಲೆ ಸುಳ್ಳು ಅಲ್ಲ ಗಿಳ್ಳು ಅಂತ ಗೊತ್ತಾಯ್ತು'.

ಈ ರೀತಿಯ ಮಾತುಗಳು ಹೆಣ್ಣಿನ ಜೀವನದ ಮೇಲೆ ಬೀರುವ ಪರಿಣಾಮವನ್ನು ಸಮಾಜದಲ್ಲಿ ಕಾಣಬಹುದು. ಹೆಣ್ಣಿನಿಂದ ಹೆಣ್ಣಿಗೆ ಆಗುವ ಶೋಷಣೆಯನ್ನು ಪ್ರಸ್ತುತ ಗ್ರಾಮೀಣ ಸಮಾಜದಲ್ಲಿ ಕಾಣಲಾಗುತ್ತಿದೆ. "ಆದರೆ ಇಲ್ಲಿ ಸತ್ತವಳು ಹೆಣ್ಣು. ಸಾಯಿಸಿದವಳೂ ಹೆಣ್ಣೇ. ಅವಳ ಮೇಲೆ ಅಪರಾಧದ ಹೊರೆ ಹೊರಿಸಿದವಳೂ ಹೆಣ್ಣೇ ಅದಕ್ಕೆ ಹಿಂದಿನವರು, ಹೆಣ್ಣನ್ನು ಅಂಕೆಯಲ್ಲಿಡಲು ಶ್ರಮವಹಿಸಿ ಕೆಳಗೆ ತುಳಿದಿದ್ದರೂ, ಇಲ್ಲದಿದ್ದರೆ ಇಷ್ಟರಲ್ಲಾಗಲೇ ಕಡಿವಾಣವಿಲ್ಲದ ಕುದುರೆಯಂತೆ ಭೂಮಿ ಯುದ್ಧ ಕ್ಷೇತ್ರಾವಾಗುತ್ತಿತ್ತೇನೋ, ಎಂತಹ ಹುಡುಗಿಗೆ ಎಂತಹ ಪಾಪದ ಹೊರೆಗಳಿವು ! ಇದು ನಿಜವೆ ? ಸುಳ್ಳೆ?" ಎಂಬ ಮಾತುಗಳು ಸತ್ತವರ ಮೇಲೆ ಸಮಾಜ ಗೂಬೆ ಕೂರಿಸುತ್ತದೆ ಎಂಬುದಕ್ಕೆ ಹಿಡಿದ ಕನ್ನಡಿಯಂತಿದೆ. ಈ ರೀತಿಯ ನಂಬಿಕೆಗಳು ಮನೆ ಮಾಡಿರುವುದರಿಂದಲೇ ಹಿರಿಯರು ಹೆಣ್ಣನ್ನು ನಿಕೃಷ್ಟವಾಗಿ ಕಂಡು ತಮ್ಮ ಅಡಿಯಾಳಾಗಿ ಇಟ್ಟಿದ್ದರು. ಸಮಾಜ ಬದಲಾವಣೆಗೊಂಡರೂ ಈ ನಿಂದನೆಗಳಿಂದ ಹೆಣ್ಣು ಪರಿತಪಿಸುವ ಸ್ಥಿತಿಯನ್ನು ಕಾಣಬಹುದು.

ಗೌರಿಯಂತಹ ಹೆಣ್ಣುಗಳು ಈ ರೀತಿಯ ಅಪವಾದಗಳಿಗೆ ಬಲಿಯಾಗುವುದಕ್ಕೆ ಮುಖ್ಯವಾಗಿ ಅತಿಯಾದ ಮೂಢನಂಬಿಕೆಗಳು, ಆಚರಣೆಗಳು, ಕಾರಣವಾಗುತ್ತವೆ. ಗೌರಿ ಗಾಳಿಯಾಗಿ ಜೊತೆಗಾತಿಯಾದ ನಿಂಗಿಯ ಮೇಲೆ ಬರುವುದು, ಹೆಂಗಸರ ಅಪವಾದಗಳು, ಅಕ್ರಮ ಸಂಬಂಧದ ಮಾತುಗಳಿಂದ ಗೌರಿ ಸೂಳೆಯಾಗಿ ಗಾಳಿಯಾಗಿದ್ದಳು. ಇಂತಹ ನಿಂದನೆಗೆ ಹೆಣ್ಣು ಗುರಿಯಾಗುತ್ತಲೇ ಬಂದಿದ್ದಾಳೆ. ಗ್ರಾಮೀಣರಲ್ಲಿ ಮುಗ್ಧ ಅಸಹಾಯಕ ಹೆಣ್ಣುಗಳು ಸತ್ತರೆ ಗಾಳಿಸುದ್ದಿ ಹಬ್ಬಿಸಿ ತಮಾಷೆ ನೋಡುತ್ತಾರೆ. ಅವರ ಮನೆಯವರನ್ನು ನಿಂದಿಸಿ, ಅಪಮಾನಕ್ಕೆ ಗುರಿಯಾಗುವಂತೆ ಮಾಡಿ ನಗುತ್ತಾರೆ. ಲೇಖಕರು ಗ್ರಾಮೀಣ ಹೆಣ್ಣಿನ ಸ್ಥಿತಿಯನ್ನು ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಇಂತಹ ನಂಬಿಕೆ, ಅಪನಿಂದನೆಗಳು ತೊಲಗಬೇಕು ಆಗ ಹೆಣ್ಣಿನ ಬದುಕು ಹಸನಾಗುತ್ತದೆ.

ಸಮಾಜದಲ್ಲಿ ಬಡತನದಿಂದ ಬೆಂದು ಜೀವನ ನಡೆಸುತ್ತಿರುವ ಜನರನ್ನು ಇಂದಿಗೂ ನೋಡಬಹುದು. ಮರಕಾಳಕ್ಕ ತಮ್ಮ ಬಡತನದಿಂದಾಗಿ ಮಗಳಿಗೆ ತಕ್ಕ ಗಂಡು ಹುಡುಕಿ ಮದುವೆ ಮಾಡಲಾಗದೆ ಇದ್ದಾಗ ಆಕೆ ಇನ್ನೊಬ್ಬರಿಂದ ಬಲಿಯಾಗುವುದನ್ನು **'ಒಂದು ಬಸುರಿನ ವೃತ್ತಾಂತ'** ಕಥೆಯಲ್ಲಿ ಕಾಣಬಹುದು. ಸಮಾಜ ಬದಲಾವಣೆಯ ಹಾದಿಯಲ್ಲಿದ್ದರೂ ವರದಕ್ಷಿಣೆಯನ್ನು ತೆರಲಾಗದೆ ಬಡತನದ ಬೇಗೆಯನ್ನು ತಾಳಲಾರದೆ ವಯಸ್ಸು ತುಂಬಿದ ಮಗಳನ್ನು ತಾಯಿಯೇ ಕೆಟ್ಟ ಕೆಲಸಕ್ಕೆ ಪ್ರಚೋದನೆ ಮಾಡುವುದನ್ನು ಕಾಣಲಾಗುತ್ತದೆ. ಮರಕಾಳಕ್ಕ ತನ್ನ ಮಗಳು ಚಿಕ್ಕಿಂಗಿಗೆ ಕೊಟ್ಟ ಸಲಿಗೆಯಿಂದ ಇನ್ನೊಬ್ಬನ ಸಹವಾಸದಿಂದ ಕೆಟ್ಟು ಬಸುರಿಯಾಗಿದ್ದು, ತಾನು ಮಾಡಿದ ಪಾಪಕ್ಕೆ ತನ್ನ ಮಗಳೇ ಬಲಿಯಾಗುವುದನ್ನು ಕಥೆಯಲ್ಲಿ ಕಾಣಲಾಗುತ್ತದೆ.

ಸಮಾಜದಲ್ಲಿ ಕೆಟ್ಟ ಮಕ್ಕಳಿರುತ್ತಾರೆ, ಆದರೆ ಕೆಟ್ಟ ತಾಯಿಯರು ಇಲ್ಲವೆಂಬುದು ಒಂದು ಕಾಲದ ಮಾತಾಗಿತ್ತು. ಆದರೆ ಅದು ಬದಲಾಗಿದೆ ಕಥೆಯಲ್ಲಿನ ಮರಕಾಳಕ್ಕ ಇದಕ್ಕೆ ಉದಾಹರಣೆಯಾಗುತ್ತಾಳೆ. ತಮ್ಮ ಭಾರವನ್ನು ಕಳೆದುಕೊಳ್ಳಲು ಮಕ್ಕಳನ್ನು ಈ ರೀತಿಯ ಕೆಲಸಕ್ಕೆ ಪ್ರೇರೇಪಿಸುವುದು ಸಮಾಜಕ್ಕೆ ಅವಮಾನದ ಸಂಗತಿ. ಗ್ರಾಮೀಣ ಪ್ರದೇಶದಲ್ಲಿ ಇಂತಹ ಘಟನೆಗಳನ್ನು ಪ್ರಸ್ತುತದಲ್ಲೂ ನೋಡಲಾಗುತ್ತದೆ.ಕಾರಣ ತಮಗಿರುವ ಬಡತನದ ಸಮಸ್ಯೆಗಳು ಅವರನ್ನು ಈ ರೀತಿಯ ಕೆಲಸಕ್ಕೆ ಪ್ರೇರೆಪಿಸುತ್ತಿವೆ.

ಅಸಹಾಯಕ ಹೆಣ್ಣು ಚಿಕ್ಕಿಂಗಿ ಗರ್ಭವತಿಯಾಗಿ, ಮಗುವನ್ನೆತ್ತಿ ಅದರಿಂದ ಜರ್ಜರಿತಳಾಗಿ ಹುಚ್ಚಿಯಂತೆ ಆಗುತ್ತಾಳೆ. ಸಮಾಜದಲ್ಲಿ ಗಂಡನಿಲ್ಲದೆ ಮಗುವಾದರೆ, ಅವಳನ್ನು ನೋಡುವ ದೃಷ್ಟಿಯೇ ಬೇರೆಯಾಗಿರುತ್ತದೆ. ಇದಕ್ಕೆ ಕಥೆಯಲ್ಲಿನ ಚಿಕ್ಕಿಂಗಿ ಉದಾಹರಣೆಯಾಗುತ್ತಾಳೆ.

ಎಲ್ಲವನ್ನು ಸಹಿಸಿಕೊಂಡು ಮಗುವನ್ನೆತ್ತ ಚಿಕ್ಕಿಂಗಿಯ ಈ ಪರಿಸ್ಥಿತಿಗೆ ಕಾರಣನಾದ ನಿಂಗಣ್ಣನ ಮಗ ಕೊನೆಗೆ ಬರಲೇ ಇಲ್ಲ. ಮರಕಾಳಕ್ಕ ಮಗುವನ್ನು ಮಣ್ಣಿನಲ್ಲಿ ಹೂತಾಕಿ ಎಲ್ಲವು ಸರಾಗವಾಯಿತೆಂದು ಕೊಂಡಳು. ಆದರೆ ವಿಧಿ ಮಗಳನ್ನು ಬಲಿತೆಗೆದುಕೊಂಡಿತು. ದಿನದಿಂದ ದಿನಕ್ಕೆ ಚಿಕ್ಕಿಂಗಿ ನಗುವುದು, ಅಳುವುದು ಮಾಡುತ್ತಿದ್ದಳು. ಕೊನೆಗೆ ಮಗಳ ವರ್ತನೆಯಿಂದ ವೆಂಕಟಯ್ಯನನ್ನು ಕರೆಸಿ ಕೇಳಿದಾಗ.

"ಯಾರ್ ನೀನು ಹೇಳು' ಹುಣಸೆ ಚಬ್ಬೆಯಿಂದ ಹೊಡೆಯ ತೊಡಗಿದ.

' ನಾನು ಪಕ್ಕದ್ಮನೆ ಕೆಂಚಿ'

'ಹೋಗ್ಲಿ, ಇಲ್ಲ್ಯಾಕ್ಬಂದೆ?'

' ನನ್ಗೂ ಹುಲ್ಲಿತ್ಲೂ ಪರಂಗಿ ಗಿಡದ್ಮೇಲೆ ಕುಂತಿ ಕುಂತಿ ಬೇಜಾರಾಗಿತ್ತು. ಅದಕ್ಕೆ ಬಂದೆ'

'ಈಗೊಂಟೋಗು'

'ಇಲ್ಲ ಇಲ್ಲ, ನಗ್ಗೆ ಹೊಸ್ಬಟ್ಟೆ ಉಟ್ಕೋಬೇಕು, ಕಡುಬು ಕಜ್ಜಾಯ ತಿನ್ಬೇಕು ಅಂತ ಆಸೆ ಆಗ್ತಿದೆ'

'ಅವೆಲ್ಲಾನು ತಿನ್ನುವಂತೆ, ಈಗೊಂಟೋಗು' ಅಂದನು.

'ಆಗ್ಲಿ ಹೋಗ್ತಿನಿ'

'ಹೋಗೋತ್ಗೆ ಗುರ್ತೇನು'?

ಚಿಕ್ಕಿಂಗಿ ತಲೆ ಕೂದಲನ್ನು ಕಿತ್ತು ಕೊಟ್ಟಳು. ಆಮೇಲೆ ತೂರಾಡಿ ಧೊಪ್ಪನೆ ಬಿದ್ದಳು."

ಈ ರೀತಿಯ ನಂಬಿಕೆಗಳು, ಆಚರಣೆಗಳನ್ನು ನೋಡುತ್ತಿದ್ದರೆ, ಮರಕಾಳಕ್ಕ ಮಗಳ ಆರೋಗ್ಯದ ಕಡೆ ಗಮನ ಕೊಡದೆ ನಂಬಿಕೆ, ಸಂಪ್ರದಾಯಗಳಿಂದ ಅದನ್ನು ಈ ರೀತಿ ಗಾಳಿ ಎಂದು ಸುದ್ದಿ ಎಬ್ಬಿಸಿ ಹೆಣ್ಣಿಗೆ ಹಿಂಸೆ ಕೊಡುವುದು ಕ್ರೂರವಾದ ಪದ್ಧತಿಯಾಗಿದೆ. ಸಮಾಜದಲ್ಲಿ ಇಂತಹವುಗಳು ಬುಡ ಸಮೇತವಾಗಿ ನಾಶವಾಗಬೇಕು. ತಾನು ಮಾಡಿದ ಪಾಪದ ಕೆಲಸಕ್ಕೆ ತನ್ನ ಮಗಳೇ ಬಲಿಯಾಗುವುದನ್ನು ಹಿರಿಯರ ಗಾದೆಯಂತೆ 'ಮಾಡಿದುಣ್ಣೋ ಮಹಾರಾಯ' ಎಂಬಂತೆ ಹೆಣ್ಣಾಗಿ ಇನ್ನೊಂದು ಹೆಣ್ಣನ್ನು ಈ ರೀತಿ ಶೋಷಿಸುವುದು ಸಮಾಜಕ್ಕೆ ಕಂಟಕವಾದ ವಿಚಾರವಾಗುತ್ತದೆ. ಇಂತಹ ವಿಚಾರಗಳಲ್ಲಿ ವೈಚಾರಿಕವಾಗಿ ಚಿಂತಿಸುವುದು ಸಮಾಜದ ಮತ್ತು ಹೆಣ್ಣಿನ ಅಭಿವೃದ್ಧಿಗೆ ಸರ್ವಸಮ್ಮತವಾದುದು.

ಸಮಾಜದಲ್ಲಿ ಆಧುನಿಕತೆಯ ಗಾಳಿ ಬೀಸಿ ಎಲ್ಲವೂ ಬದಲಾವಣೆಯಾಗುವ ಅಂಚಿನಲ್ಲಿದೆ. ಆಧುನಿಕತೆ ತನ್ನ ಪ್ರಭಾವವನ್ನು ಎಷ್ಟೇ ಬೀರಿದರೂ ಗ್ರಾಮೀಣ ಸಮಾಜದಲ್ಲಿ ಹಿರಿಯರು ನಂಬಿಕೊಂಡು ಬಂದ ಬದುಕು ಬವಣೆಗಳನ್ನು ಮರೆಯಲು ಸಾಧ್ಯವಿಲ್ಲ. ಗಂಡನನ್ನು ಕಳೆದುಕೊಂಡ ಮಾದಕ್ಕ ಮಕ್ಕಳಿಗೆ ಒಂದು ದಾರಿ ಮಾಡಬೇಕೆಂದು, ಸಾಲ ಮಾಡಿ ಮಕ್ಕಳನ್ನು ವಿದ್ಯಾವಂತರಾಗಿ ಮಾಡಿ ಕೊನೆಗೆ, ನಗರದ ಆಕರ್ಷಣೆಗೆ ಒಳಗಾದ ಮಗ ತಾಯಿಯನ್ನು ನಿರ್ಲಕ್ಷ್ಯದಿಂದ ಕಾಣುವುದನ್ನು **'ಆ ಮುದುಕಿ'** ಕಥೆಯಲ್ಲಿ ಗುರುತಿಸಬಹುದು.

ಮಗನ ನಿರೀಕ್ಷೆಯಲ್ಲಿದ್ದ ಮಾದಕ್ಕನಿಗೆ ಮಗನ ಚಟುವಟಿಕೆಯಿಂದ ಬೇಸರ ಬಂದು ಮಗ ಕೆಲಸ ಸಿಕ್ಕದೆ ಮತ್ತಷ್ಟು ಸಾಲ ಮಾಡಿಕೊಂಡು ಯಾವುದೋ ಹೆಣ್ಣನ್ನು ಮದುವೆಯಾಗಿ ಅಲ್ಲೇ ಉಳಿದುಕೊಂಡದ್ದು ಮಾದಕ್ಕನಿಗೆ ನುಂಗಲಾರದ ತುತ್ತಾಯಿತು. ಇದರಿಂದ ನೊಂದ ಮಾದಕ್ಕ ಹೊಲವನ್ನು ಮಾರಿ ಹೆಣ್ಣು ಮಕ್ಕಳ ಮದುವೆ ಮಾಡುತ್ತಾಳೆ. ಕಿರಿ ಮಗನಿಗೂ ಒಂದು ದಾರಿ ಮಾಡಿ, ಹಿರಿಯ ಮಗನ ಮನೆ ಸೇರುತ್ತಾಳೆ.

ಕೂಲಿ ಮಾಡಿ ಗೌಡರಟ್ಟಿಯಲ್ಲಿ ಸಾಲ ತಂದು ಮಗನನ್ನು ಓದಿಸಿ ವಿದ್ಯಾವಂತನಾದರೆ, ತನ್ನೆಲ್ಲಾ ಕಷ್ಟಗಳು ಪರಿಹಾರವಾಗುತ್ತದೆ ಎಂದು ಕೊಂಡವಳಿಗೆ ಆಧುನಿಕತೆಯ ಆಮಲಿನಲ್ಲಿ ತೇಲುತ್ತಿರುವ ಇಂದಿನ ಮಕ್ಕಳಿಗೆ ಹಿಂದಿನದ್ದನ್ನು ನೆನೆಸಿಕೊಳ್ಳುವ ಮನೋಭಾವವೇ ಇಲ್ಲವಾಗಿದೆ. ಮಗನ ಮನೆಯಲ್ಲಿದ್ದ ಕುರ್ಚಿ ಸೋಫಾಗಳ ವೈಭವವನ್ನು ನೋಡಿ ಗಾಬರಿಯಾಗುತ್ತಾಳೆ "ಮಗನನ್ನು ಓದಿಸಲು ಕತ್ತಿನಲ್ಲಿದ್ದ ತಾಳಿಯನ್ನು ಮಾರಿದ್ದಳು. ಎಲ್ಲವನ್ನೂ ನೆನೆದುಕೊಂಡಾಗ ಕಣ್ಣು ತುಂಬಿ ಬಂದವು. ಸಂಜೆಯಾಗುತ್ತಲೇ ಹಸಿವಿನಿಂದ ಅಳುವ ಕಿರಿಮಗನ ಮಕ್ಕಳೆಲ್ಲಿ? ಹಾಲು ತುಪ್ಪದಲ್ಲೇ ತೇಲುವ ಈ ಮಕ್ಕಳೆಲ್ಲಿ ಎಂದು ಅಳುವೆ ಬಂದಂತಾಯಿತು."

ಹೆತ್ತವರು ತಮ್ಮ ಆಸೆ ಆಕಾಂಕ್ಷೆಗಳನ್ನು ಬದಿಗೊತ್ತಿ ಇಂದಿಗೂ ಮಕ್ಕಳಿಗಾಗಿ ದುಡಿಯುತ್ತಿರುವ ಸನ್ನಿವೇಶಗಳನ್ನು ಕಾಣಬಹುದು. ಅದನ್ನು ಲೇಖಕರು ಕಥೆಯಲ್ಲಿ ಮನಮುಟ್ಟುವಂತೆ ಚಿತ್ರಿಸಿದ್ದಾರೆ. ಗಂಡನ ಆಸರೆಯಿಲ್ಲದೆ ಮಾದಕ್ಕ ತನ್ನ ಮಕ್ಕಳನ್ನು ಸಾಕಿ ಬೆಳೆಸುತ್ತಾಳೆ. ಆದರೆ ಇಂದು ಬದಲಾವಣೆಯ ಕಡೆ ಮುಖ ಮಾಡಿ ಹೆತ್ತವರನ್ನು ನಿರ್ಲಕ್ಷ್ಯ ಮಾಡುತ್ತಿರುವುದರಿಂದ ಪ್ರಸ್ತುತದಲ್ಲಿ ಎಷ್ಟೋ ತಾಯಂದಿರು ಆಶ್ರಮವನ್ನು ಸೇರುತ್ತಿದ್ದಾರೆ. ಯುವಕರು ನಾಳೆ ತಾವು ಸಹ ವಯಸ್ಸಾದ ಮುದುಕ ಮುದುಕಿಯರಾಗುತ್ತೇವೆ ಎಂಬ ಸತ್ಯವನ್ನು ಮರೆತು ಬದುಕುತ್ತಿದ್ದಾರೆ. ಮಾದಕ್ಕನ ನಂಬಿಕೆ ಆಸೆಗಳಿಗೆ ನೀರೆರೆಚಿದ ಸೊಸೆ ಕೈಗೆ ಪೊರಕೆ ಕೊಟ್ಟು ಕಸ ಗುಡಿಸಿ ವರೆಸಲು ಹೇಳಿ ಆಳಿನಂತೆ ನಡೆಸಿಕೊಳ್ಳುತ್ತಾಳೆ. ಇಂದಿನ ಸೊಸೆಯಂದಿರಿಗೆ ಆಧುನಿಕತೆಯ ಅಮಲು ಅತಿಯಾಗಿ ತಲೆಗೇರಿದೆ. ಪ್ರೀತಿ ವಾತ್ಸಲ್ಯ, ಬಾಂಧವ್ಯ ಎಲ್ಲವು ಕಣ್ಮರೆಯಾಗುತ್ತಿರುವ ವಿಚಾರ ವಿಷಾದದ ಸಂಗತಿಯಾಗಿದೆ.

ಹೆಣ್ಣು ಹಿಂದಿನಿಂದಲೂ ಶೋಷಣೆಗೆ ಒಳಗಾಗಿ ಬದುಕುತ್ತಿರುವುದನ್ನು ನೋಡುತ್ತಿದ್ದರೂ ಸಹ ಇಂದು ಆಧುನಿಕತೆಯ ಬಲೆಗೆ ಸಿಕ್ಕಿ ಎಷ್ಟೋ ಹೆಣ್ಣುಗಳ ಜೀವನ ಬೀದಿಪಾಲಾಗುತ್ತಿದೆ. ಸಾಕಿ ಬೆಳೆಸಿದ ತಂದೆ ತಾಯಿಯರನ್ನು ಬಿಟ್ಟು ಓಡಿಹೋಗುವುದು, ಓಡಿ ಹೋದ ಉತ್ಸಾಹದಲ್ಲಿ ಎಲ್ಲರನ್ನು ಎಲ್ಲವನ್ನು ಮರೆತು ಅದರಲ್ಲೂ ಮದುವೆಯಾಗಿ ಗಂಡ ಮಕ್ಕಳಿರುವ ಹೆಣ್ಣುಗಳು ಈ ರೀತಿಯ ದಾರಿಯಲ್ಲಿ ಹೋಗಿ ಗಂಡಿನ ಅಡಿಯಾಳಾಗಿ ಬದುಕುವುದನ್ನು **'ಓಡಿ ಹೋದವಳು'** ಕಥೆಯಲ್ಲಿ ಕಾಣಬಹುದು.

ಮದುವೆಯಾಗಿ ಗಂಡನ ಮನೆಯಲ್ಲಿ ಬದುಕು ನಡೆಸಬೇಕಾದ ಹೆಣ್ಣು ಇಂದು ನಗರದ ಆಕರ್ಷಣೆಗೆ ಒಳಗಾಗಿ ಗೊತ್ತುಗುರಿ ಇಲ್ಲದವನ ಜೊತೆಗೆ ಬದುಕು ನಡೆಸುತ್ತಿರುವ ಪ್ರಸಂಗಗಳಿಗೆ ಕಥೆಯಲ್ಲಿನ ಚಿಕ್ಕವ್ವ ಇದಕ್ಕೆ ಉದಾಹರಣೆಯಾಗುತ್ತಾಳೆ. ಮದುವೆಯಾಗಿ ಮಕ್ಕಳಿದ್ದರೂ ಯಾರೋ ಗೊತ್ತು ಗುರಿ ಇಲ್ಲದವನ ಮೋಹಕ್ಕೆ ಒಳಗಾಗಿ ನಗರದಲ್ಲಿ ಸುಖವನ್ನು ಬಯಸಿ ಹೋಗುವ ಚಿಕ್ಕವ್ವನ ಜೀವನ ಪ್ರಸ್ತುತಕ್ಕೆ ಕನ್ನಡಿ ಹಿಡಿದಂತಿದೆ.

ಹಿರಿಯರ ಗಾದೆಯಂತೆ "ಮಲ್ಲಿಗೆ ಹೂವ ಮುಡ್ಕೊಂಡು ಮನೇಲಿರು ಮಗ್ಳೆ ಅಂದ್ರೆ ಇಲ್ಲ ಉರ್ ಗೌಡನ ಮಗನ್ನ ನೋಡ್ಕಂಡು ನೀರೊರ್ತಿನಿ ಅಂತಿದ್ಲಂತೆ" ಎಂಬ ಮಾತುಗಳನ್ನು ಗಮನಿಸಿದಾಗ ಪ್ರಸ್ತುತದಲ್ಲಿ ಹೆಣ್ಣು ಗಂಡನ ಮನೆಯಲ್ಲಿ ದುಡಿದು ಸುಖವಾಗಿರುವ ಬದಲು ಈ ರೀತಿಯ ನಗರದ ಆಕರ್ಷಣೆಗೆ ಒಳಗಾಗಿ ಬದುಕುವುದನ್ನು ಕಾಣಬಹುದು. ಚಿಕ್ಕವ್ವ ಮನಸ್ಸಿನಲ್ಲಿಯೇ ನೊಂದು ಕೊಳ್ಳುತ್ತಾಳೆ. ತಾನು ಮದುವೆಯಾದ ಹೊಸದರಲ್ಲಿ ಸಂಬಂಧ ಕೂಡಿ ಬಂದಿರಲಿಲ್ಲ. ಕಾರಣ ವರದಕ್ಷಿಣೆಯ ಭಾರದಿಂದ ಅವ್ವ ಮಗಳನ್ನು ತನ್ನ ತಮ್ಮನಿಗೆ ಮದುವೆ ಮಾಡಿದ್ದಳು. ಪಕ್ಕದ ಮನೆಯಲ್ಲಿದ್ದವನ ಸೂಟು ಬೂಟು ನೋಡಿ ಕೆಲಸದಲ್ಲಿರಬೇಕು, ಎಂದು ಕೊಂಡ ಅವಳಿಗೆ ದಿನದಿಂದ ದಿನಕ್ಕೆ ಸಂಬಂಧ ಬಿಡಲಾರದಷ್ಟು ಹತ್ತಿರವಾಗಿ ಓಡಿ ಹೋಗುವ ಮನಸ್ಸು ಮಾಡಿದ್ದ ಆಕೆಗೆ ತಾಯಿ ಆಡಿದ ಮಾತುಗಳು ಅರ್ಥವಾಗಲಿಲ್ಲ. "ನಮ್ಮ ವಂಸ್ದೇಲಿ ಯಾರೂ ಮಾಡ್ದೆ ಇರೋದಾ ನೀನ್ ಮಾಡೋಕೊಂಟಿದ್ದಿ" ಎನ್ನುತ್ತಾಳೆ. ಆದರೆ ಅಷ್ಟರಲ್ಲಿ ಚಿಕ್ಕವ್ವನ ಮನಸ್ಸು ನಗರದ ಕಡೆ ತಿರುಗಿತ್ತು. ಎಷ್ಟು ಹೇಳಿದರೂ ಕೇಳದೆ ಮದುವೆಯಾದ ಗಂಡನನ್ನು ಬಿಟ್ಟು ಓಡಿಹೋದಳು.

ಸಮಾಜದಲ್ಲಿ ಈ ರೀತಿಯ ಮೋಹಕ್ಕೆ ಬಲಿಯಾಗಿ ಹೆಣ್ಣು ಶೋಷಣೆ, ಅನ್ಯಾಯಕ್ಕೆ ಒಳಗಾಗುತ್ತಿದ್ದಾಳೆ. ಆಧುನಿಕತೆಯ ಪ್ರಭಾವ ಯಾವ ರೀತಿಯಲ್ಲಿ ತನ್ನ ಪರಿಣಾಮವನ್ನು ಬೀರುತ್ತಿದೆ ಎಂಬುದನ್ನು ಮದುವೆಯಾಗಿ ಮಕ್ಕಳಿದ್ದರೂ ಸಹ ಅವರನ್ನು ಬಿಟ್ಟು ನಗರದ ಆಕರ್ಷಣೆಯ ಕಡೆಗೆ ಹೋಗುತ್ತಿರುವ ಚಿಕ್ಕವ್ವನಂತಹ ಎಷ್ಟೋ ಹೆಣ್ಣುಗಳು ತಮ್ಮ ಜೀವನವನ್ನು ಹಾಳು ಮಾಡಿಕೊಂಡು ಶೋಚನೀಯ ಸ್ಥಿತಿಯಲ್ಲಿ ಬದುಕುತ್ತಿದ್ದಾರೆ. ಈ ಪ್ರಸಂಗಗಳು ಹೆಚ್ಚಾಗಿ ಹಳ್ಳಿಗಾಡಿನಲ್ಲಿ ಕಾಣಬಹುದು. ಓಡಿ ಹೋದ ಮೇಲೆ ಅವನ ವಿಚಾರ ಗೊತ್ತಾದಾಗ, ಪಡುವ ನೋವು, ಹತಾಶೆಗಳು ಹೇಳಲು ತೀರದು. ಸಿಮೆಂಟ್ ಹೊರುತ್ತಿದ್ದವಳು ಹೇಳಿದ ಮಾತು. "ನಾನು ನಿನ್ನ ಹಾಗೆ ಮೋಸದ ಮಾತಿಗೆ ಮರುಳಾಗಿ ಓಡಿ ಬಂದವಳೇ ನಾನು ನೀನೇ ಅಲ್ಲ. ಈ ಸಡ್ಡಿನಲ್ಲಿರುವವರೆಲ್ಲ ಒಂದು ರೀತಿ ಹಾಗೆಯೇ ಎಲ್ಲಾವನ್ನು ನೆನೆದು ಸಾಯಬೇಕು. ಇಲ್ಲವೆ ಈ ಹೊಲಸಿನಲ್ಲೇ ಕಾಲ ತಳ್ಳಬೇಕು" ಎಂದು ಕೊಳ್ಳುತ್ತಾಳೆ.

ಈ ರೀತಿಯ ಘಟನೆಗಳಿಂದ ಹೆಣ್ಣನ್ನು ಗಂಡು ಅಡಿಯಾಳಾಗಿ, ನಿಕೃಷ್ಟವಾಗಿ ಕಾಣುವುದನ್ನು ನೋಡಬಹುದು. ಚಿಕ್ಕವ್ವನಂತಹ ವರಿಷ್ಠಿತಿಯಲ್ಲಿ ಹೆಣ್ಣು ಇಂದು ಸಹ ದುಸ್ಥಿತಿಯಲ್ಲಿ ಜೀವನ ನಡೆಸುತ್ತಿದ್ದಾಳೆ. ಇದು ಹೆಣ್ಣಿನ ಕುಲಕ್ಕೆ ಅವಮಾನವೆನ್ನಬಹುದು. ಹಿರಿಯರಲ್ಲಿದ್ದ ಆಚಾರ-ವಿಚಾರ ಸಂಪ್ರದಾಯಗಳು ಕಾಲ ಕ್ರಮೇಣ ಕಣ್ಮರೆಯಾಗಿ, ಹೆಣ್ಣು ಈ ರೀತಿ ಕೆಳಮಟ್ಟಕ್ಕೆ ಹೋಗುತ್ತಿರುವುದು ಕೊನೆಯಾಗಬೇಕು. ಜೊತಗೆ ಹೆಣ್ಣಿಗೆ ಉತ್ತಮವಾದ ಶಿಕ್ಷಣವನ್ನು ಒದಗಿಸಬೇಕು. ಅಂದು ಸಮಾಜದಲ್ಲಿ ಹೆಣ್ಣಿಗೆ ಉತ್ತಮಸ್ಥಾನ ಸಿಗುತ್ತದೆ.

ಒಟ್ಟಾರೆಯಾಗಿ ಗ್ರಾಮೀಣ ಸಮಾಜದಲ್ಲಿ ಬದುಕುತ್ತಿರುವ ಹೆಣ್ಣು ಇನ್ನೂ ಸಹ ವಿಷಾದದ ವರಿಷ್ಠಿತಿಯಲ್ಲಿ ಬದುಕುತ್ತಿದ್ದಾಳೆ. ಹಲವಾರು ರೀತಿಯ ಕಟ್ಟುಪಾಡುಗಳಿಗೆ ನಂಬಿಕೆಗಳಿಗೆ ಬದ್ಧವಾಗಿ ಬದುಕುತ್ತಿದ್ದಾಳೆ. ಮತ್ತೆ ಕೆಲವು ಆಧುನಿಕತೆಯ ಪ್ರಭಾವದಿಂದ ತಮ್ಮ ಜೀವನವನ್ನೇ ಮರೆತು ಎಲ್ಲೋ

ಒಂದು ಕಡೆ ಶೋಷಣೆ ತುಳಿತಕ್ಕೆ ಸಿಕ್ಕಿ ಬದುಕಲು ಆಗದೆ ಸಾಯಲು ಆಗದ ಕತ್ತರಿಯ ಮಧ್ಯೆ ಸಿಕ್ಕ ಅಡಿಕೆಯಂತೆ ಜೀವನ ನಡೆಸುತ್ತಿದ್ದಾಳೆ.

ಗ್ರಾಮೀಣದಲ್ಲಿರುವ ಹೆಣ್ಣಿನ ಸ್ಥಿತಿ ಇನ್ನೂ ಸುಧಾರಿಸಬೇಕು. ಉತ್ತಮವಾದ ಶಿಕ್ಷಣವನ್ನು ಕೊಟ್ಟು ಕೆಟ್ಟ ಪದ್ಧತಿಗಳಿಗೆ ಗುರಿಯಾಗದಂತೆ ತಿಳುವಳಿಕೆ ಮೂಡಿಸಬೇಕು. ಎಲ್ಲರಂತೆ ಸರಿಸಮಾನವಾದ ಸ್ಥಾನಮಾನವನ್ನು ಕೊಡುವುದರ ಮೂಲಕ ಹೆಣ್ಣಿನ ಜೀವನ ಉತ್ತಮವಾಗಿ ನಡೆಯುವಂತೆ ಮಾಡಬೇಕಾಗಿರುವುದು ಅನಿವಾರ್ಯವಾಗಿದೆ.

೪.೪ ರೈತಾಪಿ ಬದುಕು:

ರೈತ ದೇಶದ ಬೆನ್ನೆಲುಬು, ಆತ ಒಂದು ಶಕ್ತಿ. ಎಲ್ಲರ ಒಡಲ ತುಂಬಿಸಿ ತೃಪ್ತಿ ನೀಡುವಾತ. ಅಂಥ ರೈತನ ಜೀವನ ಉತ್ತಮವಾಗಿದ್ದಾಗ ಎಲ್ಲಾರ ಬದುಕು ಹಸನಾಗಿರುತ್ತದೆ. ಆದರೆ ಇಂದಿನ ಪರಿಸ್ಥಿತಿಯೇ ಬೇರೆ ದೇಶ ಎಷ್ಟೇ ಮುಂದುವರಿದರೂ ಸಹ ಗ್ರಾಮೀಣ ಸಮಾಜದಲ್ಲಿ ಬದುಕು ನಡೆಸುತ್ತಿರುವ ರೈತನ ಸ್ಥಿತಿ ಚಿಂತಾಜನಕವಾಗಿದೆ. ಆರ್ಥಿಕ ಸಂಕಷ್ಟದಲ್ಲಿ ಸಿಲುಕಿದ ಬಡರೈತನನ್ನು ಮೇಲ್ವರ್ಗದವರು ಶೋಷಣೆ ಮಾಡುತ್ತಿದ್ದಾರೆ. ಸಾಲ ಮಾಡಿ ಬೆಳೆ ಬೆಳೆಯುತ್ತಾನೆ, ಪ್ರಕೃತಿ ವಿಕೋಪದಿಂದ ನಷ್ಟ ಅನುಭವಿಸುತ್ತಿದ್ದಾನೆ. ಸಾಲ ತೀರಿಸಲಾಗದೆ ಆತ್ಮಹತ್ಯೆಯ ಕಡೆಗೆ ಮುಖ ಮಾಡುತ್ತಿರುವ ರೈತ ಇಂದು ದಾರುಣ ಸ್ಥಿತಿಯನ್ನು ಎದುರಿಸುತ್ತಿದ್ದಾನೆ. ರೈತನ ಮಗನಾಗಿ ಹುಟ್ಟಿ ರೈತ ಜೀವನವನ್ನು ಹತ್ತಿರದಿಂದ ಕಂಡು ಕೇಳಿದ ವಿಚಾರವನ್ನು ಲೇಖಕರು ವಾಸ್ತವಕ್ಕೆ ಹತ್ತಿರವಿರುವಂತೆ ಚಿತ್ರಿಸಿದ್ದಾರೆ. ದೇಶಕ್ಕೆ ಅನ್ನ ನೀಡುವ ರೈತನ ಸ್ಥಿತಿ ಇಂದು ವಿನಾಶದ ಅಂಚಿಗೆ ಬಂದು ತಲುಪುತ್ತಿದೆ. ಅದರಿಂದ ಸಮಾಜದ ಮೇಲಾಗುವ ಪರಿಣಾಮವನ್ನು ಲೇಖಕರು ವ್ಯವಸ್ಥೆಯ ಜೊತೆಗಿನ ಹೋರಾಟವೆಂಬುವುದಾಗಿ ಚಿತ್ರಿಸಿದ್ದಾರೆ.

ಗ್ರಾಮೀಣ ಪ್ರದೇಶದಲ್ಲಿ ಬದುಕು ನಡೆಸುತ್ತಿರುವ ರೈತನ ಸ್ಥಿತಿ ಇಂದು ಶೋಚನೀಯವಾಗಿದೆ. ಕಾರಣ ಆತ ಬೆಳೆದ ಬೆಳೆಗೆ ಸರಿಯಾದ ಬೆಲೆ ಇಲ್ಲದೆ, ನಷ್ಟ ಅನುಭವಿಸುತ್ತಿದ್ದಾನೆ. ಮಾಡಿದ ಸಾಲ ತೀರಿಸಲಾಗದೆ ಎದುರಾದ ಸಂಕಷ್ಟಗಳು ಆತನನ್ನು ಕುಗ್ಗಿಸಿದವು. ಗ್ರಾಮೀಣ ಪ್ರದೇಶದ ಯುವ ಪೀಳಿಗೆ ಆಧುನಿಕತೆಯ ಕಡೆ ಮುಖ ಮಾಡಿ ವ್ಯವಸಾಯದ ಕಡೆಗೆ ನಿರ್ಲಕ್ಷ್ಯದ ಮನೋಭಾವ ತಾಳುತ್ತಿರುವುದು. ಸಮಾಜದಲ್ಲಿ ಮುಖ್ಯವಾಗಿ ಎದ್ದು ಕಾಣುವ ಸಮಸ್ಯೆಯಾಗಿದೆ. ತಾತನ ಕಾಲದಿಂದ ಉಳಿಸಿಕೊಂಡು ಬಂದ ಭೂಮಿಯ ಮೇಲೆ ಆಸಕ್ತಿಯಿಲ್ಲದೆ ಬಿತ್ತುವ ಮನಸ್ಸುಗಳು ಕಣ್ಮರೆಯಾಗುತ್ತಿವೆ. ದೇಶದ ಬೆನ್ನಲುಬಂತೆ ಇರುವ ರೈತ ಸಮಸ್ಯೆ ಸಹಿಸಿಕೊಳ್ಳಲಾರದೆ, ಆತ್ಮಹತ್ಯೆಗೆ ಶರಣಾಗುತ್ತಿರುವುದನ್ನು ಕಾಣಬಹುದು. ಅತಿವೃಷ್ಟಿಯಾಗಲಿ, ಅನಾವೃಷ್ಟಿಯಾಗಲಿ ಸರ್ಕಾರ ಪರಿಹಾರ ಕೊಡಲು ಮೀನಾಮೇಷ ಎಣಿಸುತ್ತಿವೆ. ರೈತನನ್ನು ಕಾಪಾಡಲು ಸಂಘಟನೆಗಳು ಹುಟ್ಟುತ್ತಲೇ ಇವೆ. ಆದರೆ ರೈತ ಮಾತ್ರ ಅದೇ ಸ್ಥಿತಿಯಲ್ಲಿದ್ದಾನೆ. ಯುವ ಪೀಳಿಗೆಯಿಂದ ಆಗುತ್ತಿರುವ ಭೂಮಿಯ ನಿರ್ಲಕ್ಷ್ಯ, ಜೊತೆಗೆ ರೈತ ಎದುರಿಸುವ ಸಮಸ್ಯೆಗಳಿಗೆ ಎಂದಿಗೆ ಪರಿಹಾರ ಸಿಗುತ್ತದೋ ಅಂದು ಸಮಾಜ ಪ್ರಗತಿ ಕಾಣಲು ಸಾಧ್ಯ.

ಇಂತಹ ಸಂಕಷ್ಟಕ್ಕೆ ಸಿಲುಕಿ ಬಳಲುತ್ತಿರುವ ರೈತನ ಸ್ಥಿತಿಯನ್ನು ಅದರಿಂದ ಸಮಾಜದ ಮೇಲಾಗುವ ಪರಿಣಾಮವನ್ನು ಕೃಷ್ಣಪ್ಪ ಅವರು ತಮ್ಮ ಕಥೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಪ್ರಸ್ತುತ ಗ್ರಾಮೀಣ ಜನರಲ್ಲಿ ಆಗುತ್ತಿರುವ ಬದಲಾವಣೆಯಿಂದ ರೈತನ ಸ್ಥಿತಿ ಇಂದು ಯಾವ ಹಂತಕ್ಕೆ ಬಂದು ತಲುಪಿದೆ ಎಂಬುದನ್ನು **'ಒಂದು ಅಳಲಿನ ಸುತ್ತ'** ಕಥೆಯಲ್ಲಿ ನೇರವಾಗಿ ತಿಳಿಸಿದ್ದಾರೆ.

ಹಿಂದಿನಿಂದಲೂ ನಂಬಿಕೊಂಡು ಬಂದ ದೇವರು ಧರ್ಮ, ಪಾಪ, ಪುಣ್ಯದ ಪ್ರಜ್ಞೆ ಇದ್ದುದರಿಂದ ಅಷ್ಟೋ ಇಷ್ಟೋ ಸತ್ಯಗಾಲವಿದ್ದುದರಿಂದ ಮಳೆ ಸಮೃದ್ಧಿಯಾಗಿ, ಕೆರೆ ತುಂಬಿ ಸಮೃದ್ಧವಾದ ಬೆಳೆ ಬೆಳೆಯುತ್ತಿದ್ದರು. ರೈತ ಭೂಮಿ ತಾಯಿಯನ್ನು ನಂಬಿ ಜೀವನ ಸಾಗಿಸುತ್ತಿದ್ದ. ಆದರೆ ಇಂದು ಎಲ್ಲವು ಬದಲಾಗಿದೆ. ರೈತನ ಬದುಕು ಅವನತಿಯ ಅಂಚನ್ನ ತಲುಪುತ್ತಿದೆ.

ಇಂದಿನ ಮಕ್ಕಳಿಗೆ "ವಿದ್ಯೆ ಕಲೀರಿ ವಿದ್ಯೆ ಕಲೀರಿ" ಅಂತ ಮಕ್ಕೆಲ್ಲಾನೂ ಕಾನ್ವೆಂಟ್‌ಗೆ ಕಳ್ಸಿದ್ವಿ ಅವೀಗ ಇಂಜಿನಿಯರೂ ಆಗದೆ ಈ ಕಡೆ ರೈತನೂ ಆಗದೆ ಯಾರಾರೋ ಕೆಲ್ಸದಲ್ಲಿರೋ ಹುಡುಗಿ ಮದ್ವೆ ಮಾಡ್ಕೊಂಡು ಅವ್ರೇಳ್ದಂಗೆ ಕೇಳ್ಕೊಂಡು ಕುಂತವೆ. ಯೋಚಿಸ್ತಾ ಹೋದಂಗೆಲ್ಲಾ ಗೌಡರ ತಲೆ ಚಿಟ್ಟು ಹಿಡಿಯುತ್ತದೆ. ನಾನು ಈ ಜಮೀನು ಕೊಂಡುಕೊಂಡು ಊರ ಗೌಡನಾಗಿ ಮೆರೆದಾಡೋ ಬದ್ಲು ಒಂದ್ ಮೇಷ್ಟ್ರು ಕೆಲ್ಸವೋ, ಜವಾನನ ಕೆಲ್ಸವೋ ಮಾಡಿದ್ದಿದ್ರೆ ಸುಖವಾಗಿರಬಹುದಿತ್ತು". ಎಂದು ಹೇಳುವ ಗೌಡನ ಮಾತುಗಳನ್ನು ಗಮನಿಸಬಹುದು.

ಇಂದಿನ ಮಕ್ಕಳು ಆಧುನಿಕತೆಯ ಕಡೆ ಮುಖ ಮಾಡಿ ಇತ್ತ ರೈತನು ಆಗದೆ, ವಿದ್ಯಾವಂತನು ಆಗದೆ ನಗರ ಪ್ರದೇಶದಲ್ಲಿರುವ ಹುಡುಗಿಯರನ್ನು ಮದುವೆಯಾಗಿ ಅವರು ಹೇಳಿದ ಹಾಗೆ ಕೇಳಿಕೊಂಡು ಬದುಕುತ್ತಿರುವುದನ್ನು ನೋಡುತ್ತಿದ್ದೇವೆ. ಹಳ್ಳಿಯಲ್ಲಿ ಹುಟ್ಟಿ ಬೆಳೆದು ವ್ಯವಸಾಯ ಮಾಡಿ ರಾಜನಂತೆ ಬದುಕುವ ಮನೋಭಾವವನ್ನು ಕಳೆದುಕೊಳ್ಳುತ್ತಿದ್ದಾರೆ. ಇವೆಲ್ಲವನ್ನು ನೋಡುತ್ತಿದ್ದರೆ, ಹಳ್ಳಿಯಲ್ಲಿ ರೈತನಾಗಿ ಹುಟ್ಟುವ ಬದಲು ಒಂದು ಕೆಲಸದಲ್ಲಿ ಇದ್ದಿದರೆ ಸುಖವಾಗಿರಬಹುದಿತ್ತು ಎಂಬುದು ವ್ಯಕ್ತವಾಗುತ್ತದೆ.

ಸಮಾಜದಲ್ಲಿ ಜನರು ಆಧುನಿಕತೆಯ ದಾರಿಯಲ್ಲಿ ಹೋಗುತ್ತಿರುವುದರಿಂದ ಎಲ್ಲವು ಕಣ್ಮರೆಯಾಗುತ್ತಿವೆ. ಹಿಂದೆಲ್ಲಾ ಸುಲಭವಾಗಿ ಸಿಗುವ ಸೌದೆ ಬಳಸಿ ಒಲೆಯಲ್ಲಿ ಅಡುಗೆ ಮಾಡುತ್ತಿದ್ದರು. ಆದರೆ ಇಂದು ಕೈಗಳು ಮಸಿಯಾಗುವುದೆ ಅವಮಾನವೆಂದು, ದುಬಾರಿಯಾದರು ಸರಿಯೇ ಗ್ಯಾಸ್ ಸ್ಟೌವ್ ವಿದ್ಯುತ್ ಸ್ಟಾವ್, ಬಳಕೆಗೆ ಮುಂದಾಗಿದ್ದಾರೆ. ಇದರ ದುಷ್ಟ ಪರಿಣಾಮದ ಅರಿವು ಮಾತ್ರ ಅವರಿಗಿಲ್ಲ. ಆದರೆ ರೈತನ ಪರಿಸ್ಥಿತಿಯೇ ಬೇರೆ. ಹೆಚ್ಚು ಶ್ರಮ ಕಡಿಮೆ ಆದಾಯ ಎಂಬಂತೆ ಅವನು ಬೆಳೆದ ಬೆಳೆಗೆ ಸರಿಯಾದ ಬೆಲೆ ಸಿಗದೆ ಬಡತನದಲ್ಲಿಯೇ ಬದುಕು ಸವೆಸುತ್ತಿದ್ದಾನೆ. ಮೂಲಭೂತವಾಗಿ ಬೇಕಾದ ವ್ಯವಸ್ಥೆಯನ್ನ ಹೊಂದುವುದು ಸಹ ಅವನಿಗೆ ಸಾಧ್ಯವಾಗುತ್ತಿಲ್ಲ. ಹೀಗೆ ದುಸ್ಥಿತಿಯನ್ನು ತಲುಪಿದ ರೈತನ ಸ್ಥಿತಿಯನ್ನು ನೆನೆದ ಗೌಡ "ಸರ್ಕಾರವೇನಾದರೂ ವೃದ್ಧಾಪ್ಯ ವೇತನ, ವಿಧವಾ ವೇತನ ಕೊಡುವ ಹಾಗೇ ರೈತರಿಗೆನಾದರೂ ಮಾಸಾಶನ ಕೊಡಲು ಶುರು ಮಾಡಿದರೆ?" ಎಂದು ಯೋಚಿಸುತ್ತಾನೆ. ಆ ಯೋಚನೆಯ ಹಿಂದೆಯೇ ರೈತನು ಅಂತ ಹೀನಾಯ ಸ್ಥಿತಿಗೆ ಹೋಗುವುದನ್ನ ನೆನೆದೇ ಹೇಸುತ್ತಾನೆ. ಈ ಮಾತುಗಳಲ್ಲಿ ಅದು ವ್ಯಕ್ತವಾಗುತ್ತದೆ. ಒಂದಾನೊಂದು ಕಾಲದ ಭಾರತದ ಬೆನ್ನೆಲುಬು ರೈತನ ಕಥೆ ಮಾಸಾಶನದಂತಹ ಭಿಕ್ಷೆಗೆ ಕೈ ಚಾಚುವುದೇ ಅದರಂತಹ ದೊಡ್ಡ ದುರಂತ ಮತ್ತೊಂದಿಲ್ಲ.

ದೇಶಕ್ಕೆ ಅನ್ನ ಕೊಡುವ ರೈತನ ಸ್ಥಿತಿ ಇಂದು ಕೆಳಮಟ್ಟದಲ್ಲಿ ಇರುವುದನ್ನು ಕಾಣಬಹುದು. ಇದರಿಂದ ಕಂಗಲಾಗಿರುವ ರೈತನಿಗೆ ಮುಂದೆ ಇಂತಹ ಮಾಸಾಶನದ ಯೋಜನೆ ಬಂದರೆ ಸಮಾಜದ ಸ್ಥಿತಿ ಏನಾಗಬಹುದೆಂಬ ಆತಂಕ ವ್ಯಕ್ತವಾಗುತ್ತದೆ. ಇಂತಹ ಒಂದು ಯೋಜನೆಯಿಂದ ದೇಶದ ಬೆನ್ನೆಲುಬಾಗಿರುವ ರೈತ ಮತ್ತೊಬ್ಬನ ಮುಂದೆ ಕೈ ಚಾಚುವುದೇ ದುರಂತದ ಸಂಗತಿಯಾಗಿದೆ. ಸಮಾಜ

ಹೀಗೆ ಬದಲಾವಣೆಯ ಹಾದಿಯಲ್ಲಿ ನಡೆದರೆ, ರೈತನ ಸ್ಥಿತಿ ಯಾವ ಹಂತಕ್ಕೆ ತಲುಪುತ್ತದೆ ಎಂಬುದನ್ನು ನೆನೆದರೆ ಮುಂದೆನೆಂಬ ಭೀತಿ ಕಾಡುತ್ತದೆ. ಯುವ ಜನಾಂಗ ಮುಂದಿನ ದಿನಗಳಲ್ಲಾದರು ಸಮಸ್ಯೆಗಳನ್ನು ಅರಿತು ಬದಲಾಗಬೇಕು. ಸರ್ಕಾರ ರೈತನಿಗೆ ಸರಿಯಾದ ಬೆಲೆಯನ್ನು ಕೊಟ್ಟು ಉಳಿಸಿ ಬೆಳೆಸುವ ಪ್ರಯತ್ನ ಮಾಡಿದರೆ ಸಮಾಜ ಏಳಿಗೆಯನ್ನು ಕಾಣುತ್ತದೆ. ಇಲ್ಲವಾದರೆ ಎದುರಿಸಬೇಕಾದ ಸಮಸ್ಯೆಗಳನ್ನು ನೆನೆದರೆ ಮನದಲ್ಲಿ ಆತಂಕ ಉದ್ಭವಿಸುತ್ತದೆ.

ಗ್ರಾಮೀಣ ಪ್ರದೇಶದಲ್ಲಿ ಬದುಕುತ್ತಿರುವ ರೈತನ ಸ್ಥಿತಿ ಇಂದು ದುಸ್ಥಿತಿಯಿಂದ ಕೂಡಿದೆ. ಅವನ ಪರಿಸ್ಥಿತಿಯನ್ನು ನೋಡಿದರೆ ಮರುಕ ಹುಟ್ಟುತ್ತದೆ. ವ್ಯವಸಾಯ ಮಾಡಿ ಜೀವನ ಸಾಗಿಸುತ್ತಿದ್ದ ರೈತನಿಗೆ ಇಂದು ಜೀವನವೇ ಬೇಡವಾಗಿದೆ. ರೈತನಾಗಿ ಹುಟ್ಟಿ ಅನುಭವಿಸುತ್ತಿರುವ ನೋವು, ಹತಾಶೆಯನ್ನು **'ಬತ್ತಿ ಹೋಯಿತು ಬಾವಿ.....ಹಾರಿ ಹೋಯಿತು ಜೀವ'**, ಮತ್ತು **'ಬೆಂದು ಹೋದ ಬದುಕು'** ಕಥೆಯಲ್ಲಿ ರೈತನ ಅಸಹಾಯಕ ಸ್ಥಿತಿ ಅವನು ಎದುರಿಸುತ್ತಿರುವ ಸಮಸ್ಯೆಯನ್ನು ಕಾಣಬಹುದು.

ಗ್ರಾಮೀಣರು ಬೇಸಾಯವನ್ನೇ ನಂಬಿ ಬದುಕು ಕಂಡವರು. ಹಿಂದೆ ಇದ್ದಂತಹ ನಂಬಿಕೆ, ಆಚಾರ, ವಿಚಾರ ಎಲ್ಲವೂ ಕಾಲಕ್ರಮೇಣ ಕಣ್ಮರೆಯಾಗುತ್ತಿವೆ. ರೈತ ಬೆಳೆ ಬೆಳೆದು ಜೀವನ ಸಾಗಿಸುವುದು ದಿನದಿಂದ ದಿನಕ್ಕೆ ಕುಂಟಿತವಾಗುತ್ತಿದೆ. ಅತಿವೃಷ್ಟಿ ಅನಾವೃಷ್ಟಿಯ ಕಾರಣದಿಂದಾಗಿ ಬೆಳೆದ ಬೆಳೆ ಕೈ ಹತ್ತದೆ, ಸಾಲ ಸೋಲ ಮಾಡಿಕೊಂಡು ಕೊನೆಗೆ ಯಾವುದು ಸಿಗದೆ ಆತ್ಮಹತ್ಯೆಗೆ ಬಲಿಯಾಗುತ್ತಿರುವುದನ್ನ ಕಾಣುತ್ತಲೇ ಬಂದಿದ್ದೇವೆ.

ಗೂಳಪ್ಪನಂತಹ ಒಬ್ಬ ರೈತ ತಾನು ಬೆಳೆದ ಬೆಳೆಗೆ ಸಾಲ ಮಾಡಿ, ಎಷ್ಟು ಬಾರಿ ಬೋರು ಹಾಕಿಸಿದರೂ ನೀರು ಬರದೆ ಕಂಗಲಾಗುತ್ತಾನೆ. ಬೆಳೆದ ಬೆಳೆಯನ್ನು ಉಳಿಸಿಕೊಳ್ಳಲು ಬ್ಯಾಂಕಿನ ಸಾಲಕ್ಕೆ ಅರ್ಜಿ ಹಾಕಿ, ಊರಲ್ಲಿಯು ಹೆಚ್ಚು ಬಡ್ಡಿಗೆ ಸಾಲ ಪಡೆದು ಆಸೆಯಿಂದೆ ಬೋರು ಹಾಕಿಸಿದಾಗ ನೀರು ಬರದೆ ಜೀವನವೇ ಮರುಭೂಮಿಯಾಗುತ್ತದೆ. ಕಣ್ಣ ಮುಂದೆ ಬೆಳೆದು ನಿಂತ ಬೆಳೆ ಕೈ ಸೇರದೆ ಇದ್ದಾಗ ಆಗುವ ನೋವು, ನಿರಾಶೆ, ಬದುಕನ್ನೇ ಚೂರಾಗಿಸಿತು. ಎಂತಹ ಕಷ್ಟ ಬಂದರೂ ಸಾಲ ಮಾಡಿ ಉಳಿಸಿಕೊಳ್ಳುವ ಆಸೆ ಬದುಕಬೇಕೆಂಬ ಛಲ ಬೇರೂರಿತು. ಎಲ್ಲಾವನ್ನು ನೆನೆದು ಹೊಲದಲ್ಲಿ ಬೆಳೆಯೂ ಇಲ್ಲ, ಮನೆಯಲ್ಲಿ ಹಣವು ಇಲ್ಲ. ಬ್ಯಾಂಕಿನ ಸಾಲ, ಬಡ್ಡಿಯ ಸಾಲದ ಜೊತೆಗೆ ಮಳೆಯಿಲ್ಲದೆ ಒಣಗಿ ನಿಂತ ಹೊಲಗದ್ದೆ, ಪೈರುಗಳು, ಬಾಳೆಯಂತೂ ನೀರಿಲ್ಲದೆ ಒಣಗುವುದನ್ನು ನೋಡಿ ಹತಾಶನಾಗುತ್ತಾನೆ. ರೈತ ಸಂಘದವರಿಂದ ಬ್ಯಾಂಕ್ ಸಾಲ ಮನ್ನವಾದರೂ ಸಹ ಗೂಳಪ್ಪನ ಸ್ಥಿತಿ ಚಿಂತಾಜನಕವಾಯಿತು.

ಒಂದು ಕಡೆ ಬದುಕಬೇಕೆಂಬ ಛಲದಿಂದ ಇದ್ದ ಗೂಳಪ್ಪ ಬ್ಯಾಂಕ್ ಸಾಲ ಮನ್ನವಾದರೂ ಕೈ ಸಾಲದ ಬಡ್ಡಿ ಹೆಚ್ಚಾಗಿ ಒಂದುವರೆ ಲಕ್ಷಕ್ಕೆ ಏರಿದ್ದು ಚೇತರಿಸಿಕೊಳ್ಳುವ ಮಾತು ಹುಸಿಯಾಯಿತು. ಹಿರಿಯ ಗಾದೆಯಂತೆ 'ವ್ಯವಸಾಯ, ನೀ ಸಾಯ, ನಿನ್ಮಗ ಸಾಯ' ಅನ್ನುವ ಹಾಗೆ ಜೀವನವೇ ಬೇಡವಾಯಿತು. ಸಾಲದ ಬಾದೆ ತಾಳಲಾರದೆ ಭೂಮಿಯನ್ನು ಮಾರುವ ಹಂತಕ್ಕೆ ಬಂದಿತು. ಇದರಿಂದ ಬಕ ಪಕ್ಷಿಯಂತೆ ಕಾದು ಕುಳಿತಿದ್ದ ಭೈರೇಗೌಡನಿಗೆ ಗೂಳಪ್ಪನ ಭೂಮಿಯನ್ನು ಕೊಂಡುಕೊಳ್ಳುವುದು ಹಾಲು ಕುಡಿದಷ್ಟು ಸಂತೋಷವಾಯಿತು. ತಲಾತಲಾಂತರದಿಂದ ಉಳಿಸಿಕೊಂಡ ಬಂದ ಭೂಮಿ ಸಾಲಕ್ಕೆ ವಜಾ ಆದುದ್ದು ಹೆಂಡತಿ ಮಕ್ಕಳಿಗೆ ನುಂಗಲಾರದ ತುತ್ತಾಯಿತು. ಎಲ್ಲಾವನ್ನು ಕಳೆದುಕೊಂಡ ಗೂಳಪ್ಪನಿಗೆ ತನಗೇ ಅರಿವಿಲ್ಲದಂತೆ ಕಣ್ಣಿನಿಂದ ನೀರು ಹರಿಯತೊಡಗಿತು.

ಗ್ರಾಮೀಣರಲ್ಲಿ ದುಡಿದು ಬದುಕಬೇಕೆಂದುಕೊಂಡ ಗೂಳಪ್ಪನಂತಹ ಎಷ್ಟು ಕುಟುಂಬಗಳು ಇಂದಿಗೂ ಬೆಂಕಿಯಲ್ಲಿ ಬೆಂದು ತಮ್ಮ ಜೀವಮಾನವೇ ಕೊನೆಯಾಗುವುದನ್ನು ಕಾಣುತ್ತಿದ್ದೆವೆ. ರೈತನಿಗೆ ಭೂಮಿಯೇ ದೇವರು ಎಂದು ನಂಬಿದವನು. ಅದು ಮತ್ತೊಬ್ಬರ ವಶವಾದಾಗ ಆಗುವ ನಿರಾಶೆ, ನೋವು ಅವನನ್ನು ಸಾವಿಗೆ ಗುರಿಮಾಡುತ್ತದೆ. ಗೂಳಪ್ಪ ತನ್ನಪ್ಪನ ಕಾಲದ ಬಾವಿ ಬತ್ತಿ ಹೋಗಿ ಬರಿದಾದಗ ಆದ ನೋವಿನಿಂದ ಅದೇ ಬಾವಿಗೆ ತನ್ನ ಜೀವನ, ಜೀವ ಎಲ್ಲವನ್ನು ಹೀರಿಕೋ ಎಂದು ಭೂಮಿ ತಾಯಿಗೆ ಪ್ರಾಣ ಕೊಡುತ್ತಾನೆ.

ಇಂತಹ ಅಮಾಯಕ ರೈತರ ಸಾವು ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇವೆ. ಯಾವ ಸರ್ಕಾರವ ಏನೇ ಪರಿಹಾರ ನೀಡಿದರೂ, ರೈತನ ಸ್ಥಿತಿ ಕೆಳಮಟ್ಟದಲ್ಲಿಯೇ ಇದೆ. ದೇಶಕ್ಕೆ ಅನ್ನ ಕೊಡುವ ರೈತ ಇಂದು ಪ್ರತಿ ದಿನವೂ ಸಾಯುತ್ತಲೇ ಬದುಕು ಸಾಗಿಸುತ್ತಿದ್ದಾನೆ. ಇಂತಹ ಘಟನೆಗಳಿಂದ ಸಮಾಜದ ಪ್ರಗತಿಗೆ ಧಕ್ಕೆಯಾಗುತ್ತದೆ. ರೈತನ ಸ್ಥಿತಿ ಸುಧಾರಿಸಿ, ಗ್ರಾಮೀಣರಲ್ಲಿ ವ್ಯವಸಾಯದಿಂದ ಬದುಕು ನನಸಾದಾಗ ರೈತನ ಬದುಕು ಹಸನಾಗುತ್ತದೆ. ಹತ್ತಿರದಿಂದ ಕಂಡ ರೈತನ ಬದುಕು ಬವಣೆಯನ್ನು ಲೇಖಕರು ಮನ ಮುಟ್ಟುವಂತೆ ಚಿತ್ರಿಸಿದ್ದಾರೆ. ರೈತ ಪ್ರಗತಿ ಕಂಡರೆ ಸಮಾಜ ಪ್ರಗತಿ ಕಂಡಂತೆ ಎಂದು ತಿಳಿಸಿದ್ದಾರೆ. ವೇದಿಕೆಯಲ್ಲಿ ನಿಂತು ಮಾತಾನಾಡುವ ದುಷ್ಟ ರಾಜಕಾರಣಿಗಳ ಆಶ್ವಾಸನೆಯ ಮಾತುಗಳೇ ರೈತನಿಗೆ ಅವರಿಂದ ದೊರೆತ ಪರಿಹಾರ. ಇಂದು ಸಮಾಜ ಮುಂದುವರಿದು ಪ್ರಗತಿಯತ್ತ ಸಾಗಿದೆ ಎಂದರೆ ಅದು ರೈತನ ಹಿಂದಿರುವ ಶ್ರಮ ಎಂದೇ ಹೇಳಬೇಕು.

ಸಮಾಜದಲ್ಲಿ ಇಂದು ಬದಲಾವಣೆಯನ್ನು ಕಾಣುತ್ತಿದ್ದೇವೆ. ಆಧುನಿಕತೆಯ ಕಡೆ ಮುಖ ಮಾಡಿರುವ ಇಂದಿನ ಯುವಕರು ಎಲ್ಲಾವನ್ನು ಮರೆತು, ನಾಗರಿಕತೆಯನ್ನು ಮುಟ್ಟಿದ್ದೇವೆ ಎಂಬ ಮನೋಭಾವದಿಂದ ನಗರದ ಆಕರ್ಷಣೆಗೆ ಒಳಗಾಗಿ ಬದುಕುತ್ತಿದ್ದಾರೆ. ಸಮಾಜ ಉತ್ತಮ ಪ್ರಗತಿ ಹೊಂದಬೇಕಾದರೆ ಅದರ ಹಿಂದಿರುವ ರೈತನ ಬದುಕು ಉತ್ತಮವಾಗಿರಬೇಕು. ಆದರೆ ಇಂದು ಏನಾಗಿದೆ. ರೈತನ ಸ್ಥಿತಿ ಕೇಳುವವರೆ ಇಲ್ಲವಾಗಿದೆ. ಸತತ ಬರಗಾಲದ ದವಡೆಗೆ ಸಿಕ್ಕಿ ತತ್ತರಿಸಿ ಕೊನೆಗೆ ಸಂಸಾರವೇ ನಾಶವಾಗುತ್ತಿರುವ ರೈತನ ಶೋಚನೀಯ ಸ್ಥಿತಿಯನ್ನು **'ಬೆಂದು ಹೋದ ಬದುಕು'** ಕಥೆಯಲ್ಲಿ ಕಾಣಬಹುದು.

ಸತತವಾಗಿ ಬರಗಾಲದ ದವಡೆಗೆ ಸಿಕ್ಕಿ ಬದುಕುಲೂ ಆಗದೆ ಸಾಯಲೂ ಆಗದೆ ಬದುಕುತ್ತಿರುವ ರೈತನನ್ನು ನೋಡಿದರೆ, ಗ್ರಾಮೀಣರಲ್ಲಿ ರೈತ ಮುಂದೆ ಬೇಸಾಯ ಮಾಡುತ್ತಾನೆಯೇ ಎಂಬ ಸಂಶಯ ಮೂಡುತ್ತದೆ. ಬೆಳೆದ ಬೆಳೆಗೆ ಸರಿಯಾದ ಬೆಲೆ ಇಲ್ಲದೆ, ಹಾಗೆಯೇ ಮಳೆಯಿಲ್ಲದೆ ಎಲ್ಲಾವೂ ನಾಶವಾಗುತ್ತಿರು ದನ್ನು ನೋಡಿದರೆ ರೈತನ ಸ್ಥಿತಿ ತಿನ್ನಲು, ಅನ್ನವಿಲ್ಲದಂತ ಪರಿಸ್ಥಿತಿಯನ್ನು ಕಥೆಯಲ್ಲಿನ ಚಿಕ್ಕಣ್ಣನ ಕುಟುಂಬದಲ್ಲಿ ಕಾಣಬಹುದು. ಬೆಳೆದ ಬೆಳೆಯು ಮಳೆಯಿಲ್ಲದೆ ಒಣಗಿ ಕೈಗೆ ಬಂದ ತುತ್ತು ಬಾಯಿಗೆ ಬರದ ಹಾಗಾಗುತ್ತದೆ. ಬರಗಾಲ, ಹೆಂಡತಿ ಮಕ್ಕಳ ಹಸಿವು, ಕೊನೆಗೆ ಭೂಮಿಯನ್ನೇ ಮಾರುವ ಸ್ಥಿತಿಗೆ ತಲುಪುತ್ತದೆ. ತಾನು ಬೆಳೆದ ಬೆಳೆಯ ನಾಶ, ಬ್ಯಾಂಕ್ ಸಾಲದ ಚಿಂತೆಯಲ್ಲಿ ಕಾಲ ಕಳೆಯುತ್ತಿದ್ದವನಿಗೆ ಇದ್ದಕ್ಕಿದ್ದಂತೆ ಕ್ಯಾನ್ಸರ್ ರೋಗ ಬಂದು ಅದು ಬಂದವರು ಬದುಕುವುದಿಲ್ಲವೆಂದು ತಿಳಿದ ಬಡ ರೈತ ಚಿಕ್ಕಣ್ಣನಿಗೆ ಆಕಾಶವೇ ಕಳಚಿ ಬಿದ್ದಂತಾಯಿತು.

ಸಮಾಜದಲ್ಲಿ ಆಧುನಿಕತೆಯ ಸೊಗಡಿನಲ್ಲಿ ಬದುಕು ನಡೆಸುತ್ತಿರುವ ಜನರು ಜೀವನದ ಜೊತೆಗೆ ವ್ಯವಸಾಯದಲ್ಲೂ ಆಧುನಿಕತೆಯನ್ನು ಬಯಸುತ್ತಿದ್ದಾರೆ. ಇವೆಲ್ಲಾದರಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿಯೋ ಪ್ರಕೃತಿ ವಿಕೋಪಕ್ಕೆ ಹೋಗುತ್ತಿದೆ. ಇದರಿಂದ ರೈತನ ಸ್ಥಿತಿ ಚಿಂತಾಜನಕವಾಗಿದೆ.

ಯಾವ ಆಧುನಿಕತೆಯನ್ನು ಬಳಸದೆ ವ್ಯವಸಾಯ ಮಾಡುತ್ತಿದ್ದ ಹಿಂದಿನವರು ಸಮೃದ್ಧವಾದ ಬೆಳೆಯನ್ನು ಬೆಳೆದು ಬದುಕುತ್ತಿದ್ದರು. ಇಂದು ರೈತ ಬೇಸಾಯ ಮಾಡುವ ಆಸೆಯನ್ನೇ ಕಳೆದುಕೊಳ್ಳುತ್ತಿದ್ದಾನೆ. ಎಲ್ಲವು ರೋಗಗಳಿಗೆ ತುತ್ತಾಗಿ ಜೀವನ ಸಾಗಿಸುವುದೇ ಕಷ್ಟವಾಗಿದೆ. ಚಿಕ್ಕಣ್ಣನ ಸ್ಥಿತಿಯನ್ನು ನೋಡಿದರೆ ದುಡಿದು ಸಂಪಾದಿಸುವ ನಿರೀಕ್ಷೆಯಲ್ಲಿದ್ದವನಿಗೆ ರೋಗ ಬಂದದ್ದು ಸಮಾಜಕ್ಕೆ ತುಂಬಲಾರದ ನಷ್ಟವಾಗಿದೆ. ಎಲ್ಲದರಲ್ಲೂ ಬದಲಾವಣೆಯನ್ನು ಬಯಸುತ್ತಿರುವ ಮನುಷ್ಯ ಸಮಾಜದ ಅವನತಿಗೆ ಕಾರಣವಾಗುತ್ತಿದ್ದಾನೆ. ದೇಶಕ್ಕೆ ಅನ್ನ ಕೊಡುವ ರೈತನಿಗೆ ಇಂದು ರೋಗ ಬಂದಿರುವುದನ್ನು ನೋಡಿದರೆ ಮುಂದೆನಾಗಬಹುದೆಂಬ ಚಿಂತೆ ಹುಟ್ಟುತ್ತದೆ.

ಜೀವನದಲ್ಲಿ ಮಹಾದಾಸೆಯನ್ನು ಕಂಡಿದ್ದ, ಚಿಕ್ಕಣ್ಣ ರೋಗದಿಂದ ಬಳಲಿದರೂ, ತನ್ನ ಕಾಯಿಲೆಗೆ ಜಮೀನು ಮಾರಬೇಕೆಂದಾಗ ಹೌಹಾರಿದ. ತನ್ನ ಜೀವಕ್ಕಿಂತ ಮುಂದಿನ ಮಕ್ಕಳಿಗೆ ಭೂಮಿಯನ್ನು ಉಳಿಸಬೇಕೆಂಬ ಮನಸ್ಸು ಮಾಡುತ್ತಾನೆ. ತಾನು ಈ ಕಾಯಿಲೆಗೆ ತುತ್ತಾಗಿ ಬಳಲಿದರಿಂದ ತನ್ನ ಭೂಮಿ ಪರರ ಪಾಲಾಗುವುದನ್ನು ತಿಳಿದು ನೊಂದು, ಹತಶಾನಾಗಿ ತಾನೇ ಪ್ರಾಣ ಕಳೆದುಕೊಳ್ಳುವುದನ್ನು ಮುಖ್ಯವಾಗಿ ಕಾಣಬಹುದು.

ಗ್ರಾಮೀಣ ಪ್ರದೇಶದಲ್ಲಿ ಇಂದು ರೈತನ ಬದುಕು ಚಿಂತೆಯಲ್ಲಿ ಮುಳುಗಿ ಹೋಗಿದೆ. ದುಡಿದು ಸಂಪಾದಿಸುವ ರೈತನಿಗೆ ರೋಗ ಬಂದಿರುವುದು, ಬೆಳೆದ ಬೆಳೆಗೆ ಸಾಲದ ಹೊರೆ, ಬ್ಯಾಂಕ್ ಸಾಲದಿಂದ ಪ್ರತಿದಿನವೂ ಆತ್ಮಹತ್ಯೆಯಂತಹ ಘಟನೆಗಳು ನಡೆಯುತ್ತಲೇ ಇವೆ. ರೈತನ ಬದುಕು ಸುಧಾರಿಸಿ, ಬೆಳೆದ ಬೆಳೆಗೆ ಸರ್ಕಾರ ಸರಿಯಾದ ಬೆಲೆಕೊಟ್ಟು, ಅವನ ಸಂಕಷ್ಟಗಳಿಗೆ ಪರಿಹಾರವನ್ನು ಒದಗಿಸಬೇಕು. ಅಂದು ಅವನ ಬದುಕು ಸಾರ್ಥಕವಾಗಿ ಸಮಾಜ ಏಳಿಗೆಯನ್ನು ಕಾಣಲು ಸಾಧ್ಯ.

'ತುಮುಲ' ಕಥೆಯಲ್ಲಿನ ತಮ್ಮಣ್ಣನ ಪರಿಸ್ಥಿತಿಯು ಸಹ ಶೋಚನೀಯ ಸ್ಥಿತಿಯಲ್ಲಿ ಇರುವುದನ್ನು ಕಾಣಬಹುದು. ಬದುಕಿ ಸಂಪಾದಿಸುವ ಆಸೆಯಿಂದ ಇದ್ದವನಿಗೆ ತನಗೆ ತಗುಲಿದ ಕಾಯಿಲೆಯಿಂದ ನೊಂದು ಹತಶನಾಗುತ್ತಾನೆ. ಎಲ್ಲೋ ಒಂದು ಕಡೆ ಬದುಕಬಹುದೆಂಬ ಆಸೆಯಿಂದ ಇದ್ದವನಿಗೆ ಅವನ ಮನಸ್ಸಿನಲ್ಲಿದ್ದ ತುಮುಲವನ್ನು ಯಾರೂ ಅರಿಯಲಾರದೆ ಹೋದರು. ಇದರಿಂದ ಅವನ ಮನಸ್ಸಿನಲ್ಲಿ ಕಾರ್ಮೋಡ ಆವರಿಸುತ್ತದೆ. ಹಿಂದೆಲ್ಲಾ ವ್ಯವಸಾಯ ಮಾಡಿ ಬದುಕು ನಡೆಸುತ್ತಿದ್ದವರು ಆಸ್ಪತ್ರೆಯ ಮುಖವನ್ನೇ ನೋಡಿರಲು ಸಾಧ್ಯವಿಲ್ಲ. ಅವರ ಬದುಕು ಆರೋಗ್ಯವಾಗಿ ಅಷ್ಟು ಸಮೃದ್ಧಿಯಿಂದ ಕೂಡಿತ್ತು. ಇಂದು ಗ್ರಾಮೀಣರಲ್ಲಿ ಆಧುನಿಕತೆಯ ಪ್ರವೇಶದಿಂದ ಎಲ್ಲವೂ ರೋಗಕ್ಕೆ ಬಲಿಯಾಗುತ್ತಿವೆ. ಹಿಂದೆಲ್ಲಾ ಬೆಳೆಗೆ ರೋಗ ತಗುಲಿದನ್ನು ನೋಡಿ ರೈತ ಕಂಗಲಾಗಿದ್ದ. ಆದರೆ ಇಂದು ಆ ರೋಗ ರೈತನಿಗೆ ಕಾಣಿಸಿಕೊಂಡಿರುವುದನ್ನ ನೋಡಿದರೆ ರೈತನ ಸ್ಥಿತಿ ಚಿಂತಾಜನಕವಾಗಿದೆ. ಇದೇ ರೀತಿಯಲ್ಲಿ ರೈತ ಸಾವಿಗೆ ತಲೆಯೊಡ್ಡಿದರೆ ಮುಂದೆ ರೈತನನ್ನು ಕಳೆದುಕೊಳ್ಳಬೇಕಾದ ಪರಿಸ್ಥಿತಿ ಒದಗಬಹುದು. ಪ್ರತಿ ಹಂತದಲ್ಲೂ ರೈತ ಸೋಲನ್ನು ಕಾಣುತ್ತಿದ್ದಾನೆ. ಇವೆಲ್ಲದರಿಂದ ರೈತ ಪರಿಹಾರ ಕಂಡು ದೃಢವಾಗಿ ನಿಂತಾಗ ಸಮಾಜ ಅಭಿವೃದ್ಧಿ ಕಾಣುತ್ತದೆ.

ಸಮಾಜದಲ್ಲಿ ಮೋಸ ವಂಚನೆಗಳೇ ಹೆಚ್ಚಾಗಿ ತಾಂಡವವಾಡುತ್ತಿವೆ. ಮೇಲ್ವರ್ಗದವರ ಕೈಕೆಳಗೆ ಬದುಕುತ್ತಿರುವ ಸಾಮಾನ್ಯ ಜನರನ್ನ ಇಂದಿಗೂ ಕಾಣಲಾಗುತ್ತದೆ. ಗ್ರಾಮೀಣ ಸಮಾಜದಲ್ಲಿ ಬದುಕುತ್ತಿರುವ ರೈತನನ್ನು ವಂಚಿಸಿ ಪರರು ಬಂದು ತಮ್ಮ ಅಸ್ಥಿತ್ವವನ್ನು ಸ್ಥಾಪಿಸಲು ರೈತನನ್ನು ಹಾದಿ ತಪ್ಪಿಸುತ್ತಿದ್ದಾರೆ. ರೈತನಿಗೆ ಹಣದಾಸೆ ತೋರಿಸಿ ಬೆಳೆ ಬೆಳೆಯುವ ಭೂಮಿಯಲ್ಲಿ ಫ್ಯಾಕ್ಟರಿ ಕಟ್ಟಿ ಪರರು ಬಂದು ತಮ್ಮ

ಅಸ್ಥಿತ್ವವನ್ನು ಸ್ಥಾಪಿಸಿಕೊಳ್ಳುತ್ತಿದ್ದಾರೆ. ಇದರಿಂದ ರೈತ ಇಂದಿಗೂ ಯಾವ ರೀತಿಯಲ್ಲಿ ಮೋಸ ವಂಚನೆಗೆ ಗುರಿಯಾಗಿದ್ದಾನೆ ಎಂಬುದನ್ನು **'ಬೆನ್ನು ಮೂಳೆ ಮುರಿದವರು'** ಕಥೆಯಲ್ಲಿ ಕಾಣಲಾಗುತ್ತದೆ.

ತಾತ ಮುತ್ತಾತರ ಕಾಲದಿಂದ ಉಳಿಸಿಕೊಂಡು ಬಂದ ಭೂಮಿಯನ್ನು ನಂಬಿ ಜೀವನ ನಡೆಸುತ್ತಿದ್ದ ರೈತ ಇಂದು ಬದಲಾವಣೆಯ ಕಡೆ ಧಾವಿಸುತ್ತಿರುವುದನ್ನು ಕಾಣುತ್ತಿದ್ದೇವೆ. ಆಧುನಿಕತೆಯನ್ನು ನೋಡಿ ತಾವು ನಂಬಿಕೊಂಡು ಬಂದ ಹಿಂದಿನ ನಂಬಿಕೆಗಳಂತೆ 'ಹುಟ್ಟುದ ದೇವರ್ ಹುಲ್ಲು ತಿನ್ನಸನೆ' ಎಂಬಂತೆ ಭೂಮಿಯನ್ನು ಮಾರಿಕೊಂಡು ಪರಾವಲಂಬಿಗಳಾಗುತ್ತಿದ್ದಾರೆ. ಕಥೆಯಲ್ಲಿ ಬರುವ ಕೊನ್ನಾರಯ್ಯನ ಅಪ್ಪ ಕೆಂಪಗಿರಿ ಅವಿದ್ಯಾವಂತ. ಒಬ್ಬ ಬಡ ರೈತ ಒಂದೇ ಕಡೆ ಇದ್ದ ಐದು ಎಕರೆ ಹೊಲವನ್ನು ಮಾರಿದ್ದು ಮಗನಿಗೆ ಬರಸಿಡಿಲು ಬಡಿದಂತಾಗುತ್ತದೆ. ಇದರಿಂದ ಜನರಲ್ಲಿ ತಿಳುವಳಿಕೆ, ಮೂಡಿಸಿ ರೈತರಲ್ಲಿ ಭೂಮಿಯನ್ನು ಮಾರಬೇಡಿ, ಮಾರಿದರೆ ನಾಳೆ ಇನ್ಯಾರೋ ಊರಿಗೆ ಬಂದು ನೆಲೆಸುತ್ತಾರೆ ಎಂಬ ಅರಿವು ಮೂಡಿಸುತ್ತಾನೆ.

ರಸ್ತೆ ಪಕ್ಕದಲ್ಲಿದ್ದರೆ, ಎಕರೆಗೆ ಮೂರುವರೆ ಲಕ್ಷ ಕೊಡುತ್ತೇವೆ ಎಂಬ ಹಣದಾಸೆಯನ್ನು ತೋರಿಸಿ ರೈತನನ್ನು ಕೆಳಮಟ್ಟಕ್ಕೆ ತುಳಿಯುವ ಮತ್ತು ತಮ್ಮ ಅಸ್ಥಿತ್ವವನ್ನು ಸ್ಥಾಪಿಸುವ ಸಲುವಾಗಿ ಅವರಲ್ಲಿ ಆಧುನಿಕತೆಯನ್ನು ಮೂಡಿಸುತ್ತಿದ್ದಾರೆ. ರೈತನಾಗಿ ಹುಟ್ಟಿ ದುಡಿದು ಬದುಕುವ ಜನರಿಗೆ ತಾವು ತಮ್ಮತನವನ್ನೇ ಕಳೆದುಕೊಳ್ಳುತ್ತಿದ್ದೇವೆ ಎಂಬ ತಿಳುವಳಿಕೆ ಇಲ್ಲವಾಗಿದೆ. ಆಧುನಿಕತೆಯ ಪ್ರಭಾವದಿಂದ ಭೂಮಿಯನ್ನು ಮಾರುವ ಆಲೋಚನೆಗಳು ಜೊತೆಗೆ ತಾವು ನಂಬಿಕೊಂಡು ಬಂದ ಆಚರಣೆಗಳಿಂದ ಹೇಗೋ ದೇವರು ಕಾಪಾಡುತ್ತಾನೆ ಎಂಬುದು ರೈತರಲ್ಲಿರುವ ಮನೋಭಾವ, ಎಲ್ಲರಿಗೂ ಆದಂಗೆ ನಮ್ಗೂ ಆಯ್ತದೆ ಎಂಬುದು ನೆಲೆಯೂರಿದೆ.

ಸಮಾಜದಲ್ಲಿ ಹೊಲ ಮನೆ, ದನಕರು, ತೋಟ, ತುಟಿಕೆ ವ್ಯವಸಾಯವನ್ನು ಅವಲಂಬಿಸಿ ರೈತ ಬದುಕುತ್ತಿದ್ದಾನೆ. ದೇಶಕ್ಕೆ ಅನ್ನ ಕೊಡುವ ರೈತ ಇಂದು ಬದಲಾವಣೆಯಾಗುತ್ತಿದ್ದಾನೆ. ಜೊತೆಗೆ ಸಾಲದ ತೊಂದರೆಯಲ್ಲಿ ನರಳುತ್ತಿದ್ದಾನೆ. ಕೊನೆಗೆ ಜೀವನವೇ ಬೇಡವೆಂಬ ನಿರಾಶೆಯಿಂದ ಪ್ರಾಣಕೊಡುತ್ತಿರುವ ಪ್ರಸಂಗಗಳನ್ನು ಕಾಣಲಾಗುತ್ತಿದೆ. ಇದರ ಜೊತೆಗೆ ಭೂಮಿಯನ್ನೇ ಮಾರಿ ನಗರದತ್ತ ಸಾಗುತ್ತಿರುವುದನ್ನು ಕಾಣಬಹುದು. ಕೆಲವರಿಗೆ ಅದರಲ್ಲೂ ಭೂಮಿಯನ್ನೇ ದೇವರೆಂದು ನಂಬಿ ಬದುಕುತ್ತಿದ್ದವರಿಗೆ 'ಭೂಮಿ ತಾಯನ್ನು ಮಾರುವುದು ಒಂದೇ ಹೆತ್ತ ತಾಯಿಗೆ ದ್ರೋಹ ಬಗೆಯುವುದೂ ಒಂದೇ' ಎಂದು ತಿಳಿಯುತ್ತಾರೆ. ಮುಂದೆ ಇದೇ ರೀತಿಯಾದರೆ ದನಕರುಗಳ ಸ್ಥಿತಿ, ಜೀವನದ ಪರಿಸ್ಥಿತಿಯನ್ನು ನೆನೆದು, ಪ್ರಪಂಚದ ತುಂಬ ಫ್ಯಾಕ್ಟರಿಗಳಾದರೆ ಮುಂದೆ ತಾತ ಮುತ್ತಾತರ ಹೆಜ್ಜೆ ಗುರುತು, ಸಮಾಧಿಗಳು ಎಲ್ಲವನ್ನು ಇತಿಹಾಸದಲ್ಲಿ ಕೇಳುವಂತೆ ಆಗುವುದನ್ನು ನೆನೆದರೆ ಗ್ರಾಮೀಣ ಜೀವನದ ಬದುಕು ಏನಾಗಬಹುದೆಂಬ ತಲ್ಲಣ ಉದ್ಭವಿಸುತ್ತದೆ.

ಹೀಗೆ ಇನ್ನೊಬ್ಬರ ಮಾತಿಗೆ ಮರುಳಾಗಿ ಹಣದಾಸೆಯಿಂದ ಭೂಮಿಯನ್ನು ಮಾರುತ್ತಿರುವ ರೈತರಿಗೆ ವಿದ್ಯಾವಂತನಾದ ಕೊನ್ನಾರಯ್ಯ "ಇದರ ಬಗ್ಗೆ ಹೋರಾಟ ಮಾಡಿ ಲ್ಯಾಂಡ್ ಮಾಫಿಯಾಗಳನ್ನು ಹೊರಕ್ಕೆ ಹಾಕಿ ಭೂಮಿ ನಮ್ಮದು, ಪರರಿಗೆ ಇದರ ಮೇಲೆ ಹಕ್ಕು ಸ್ಥಾಪಿಸಲು ಬಿಡುವುದಿಲ್ಲವೆಂದು ದಿನ ಚರ್ಚೆ ನಡೆಸುತ್ತ ರೈತರಿಗೆ ಜಮೀನು ಮಾರಬೇಡಿ ಎಂದು ಒಂದು ಆಂದೋಲನ ಮಾಡಿಕೊಂಡು, ದಿನ ಒಂದೊಂದು ಹಳ್ಳಿಗೆ ಹೋಗಿ ಜನರಲ್ಲಿ ಜಾಗೃತಿ ಮೂಡಿಸಿ 'ಜನನಿ ಜನ್ಮ ಭೂಮಿಷ್ಚೆ ಸ್ವರ್ಗಾದಪಿ ಗರೀಯಸೆ' ಎಂದು ಕರೆಕೊಟ್ಟು, ಅಲ್ಲಲ್ಲಿ ಕರಪತ್ರ ಅಂಟಿಸಿ ಯಾರೂ ಜಮೀನು ಮಾರಬೇಡಿ, ಮಾರಿದರೆ ನಾಳೆ ಇನ್ಯಾರೋ ಈ ಊರಿಗೆ ಬಂದು ನೆಲೆಸುತ್ತಾರೆ. ಆಗ ನಿಜಕ್ಕೂ ನಾವೇ

ಪರಾವಲಂಬಿಗಳಾಗುತ್ತೇವೆಂದು ತಿಳಿಸುತ್ತಾನೆ". ಈ ಮಾತುಗಳನ್ನು ಗಮನಿಸಿದಾಗ ನಮ್ಮ ಭೂಮಿಯನ್ನು ಪರರಿಗೆ ಕೊಟ್ಟು ನಾಳೆ ನಾವೇ ಇನ್ನೊಬ್ಬರ ಆಶ್ರಯವನ್ನು ಬಯಸುವ ಪರಿಸ್ಥಿತಿಗೆ ತಲುಪಬೇಕಾಗುತ್ತದೆ. ನಮ್ಮ ಜಾಗಕ್ಕೆ ಬೇರೆಯವರು ಬಂದು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡು ನಮ್ಮನ್ನು ನಾವು ಹುಟ್ಟಿ ಬೆಳೆದ ಜನ್ಮ ಕೊಟ್ಟ ಭೂಮಿತಾಯಿಯನ್ನು ದೂರ ಮಾಡುವ ಮುನ್ನ ಎಚ್ಚರಿಕೆಯಿಂದ ಅದನ್ನು ಉಳಿಸಿಕೊಳ್ಳಬೇಕೆಂಬ ಆಶಯ ವ್ಯಕ್ತವಾಗುತ್ತದೆ.

ಹಿಂದಿನ ತಲೆಮಾರಿನವರು ಭೂಮಿಯ ಜೊತೆ ಉತ್ತಮವಾದ ಸಂಬಂಧವನ್ನು ಹೊಂದಿದ್ದರು. ಜೊತೆಗೆ ಅವರವರಲ್ಲಿ ಆತ್ಮೀಯತೆ ಎಂಬುದು ಇತ್ತು. ಇಂದು ಎಲ್ಲವು ಆಧುನಿಕತೆಯ ಬಲೆಗೆ ಸಿಕ್ಕಿ ಪ್ರೀತಿ, ವಿಶ್ವಾಸ ಆತ್ಮೀಯತೆ ಕಡಿಮೆಯಾಗುತ್ತಿದೆ. ಕಾರಣ ಇಂತಹ ಹಣದಾಸೆಗೆ ಭೂಮಿಯನ್ನು ಮಾರಿ, ಮೋಸ, ವಂಚನೆಗೆ ಒಳಗಾಗುತ್ತಿರುವ ರೈತ ಹಿಂದಿನಿಂದ ಉಳಿಸಿಕೊಂಡು ಬಂದ ಭೂಮಿಯಲ್ಲಿ ಮತ್ತೊಬ್ಬರ ಅಪ್ಪಣೆ

ಪಡೆದು ಆಶ್ರಯ ಬಯಸುವಂತೆ ಆಗುತ್ತಿದೆ. ಕಥೆಯಲ್ಲಿನ ಕೊನ್ನಾರಯ್ಯ ತಾನು ಊರ ಕಡೆ ಬರದೆ ತಪ್ಪು ಮಾಡಿದೆನೆಂದು ಕೊಳ್ಳುತ್ತಾನೆ. ಎಲ್ಲೊ ಒಂದು ಕಡೆ ತಾನು ಊರಲ್ಲಿದ್ದಿದ್ದರೆ ತಾತನ ಕಾಲದ ಜಮೀನು ಉಳಿಯುತ್ತಿತ್ತು ಎಂಬ ಮಾತುಗಳು ಅವನನ್ನು ನಿರಾಶೆಗೊಳಿಸುತ್ತವೆ. ತನ್ನ ಹೊಲದಲ್ಲೆ ಪಾಯ ತೆಗೆಯುತ್ತಿದ್ದಾಗ ಇದ್ದಕಿದ್ದಂತೆ "ಜಮೀನಿನಿಂದ ಮನುಷ್ಯನಾಕಾರದ ಮೂಳೆ ಎದ್ದು ಬಂದುದ್ದುನ್ನ ಕಂಡ ಕೊನ್ನಾರಯ್ಯ ಅದು ತನ್ನ ತಾತನದೆಂದು ಅದರ ಕಡೆ ನೋಡುತ್ತಾನೆ. ಮೂಳೆಯನ್ನ ಹಿಡಿದು ಸುತ್ತಲಿದ್ದ ಮಣ್ಣನ್ನ ಸರಿಸಿ ನಿಧಾನವಾಗಿ ಈಚೆಗೆಳೆದು ನೆಟ್ಟಗೆ ನಿಲ್ಲಿಸುತ್ತಾನೆ. ಆದರೆ ಅದು ಬಾಗಿಕೊಂಡಿತ್ತು ಮತ್ತೆ ನೆಟ್ಟಗೆ ನಿಲ್ಲಿಸಿದ ಮತ್ತೆ ಬಾಗಿಕೊಂಡಿತು. ನಿಧಾನವಾಗಿ ಸವರುತ್ತಾ ನೋಡಿದ, ಅದರ ಬೆನ್ನುಮೂಳೆ ಮುರಿದು ಹೋಗಿತ್ತು ಹಾಗೆಯೇ ಸುತ್ತ ನಿಂತವರೆಲ್ಲಾರ ಕಡೆ ನೋಡುತ್ತಾನೆ. ಎಲ್ಲಾರು ಬಗ್ಗಿ ಕೆಲಸ ಮಾಡುತ್ತಿದ್ದಾರೆ ನಿಧಾನವಾಗಿ ಅಂದುಕೊಂಡ, ಎಲ್ಲಾರ ಬೆನ್ನುಮೂಳೆ ಮುರಿದು ಹೋಗಿದೆ. ಮತ್ತೆ ಎಂದಾದರೂ ಎದ್ದು ನಿಲ್ಲಲು ಸಾಧ್ಯವೆ...? ಎಂದುಕೊಳ್ಳುತ್ತಾನೆ.

ಸಮಾಜದಲ್ಲಿ ಬದುಕುತ್ತಿರುವ ಮನುಷ್ಯ ಅದರಲ್ಲೂ ಗ್ರಾಮೀಣರಲ್ಲಿ ಮೇಲ್ವರ್ಗದವರು ಹಿಂದಿನಿಂದಲೂ ಕೆಳವರ್ಗದ ಜನರನ್ನ ತುಳಿದು ಬದುಕು ನಡೆಸುತ್ತಿರುವುದನ್ನು ಕಾಣುತ್ತಲೇ ಬಂದಿದ್ದೇವೆ. ವ್ಯವಸಾಯ ಮಾಡಿ ಬದುಕು ಕಾಣುವ ರೈತನ ಸ್ಥಿತಿ ಇಂದು ಶೋಚನೀಯವಾಗಿದೆ. ಏನಾದರೂ ಮಾಡಿ ತನ್ನ ತಾತನ ಸಮಾಧಿ ಇರುವ ಭೂಮಿಯನ್ನಾದರೂ, ಉಳಿಸಿಕೊಳ್ಳುವ ಹಂಬಲದಿಂದ ಇದ್ದ ಕೊನ್ನಾರಯ್ಯನಿಗೆ ಕಣ್ಣ ಮುಂದೆಯೆ, ತನ್ನ ಹೊಲದಲ್ಲಿ ಫ್ಯಾಕ್ಟರಿಗಳೇಳುತ್ತಿದ್ದುದ್ದು ಮನಸ್ಸಿಗೆ ಅಪಾರವಾದ ನೋವುಂಟುಮಾಡಿತು. ತನ್ನ ತಾತನ ಮೂಳೆಯಂತೆ ಇಂದಿನ ರೈತನ ಮೂಳೆಯು ಬಾಗಿಕೊಂಡು, ಮಳೆ ಬೆಳೆ ಇಲ್ಲದೆ ನೆಲಕ್ಕೆ ಕುಸಿಯುವ ಸ್ಥಿತಿಗೆ ಬಂದು ನಿಂತಿದೆ. ಹಿಂದಿನಿಂದಲೂ ಶೋಷಣೆ, ಮೋಸ, ವಂಚನೆಗಳಿಗೆ ಬಲಿಯಾಗಿ ಜೀವಿಸುತ್ತಿದ್ದ ಜನರು ಸತ್ತರೂ ಸಹ ಅವರ ಮೂಳೆಗಳು ಬಾಗಿಕೊಂಡಿರುವುದು ರೈತನ ನೋವು ಮತ್ತುಅಸಹಾಯಕ ಸ್ಥಿತಿಯನ್ನು ಎತ್ತಿ ತೋರಿಸುತ್ತದೆ. ಇಂದಿಗೂ ಎಲ್ಲರ ಮೂಳೆ ಬಾಗಿಕೊಂಡಿದೆ. ಎಂದಾದರು ಅದು ಎದ್ದು ನಿಲ್ಲಲು ಸಾಧ್ಯವೇ ಎಂಬುದು ಪ್ರಶ್ನೆಯಾಗಿ ಕಾಡುತ್ತಿದೆ.

ರೈತ ದೇಶದ ಶಕ್ತಿಯಂತೆ, ಅವನ ಬದುಕು ಉತ್ತಮಗೊಂಡಲ್ಲಿ ಸಮಾಜ ಅಭಿವೃದ್ಧಿಯನ್ನು ಕಾಣಲು ಸಾಧ್ಯ. ತಾವು ಉಳಿಸಿಕೊಂಡು ಬಂದ ಭೂಮಿಗೆ ಪರರು ಆಕ್ರಮಿಸಿ ತಮ್ಮನ್ನೇ ಹೊರಹಾಕುವ ಸನ್ನಿವೇಶ ರೈತ ಇಂದು ಎದುರಿಸುತ್ತಿರುವ ಸಮಸ್ಯೆಯಾಗಿದೆ. ರೈತ ಬೆಳೆದ ಬೆಳೆಗೆ ಸರಿಯಾದ ಬೆಲೆ

ಕೊಟ್ಟು ರೈತನಿಗೆ ಹೆಚ್ಚಿನ ಆದಾಯ ನೀಡಬೇಕು. ರೈತ ದೃಢವಾಗಿ ನಿಂತಾಗ ತಾನು ಉಳಿಸಿಕೊಂಡು ಬಂದ ಭೂಮಿಯಲ್ಲಿ ಬದುಕು ನಡೆಸಲು ಸಾಧ್ಯವಾಗುತ್ತದೆ. ಹಣದಾಸೆಯಿಂದ ಭೂಮಿಯನ್ನು ಮಾರಿ ಬೇರೆಯವರು, ಅಲ್ಲಿಗೆ ಬಂದು ತಮ್ಮ ಅಧಿಕಾರದ ಬೀಜವನ್ನ ಬೀತ್ತುತ್ತಿರುವುದು ಶೋಚನೀಯವಾದ ಸಂಗತಿಯಾಗಿದೆ. ಇದೆಲ್ಲದರಿಂದ ರೈತ ಮುಕ್ತಿಗೊಳ್ಳುವಂತೆ ಮಾಡಿ ಆತನಲ್ಲಿ ಆತ್ಮವಿಶ್ವಾಸ ಮೂಡಿಸಬೇಕು. ಅಂದು ಗ್ರಾಮೀಣ ಬದುಕು ಸಾರ್ಥಕವೆನಿಸುತ್ತದೆ ಎಂಬುದನ್ನು ಲೇಖಕರು ವ್ಯಕ್ತಪಡಿಸುತ್ತಾರೆ.

ಬರಗಾಲದ ದವಡೆಗೆ ಸಿಕ್ಕಿ ಮಳೆ ಬೆಳೆಯಿಲ್ಲದೆ, ವ್ಯವಸಾಯದಲ್ಲಿ ಬೆಂದು ಹತಾಶನಾಗಿ ವಿಧಿಯಿಲ್ಲದೆ ಭೂಮಿ ತಾಯಿಗೆ ಪ್ರಾಣಕೊಡುವ ಜೊತೆಗೆ ಇಡೀ ಕುಟುಂಬವೇ ನಿರ್ನಾಮವಾಗುವ ಪ್ರಸಂಗವನ್ನು **'ಗಾಂಧಿಯ ನಾಡಲ್ಲಿ ಹುಟ್ಟಿದವರು'** ಕಥೆಯಲ್ಲಿ ಕಾಣಬಹುದು.

ಸಿದ್ದೇಗೌಡ ಹುಟ್ಟಿನಿಂದ ಬಡವನೇನೂ ಅಲ್ಲ. ಆದರೂ ಸಹ ಬೇರೆಯವರಿಗಿಂತ ಹೆಚ್ಚು ಬೆಳೆಯಬೇಕೆಂಬ ಹಂಬಲದಿಂದ ದುಡಿಯುತ್ತಿದ್ದ. ನೀರು ಇಲ್ಲದೇ, ಬೋರು ಹಾಕಿಸುವ ವ್ಯವಸ್ಥೆ ಮಾಡಿದ ಕಲ್ಲು ಭೂಮಿ ಬರುವುದಿಲ್ಲವೆಂದು ಗೊತ್ತಾಯಿತು. ತಾನು ನಂಬಿದ್ದ ದೇವರನ್ನು ಕೇಳಿ ಬಂದ ಸಮೃದ್ಧವಾಗಿ ನೀರು ಬರುತ್ತದೆ ಎಂದು ಜಾಗ ಗುರುತು ಹಾಕಿಕೊಟ್ಟ ಮೇಲೆ ಹಿಗ್ಗಿ ಹೋದ, ಕೊನೆಗೆ ಎಲ್ಲೂ ನೀರು ಬರದಿದ್ದಾಗ ಕಂಗಲಾಗಿ ಕುಳಿತ. ಇದ್ದ ಹಣವೆಲ್ಲಾ ಖರ್ಚಾಯಿತು. ಮೈ ತುಂಬಾ ಸಾಲವಾಗಿ ಬಂದ ಆದಾಯ ಸಾಕಾಗದೆ ಸಾಲದಲ್ಲಿ ಮುಳುಗಿ ಜೀವನವೇ ಬೇಡವಾಯಿತು.

ಸಮಾಜದಲ್ಲಿ ರೈತ ಪ್ರತಿದಿನವು ಸಾವಿಗೆ ಬಲಿಯಾಗುತ್ತಿದ್ದಾನೆ. ಜೀವನವೇ ಬೇಡವೆನಿಸಿ ಕೊನೆಗೆ ಹತಾಶನಾಗಿ ಈ ರೀತಿಯಲ್ಲಿ ನೇಣಿಗೆ ಕೊರಳೊಡ್ಡಿದ ಸಿದ್ದೇಗೌಡನಂತಹವರು ಗ್ರಾಮೀಣ ಪ್ರದೇಶದಲ್ಲಿ ಈ ಪರಿಸ್ಥಿತಿಯನ್ನು ಎದುರಿಸುತ್ತಲೇ ಇದ್ದಾರೆ. ಸಿದ್ದೇಗೌಡನ ಸಾವು ಹೆಂಡತಿಗೆ ಆಕಾಶ, ಭೂಮಿ ಒಂದೇ ಬಾರಿಗೆ ನುಂಗಬಾರದೇ ಎನಿಸಿತು. ಗಂಡನ ಸಾಲ ತನ್ನ ಮೇಲೆ ಬಿದ್ದಿತು. ರೈತನ ಸಾವಿಗೆ ಪರಿಹಾರ ಒದಗಿಸುವ ರಾಜಕೀಯ ವ್ಯಕ್ತಿಗಳು, ತಾವು ಸತ್ತವರ ದುಃಖದಲ್ಲಿ ಸಹಭಾಗಿಗಳಂತೆ ನಟಿಸಿ ಶಾಲನ್ನು ಕಣ್ಣಿಗೊತ್ತಿಕೊಂಡು ಹೋಗುವವರನ್ನು ಕಾಣಬಹುದು. ಊರಿನಲ್ಲಿ ಪ್ರಕೃತಿ ವಿಕೋಪದಿಂದ ಮಳೆಯಾಗದೆ, ಇರುವುದಕ್ಕೆ ಸತ್ತ ಸಿದ್ದೇಗೌಡನ ಸಾವಿನಿಂದ ಊರಿಗೆ ಆಪತ್ತು ಒದಗಿರಬಹುದೆಂಬ, ನಂಬಿಕೆಯಿಂದ ಕೆಲವೊಂದು ಪೂಜೆಗಳನ್ನು ಮಾಡಿಸುತ್ತಾರೆ.

ಸಿದ್ದೇಗೌಡನ ಹೆಂಡತಿ ಸರ್ಕಾರ ಕೊಟ್ಟ ಹಣವೆಲ್ಲ ಎಲ್ಲಿ ಹೇಗೆ ಖರ್ಚಾಯಿತೆಂದು ಚಿಂತಿಸುತ್ತಿದ್ದಾಗ, ಗೌಡರ ಮನೆಯಿಂದ ಬಂದ ಹಾಳು 'ಯಾಕೋ ಏನೋ ಕಾಣೆ, ಗೌಡ್ರು ಕರೀತಾರೆ' ಎಂದಾಗ ಚಿಕ್ಕಮ್ಮನಿಗೆ ಮತ್ತೊಂದು ಆಘಾತ ಎದುರಾಯಿತು. ಗಂಡ ಮಾಡಿದ ಸಾಲ ತೀರಿದೆ ಎಂದುಕೊಂಡಿದ್ದವಳಿಗೆ ಗೌಡ್ರು "ಏನೋ ಐನೂರು ಸಾವ್ರನೋ ಆಗಿದ್ರೆ ಗಂಡ ಸತ್ಮಂಡೆ ಬದಿಕೊಳ್ಳಲಿ ಅಂತ ಬಿಟ್ಬುಡ್ಬೋದಿತ್ತು. ಆದರೆ ಮೂವತ್ತು ಸಾವಿರಕ್ಕೇನು ಮಾಡೀಯ? 'ಏನು ಮಾಡುವುದು ನೀವೆ ಹೇಳಿ ನಿಮ್ಮಾ್ಪದ' ಅಂದಳು. ನಾನೇಳೊದೇನಿದ್ದತು. ಸರ್ಕಾರದ ದುಡ್ಡು ಬಂದಾಗ ಸಾಲ ತೀರಿಸದೆ ಈಗೇಳಿದ್ರೆ ಎಂಗೆ? ನೀನ್ ಸಾಲ ತೀರ್ಸೊಗಂಟ ನಿಮ್ಮಟ್ಟಿ, ಮತ್ತೆ ಹುಲ್ಲಿಚ್ಲು ಎಲ್ಲಾನು ನನ್ನೆಸರ್ಗೆ ಭೋಗ್ಯಕ್ಕಾಕು. ಯಾವಾಗ ದುಡ್ಡು ಕೊಟ್ಬುಟ್ಟಿ ಬುಡಿಸ್ಕೋತೀಯಾ ಅವತ್ತು ನಿನ್ನ ಕಾಗದ ಕೊಡ್ತೀನಂತ" ಈ ಮಾತುಗಳನ್ನು ಗಮನಿಸಿದ ಚಿಕ್ಕಮ್ಮನ ಕಣ್ಣುಗಳು ತೇವವಾದವು. ನಿನ್ನೆ ಮೊನ್ನೆಯವರೆಗೂ ಕಾಕಾ ಎಂದು ಕಾಗೆಗಳ ಹಾಗೆ ಮೊರೆಯುತ್ತಿದ್ದವರ್ಯಾರೂ ಕಾಣಲಿಲ್ಲ. ಎಲ್ಲವನ್ನು ನೆನೆದು ಹತಾಶಳಗುತ್ತಾಳೆ. ಮನೆಯಲ್ಲಿದ್ದ ಔಷಧಿ ಬಾಟಲಿಗಳು ಅವಳನ್ನು ನೋಡಿ ಅಣಕಿಸುತ್ತಿದ್ದವು. ಅವುಗಳಿಂದ ತನ್ನ ಸಮಸ್ಯೆಗೆ ಪರಿಹಾರ ಕಂಡು ಕೊಂಡಳು.

ಸರ್ಕಾರ ಸತ್ತ ರೈತನಿಗೆ ಪರಿಹಾರವನ್ನು ಕೊಡುವುದರ ಬದಲು ಆತ ಬದುಕಿರುವಾಗ ಸಹಾಯ ಒದಗಿಸಬೇಕು. ಅವನಿಗೆ ವ್ಯವಸಾಯಕ್ಕೊಂದು ಪರಿಹಾರವನ್ನು ಸೂಚಿಸಿ ರೈತನನ್ನು ಉಳಿಸಿ ಬೆಳೆಸುವ ಪ್ರಯತ್ನ ಮಾಡಬೇಕು. ರೈತನಿಗೆ ಎಲ್ಲಾ ವಿಧದಲ್ಲೂ ಸಹಕಾರವಾಗುವಂತೆ ಯೋಜನೆಗಳನ್ನು ನೆಪ ಮಾತ್ರಕ್ಕೆ ರೂಪಿಸಿದರೆ ಸಾಲದು, ಅವು ಅವನಿಗೆ ದೊರೆಯುವಂತೆ ಮಾಡಬೇಕು. ಹಾಗೆಯೇ ಬೆಳೆದ ಬೆಳೆಗೆ ಸರಿಯಾದ ಬೆಲೆಯನ್ನು ಕೊಟ್ಟರೆ ರೈತನ ಸ್ಥಿತಿ ಸ್ವಲ್ಪಮಟ್ಟಿಗಾದರೂ ಸುಧಾರಿಸಬಹುದು. ಇಂದಿಗೂ ಈ ಸಮಸ್ಯೆಗಳಿಂದ ಕುಟುಂಬವೇ ಈ ರೀತಿ ನಿರ್ನಾಮನಾಗುವುದನ್ನು ಪ್ರಸ್ತುತದಲ್ಲಿ ಕಾಣಲಾಗುತ್ತಿದೆ. ಚಿಕ್ಕಮ್ಮನ ಬಳಿ ಸರ್ಕಾರದ ಹಣವಿದ್ದಾಗ ಕಾಗೆಗಳ ಹಾಗೆ ಇದ್ದ ಪುಡಾರಿಗಳು ಎಲ್ಲಾ ಖಾಲಿಯಾದ ಮೇಲೆ ಮೋಸದಿಂದ ಜಾರಿಕೊಳ್ಳುವ ಇಂತಹ ದುಷ್ಟರು ಸಮಾಜದ ಪ್ರಗತಿಗೆ ಧಕ್ಕೆಯನ್ನು ಉಂಟುಮಾಡುತ್ತಾರೆ.

ಒಟ್ಟಾರೆಯಾಗಿ ಗ್ರಾಮೀಣ ಸಮಾಜದಲ್ಲಿ ಬದುಕು ನಡೆಸುತ್ತಿರುವ ರೈತನ ಸ್ಥಿತಿ ಇಂದು ಶೋಚನೀಯವಾಗಿದೆ. ಒಂದಾನೊಂದು ಕಾಲದಲ್ಲಿ ಊರಿಗೆ ಕೊಡುವಷ್ಟು ಬೆಳೆಯನ್ನು ಬೆಳೆದು ವರ್ಷಾನುಗಟ್ಟಲೆ ತಿನ್ನುವಷ್ಟು ಬೆಳೆಯುತ್ತಿದ್ದರು. ಅಂದರೆ ಹಿಂದೆಲ್ಲ ಮಳೆ ಬೆಳೆ ಅಷ್ಟು ಸಮೃದ್ಧಿಯಿಂದ ಕೂಡಿತ್ತು. ಇಂದು ಎಲ್ಲವು ಆಧುನಿಕತೆಯ ಪ್ರಭಾವದಿಂದ ಎಲ್ಲವು ಆಧುನಿಕಮಯವಾಗುತ್ತಿದೆ. ರೈತನ ಬದುಕನ್ನು ಹತ್ತಿರದಿಂದ ಕಂಡು ಕೇಳಿದ ಲೇಖಕರು ರೈತನ ಮಗನಾಗಿ ಹುಟ್ಟಿ ಗ್ರಾಮೀಣ ಜೀವನ ಚಿತ್ರಣವನ್ನು, ಅಲ್ಲಿನ ಬದುಕು ಬವಣೆಯನ್ನು ಕಟ್ಟಿಕೊಟ್ಟಿದ್ದಾರೆ.

ಅಧ್ಯಾಯ-೫

ಭಾಷೆ ಮತ್ತು ಅಭಿವ್ಯಕ್ತಿ

ಭಾಷೆ ಎಂಬುದು ನಿಂತ ನೀರಲ್ಲ. ಸದಾ ಹರಿಯುತ್ತಿರುವ ಮಾಧ್ಯಮವಾಗಿದೆ. ಭಾಷೆ ಪ್ರತಿಯೊಬ್ಬರಲ್ಲೂ ತಮ್ಮ ಭಾವನೆಗಳನ್ನು ಅನುಭವಗಳನ್ನು ವ್ಯಕ್ತಪಡಿಸಲು ಇರುವ ಪ್ರಮುಖವಾದ ಮಾಧ್ಯಮವಾಗಿದೆ. ಹಾಗೆಯೇ ಭಾಷೆಯನ್ನು ಸಾಹಿತ್ಯದಲ್ಲಿ ತಮ್ಮ ಅಭಿರುಚಿಗೆ ತಕ್ಕಂತೆ, ತಮ್ಮ ಪರಿಸರಕ್ಕೆ ತಕ್ಕಂತೆ ಬಳಸುವುದನ್ನು ಕಾಣಬಹುದು. ಭಾಷೆಯೆಂಬುದು ನೈಸರ್ಗಿಕ ಕ್ರಿಯೆಯಲ್ಲ. ಅದು ಕಲಿತ ಕ್ರಿಯೆ ಎಂಬುದು ತಿಳಿಯುತ್ತದೆ. ಒಂದು ವಿಚಾರವನ್ನು ಸಾಹಿತ್ಯದ ಮೂಲಕ ತಿಳಿಯಬೇಕಾದರೆ, ಭಾಷೆ ಮುಖ್ಯವಾಗುತ್ತದೆ. ಜೊತೆಗೆ ಭಾಷೆ ಓದುಗರ ಹೃದಯದಲ್ಲಿ ಮೆಚ್ಚುಗೆಯನ್ನು ಪಡೆಯುವ ಮತ್ತು ಆ ಭಾಷೆಯಿಂದ ತಿಳಿದುಕೊಳ್ಳುವ ವಿಚಾರಗಳು ಪ್ರಮುಖವಾಗಿರುತ್ತದೆ. ಹಾಗಾಗಿ ಭಾಷೆ ಎಂಬುದು ಸಾಹಿತ್ಯದಲ್ಲಿ ಎಷ್ಟರಮಟ್ಟಿಗೆ ತನ್ನ ಸ್ಥಾನವನ್ನು ಉಳಿಸಿಕೊಳ್ಳುತ್ತದೆ ಎಂಬುದು ಮುಖ್ಯ.

ಒಂದು ಕೃತಿ ಸಾಹಿತ್ಯದಲ್ಲಿ ತಿಳಿಸಬಹುದಾದ ವಿಚಾರ ಎಷ್ಟು ಮುಖ್ಯವೋ ಅದನ್ನು ತಿಳಿಸಬಲ್ಲ ಭಾಷೆ ಕೂಡ ಅಷ್ಟೇ ಮುಖ್ಯವಾಗುತ್ತದೆ. ಸಾಹಿತ್ಯದಲ್ಲಿ ಬರುವ ಕಥೆ, ಕವನ, ಕಾದಂಬರಿ, ನಾಟಕ, ಮುಂತಾದ ಪ್ರಕಾರಗಳಲ್ಲಿ ಬಳಸಿರುವ, ಭಾಷೆ ಆಯಾ ಸಾಹಿತಿಯ ಅನುಭವಗಳಿಗೆ ತಕ್ಕಂತೆ, ಭಾಷೆಯಲ್ಲಿ ಬಳಕೆಯಾಗಿರುವುದು ಗಮನಾರ್ಹವಾದ ವಿಚಾರವಾಗಿದೆ. ಸಣ್ಣ ಕಥೆಯಲ್ಲಿ ಮೊದಲು ಕಥೆ ರಚಿಸಿದವರು 'ಪಂಜೆ ಮಂಗೇಶರಾಯರು', ಆದರೂ "ಸಣ್ಣ ಕಥೆಗೆ ಒಂದು ಸ್ವರೂಪವನ್ನು ತಂದುಕೊಟ್ಟು, ಅದನ್ನು ಗಂಭೀರವಾದ ಜೀವನ ಚಿಂತನೆಯ ಮಾಧ್ಯಮವನ್ನಾಗಿ ಮಾಡಿ, ಭಾಷೆಯನ್ನೂ ಅದಕ್ಕೆ ಹದಗೊಳಿಸಿದವರು".[೧] ಶ್ರೀನಿವಾಸರು. ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರ ಕಥಾ ಸಾಹಿತ್ಯದಲ್ಲಿ ಪ್ರಾದೇಶಿಕ ಆಡುನುಡಿಯ ಸೊಗಸು ಬಳಕೆಯಾಗಿರುವುದನ್ನು ಕಾಣಬಹುದು. ಶಿಷ್ಟ ಕನ್ನಡ-ದೇಸಿ ಕನ್ನಡ ಎರಡರ ಕಸುವುಗಳನ್ನು ತಮ್ಮ ಬರವಣಿಗೆಯಲ್ಲಿ ಮೂಡಿಸಿದ್ದಾರೆ. ಕಥೆಗಳಲ್ಲಿ ಬರುವ ಪಾತ್ರಗಳಿಗೆ ತಕ್ಕಂತೆ ಸರಳವಾದ ಭಾಷೆಯನ್ನು ಬಳಸಿದ್ದಾರೆ. ಗ್ರಾಮೀಣ ಜೀವನದಲ್ಲಿ ಬರುವ ಮೇಲ್ವರ್ಗದವರ ಭಾಷೆ, ಕೆಳವರ್ಗದವರ ಭಾಷೆ, ಹಾಗೆಯೇ ಹೆಣ್ಣಿನ ಭಾಷೆ, ಗಂಡಿನ ಭಾಷೆ, ಯಾವ ರೀತಿಯಲ್ಲಿ ಅವುಗಳು ಭಾಷೆಯಿಂದ ಪ್ರಧಾನವಾಗುತ್ತದೆ ಎಂಬುದನ್ನು ತಿಳಿಯಬಹುದು.

ಸಣ್ಣ ಕಥೆಯಲ್ಲಿ ಇರುವ ವಸ್ತು ವೈವಿಧ್ಯತೆ, ಕಥನ ತಂತ್ರ, ಶೈಲಿ ಮೊದಲಾದವುಗಳ ಪಾತ್ರವಹಿಸುವಂತೆ ಭಾಷೆಯು ಸಹ ಮುಖ್ಯವಾಗುತ್ತದೆ. ಕೃಷ್ಣಪ್ಪ ಅವರ ಕಥೆಗಳಲ್ಲಿ ಗ್ರಾಮೀಣ ಭಾಷೆ ಎಂಬುದು ಅವರ ಬದುಕು ಆಚಾರ-ವಿಚಾರ, ಸಂಸ್ಕೃತಿ, ಸಂಪ್ರದಾಯ ಎಲ್ಲವನ್ನು ಕಟ್ಟಿಕೊಡುತ್ತವೆ. ಉದಾಹರಣೆಗೆ **'ಮತ್ತೊಂದು ಅವಕಾಶಕ್ಕಾಗಿ'** ಕಥೆಯಲ್ಲಿ ಬರುವ ಹೆಣ್ಣಿನ ಭಾಷೆ ಅಲ್ಲಿನ ಗ್ರಾಮೀಣ ಜೀವನದ ಚಿತ್ರಣವನ್ನು ಕಟ್ಟಿಕೊಡುತ್ತದೆ. "ಈ ಎಳಗಾಲ್ಮುಂಡೆ ಬಂದು ಮೂರೊರ್ಷಾದ್ರು ಒಂದು ಮಕ್ಕಿಲ್ಲ ಮರಿಲ್ಲ. ಒಳ್ಳೆ ಗಣೆಮರ್ದಂಗ್ ನಿಂತವ್ಳೆ. ಆ ನನ್ಮಗನ್ಗೊ ಅಷ್ಟೆಲ್ಲಾ ಹೇಳ್ದೆ, ಇವ್ಳು ಬೇಡಕಲ ಅಂತ. ಈ ಸುಪ್‌ನಾತಿ ಏನ್ ಮಾಟ ಮಾಡಿಸಿದ್ಲೊ ಇವ್ಳೆ ಆಗ್ಬೇಕು ಅಂತ ಕುಂತ್ಬುಟ್ಟ". **'ಹೊಸೂರಿನ ಹಳೆಯ ತಲೆಗಳು'** ಕಥೆಯಲ್ಲಿನ ಹೆಣ್ಣಿನ ಭಾಷೆ ಅಲ್ಲಿನ ಜೀವನ ಚಿತ್ರಣವನ್ನು ತಿಳಿಸುತ್ತದೆ. "ಲೇ ಹೊಲಿ ಮುಂಡೆ, ಕಾನೂನು ನೀನೊಬ್ಳೆ ಅಲ್ಲ ಕಂಡಿರೋಳು, ನಾವು ಕಂಡಿವಿ ಕಲೆ. ಓಹೋಹೋ, ಇವ್ಳು ನನ್ಗೆ ಕಾನೂನೇಳ್ಕೊಡ್ತಳೆ. ಸುಗ್ಗೀಲಿ ಕಣದೇಲಿ ಹಲ್ಗಿಂಚ್ಕೋಂಡ್ ಬರುವಾಗ ಕಾನೂನಿಲ್ಲ". ಎಂಬ ಮಾತುಗಳಲ್ಲಿ

ಮೇಲ್ವರ್ಗದವರ ವ್ಯಕ್ತವಾಗುವುದನ್ನು ನೋಡಬಹುದು. ಜೊತೆಗೆ ಹೆಣ್ಣಿನ ಅಸಹಾಯಕ ಪರಿಸ್ಥಿತಿಯಲ್ಲಿನ ಮಾತುಗಳು **'ಕತ್ತಲು'** ಕಥೆಯಲ್ಲಿನ ಶಿವಿಯ ಮೇಲಾಗುವ ಶೋಷಣೆಯನ್ನು ಪ್ರತಿಬಿಂಬಿಸುತ್ತದೆ. "ಇನ್ನೂ ಮುಂದೆ ಹೊಲಗೇರಿಯ ಯಾವ ಹೆಣ್ಣು ತನ್ನ ರೀತಿ ಆಗಬಾರದೆಂದು ಕೊಳ್ಳುತ್ತಾಳೆ". ಈ ಮಾತುಗಳು ಒಂದು ಹೆಣ್ಣಿನ ಮೇಲಾಗುವ ಶೋಷಣೆಯನ್ನು ತಮ್ಮ ಸರಳವಾದ ಭಾಷೆಯ ಮೂಲಕ ಎತ್ತಿಹಿಡಿದ್ದಾರೆ.

"ಅದೆಲ್ಲ ಇರ್ಲಿ ಕಲ, ನಿನ್ಮಗ್ಳೆಲ್ಲೋದ್ಲು ಹೇಳು. ಏನ ಹೊಲಗೇರಿಗೆ ಪೂಟ್‌ಲಾಯರ್ ಆಗ್ಬುಟ್ಟವ್ಳೆ. ನಮ್ಮ ತೋಟ್ದಲ್ಬಂದು ಸೌದೆ ಕಟ್ಟಿದ್ದಲ್ದೆ ನನ್ಮಗ ಕೇಳಿದ್ಕೆ ಕುಡ್ಲು ತೋರಿಸಿದ್ಲಂತ. ನಿನ್ಮಗ್ಳೇನ್ ಪಾಳೆಗಾರಿ ಏನ್ಲಾ?"

"ಇದೇನ್ರಪ್ಪಾ ಇಂಗಂತೀರಿ, ಮೊನ್ನೆ ದಿನ ನೀವೇಳ್ದಾಗ್ಲೆ ಹೊಡ್ದು ಬುದ್ದಿ ಕಲ್ಸೀದ್ದೀನಿ. ಸೀನಿರ್ಬಾವೀಲಿ ಯಾರೂ ನೀರ್ ಸೇದ್ದಂಗೆ ಕಟ್ಮಾಡಿದ್ದೀನಿ".

ಈ ಮಾತುಗಳನ್ನು ಗಮನಿಸಿದಾಗ ಕಥೆಯಲ್ಲಿನ ಗೌಡ ಮತ್ತು ಆಳಿನ ಮಾತುಗಳು ಭಾಷೆಯಲ್ಲಿ ಹೇಗೆ ಭಿನ್ನವಾಗಿರುತ್ತವೆ ಎಂಬುದನ್ನು ಕಾಣಬಹುದು. ಗೌಡನ ದರ್ಪದ ಮಾತುಗಳು, ಆಳಿನ ದೀನತೆಯ ಮಾತುಗಳು ಭಾಷೆಯಲ್ಲಿ ವ್ಯಕ್ತವಾಗಿರುವುದು ಪ್ರಮುಖವಾದ ವಿಚಾರ. ಗ್ರಾಮೀಣ ಜನರ ಆಡುನುಡಿ ಕೃಷ್ಣಪ್ಪ ಅವರ ಕಥೆಗಳಲ್ಲಿ ಹಾಸುಹೊಕ್ಕಾಗಿರುವುದನ್ನು ಗಮನಿಸಬಹುದು.

ಸಾಹಿತ್ಯದಲ್ಲಿ ಪಾತ್ರ, ಕಲ್ಪನೆ, ವಿಶಿಷ್ಟತೆ ಎಷ್ಟು ಮುಖ್ಯವಾಗುತ್ತದೋ, ಸಾಹಿತ್ಯದಲ್ಲಿನ ವಿಚಾರವನ್ನು ಅಭಿವ್ಯಕ್ತಿಸುವ ಭಾಷೆಯು ಅಷ್ಟೇ ಮುಖ್ಯವಾಗುತ್ತದೆ. ಸಣ್ಣ ಕಥೆಯಲ್ಲಿ ಬರುವ ವಿಚಾರವನ್ನು ಮೊದಲೇ ಈ ಕಥೆಯಲ್ಲಿ **'ಒಬ್ಬರು ಸಾಯುತ್ತಾರೆ'** ಎಂದು ಹೇಳಿಬಿಟ್ಟರೆ ಕಥೆಯಲ್ಲಿ ಕುತೂಹಲ ಕೆಡುತ್ತದೆ. ಆದ್ದರಿಂದ ಒಳ್ಳೆಯ ರೀತಿಯಿಂದ ಕಥೆಯನ್ನು ಪ್ರಾರಂಭಿಸುವುದು ಗಮನಾರ್ಹವಾದ ಸಂಗತಿಯಾಗಿದೆ. ಕಥೆಯು ಪರಿಣಾಮಕಾರಿ ಯಾಗಿರುವಂತೆ ಅದರ ಮುಕ್ತಾಯಕ್ಕೆ ಒಂದು ಮಾಧುರ್ಯವು ಬೇಕಾಗುತ್ತದೆ. ಹಾಗಾಗಿ ಕಥೆಯನ್ನು ಅಭಿವ್ಯಕ್ತಿಸುವುದು ಕೂಡ ಸಾಹಿತ್ಯದಲ್ಲಿ ಪ್ರಮುಖ ವಿಷಯವಾಗಿದೆ. ಕೃಷ್ಣಪ್ಪ ಅವರ ಕಥೆಗಳಲ್ಲಿ ಕೆಲವೊಂದರಲ್ಲಿ ಪ್ರಾರಂಭದಲ್ಲಿ ಕಥೆ ಹೇಳಿ ನಂತರ ಅದು ವಿಸ್ತಾರವಾಗಿ ಹೋಗುವುದನ್ನು ಕಾಣಬಹುದು. ಮೊದಲೇ ಪ್ರಾರಂಭವಾಗಿ ಕೊನೆಯವರೆಗೆ ತಿಳಿಸಿ, ಅನಂತರ ಕಥೆ ಮುಂದುವರಿಯುವುದನ್ನು ಕಾಣಬಹುದು. ಗ್ರಾಮೀಣ ಪ್ರದೇಶದ ಆಡುನುಡಿಯನ್ನು ತಮ್ಮದೆಯಾದ ಅನುಭವದಿಂದ ಅಭಿವ್ಯಕ್ತಿಸಿರುವುದು ಕೃಷ್ಣಪ್ಪ ಅವರ ಕಥಾಸಾಹಿತ್ಯಕ್ಕೆ ಗಮನಾರ್ಹವಾದ ಕೊಡುಗೆ ಎನ್ನಬಹುದು. ಕಥೆಯನ್ನು ಹೇಗೆ ಪ್ರಾರಂಭಿಸಿದರೂ, ಅದರಲ್ಲಿ ಕುತುಹಲಾಂಶವು ಕಂಡು ಬರಬೇಕು. ಅದನ್ನು ತೋರಿಸುವುದೇ ಕಥೆಗಾರನ ಗುರಿಯಾಗಿರಬೇಕು. ಕೃಷ್ಣಪ್ಪ ಅವರ ಕಥೆಗಳಲ್ಲಿಯೂ ಸಹ ಆಯಾ ಪ್ರದೇಶಕ್ಕನುಸಾರವಾಗಿ ಬರುವ ಕಥೆಗಳು ಕುತೂಹಲ ಮೂಡಿಸುವುದು ಜೊತೆಗೆ ಅದನ್ನು ಅಭಿವ್ಯಕ್ತಿಗೊಳಿಸುವ ಕ್ರಮಬದ್ಧತೆ ಕಥೆಗಳಲ್ಲಿ ಎದ್ದು ಕಾಣುತ್ತದೆ. ಹೀಗಾಗಿ ವಿಷಯವನ್ನು ಸಾಹಿತ್ಯದಲ್ಲಿ ಅಭಿವ್ಯಕ್ತಿಗೊಳಿಸುವುದು ಗಮನಾರ್ಹ ಸಂಗತಿ.

ಒಟ್ಟಾರೆಯಾಗಿ ಕೃಷ್ಣಪ್ಪ ಅವರ ಕಥೆಯಲ್ಲಿನ ಭಾಷೆ ಅದನ್ನು ವ್ಯಕ್ತಪಡಿಸುವ ಶೈಲಿ ಪರಿಣಾಮಕಾರಿಯಾಗಿರುವುದನ್ನು ಕಾಣಬಹುದು. ತಮ್ಮ ಆಡುನುಡಿಯನ್ನು ಬಳಸಿ ಗ್ರಾಮೀಣ ಆಡು ಭಾಷೆಯನ್ನು ತಮ್ಮ ಕಥೆಗಳಲ್ಲಿ ಎತ್ತಿ ತೋರಿಸಿದ್ದಾರೆ. ಅದನ್ನು ತಿಳಿಯುವುದು ಮುಖ್ಯವಾದುದು.

ಅಡಿಟಿಪ್ಪಣಿ

೧. ಹೊಸಗನ್ನಡ ಸಾಹಿತ್ಯ ಚರಿತ್ರೆ – ಎಲ್.ಎಸ್. ಶೇಷಗಿರಿರಾವ್: ಅಂಕಿತ ಪ್ರಕಾಶನ – ಬೆಂಗಳೂರು

೨೦೦೮, ಪು. ೧೩೩

ಅಧ್ಯಾಯ-೬

ಉಪಸಂಹಾರ

'ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರ ಕಥೆಗಳು: ಒಂದು ಅಧ್ಯಯನ' ಎಂಬ ವಿಷಯದಲ್ಲಿ ಅವರ ಕಥೆಗಳಲ್ಲಿ ಬರುವ ಸಾಮಾಜಿಕ ಚಿತ್ರಣ, ಕೌಟುಂಬಿಕ ಚಿತ್ರಣ, ಹೆಣ್ಣಿನ ಬದುಕು ಮತ್ತು ರೈತಾಪಿ ಬದುಕು ಹೇಗೆ ಮೂಡಿ ಬಂದಿದೆ ಎಂದು ವಿಶ್ಲೇಷಣೆ ಮಾಡಲಾಗಿದೆ. ಹೊಸ ತಲೆಮಾರಿನ ಕಥೆಗಾರರಲ್ಲಿ ಸೃಷ್ಟಿಯಾಗಿರುವ ಇವರ ರಚನೆ ಕೆಳವರ್ಗದವರ ಘಟ್ಟದವರೆಗೂ ಹರಡಿಕೊಂಡು ಮುಂದುವರಿಯುತ್ತಿದೆ. ಹಾಗೆಯೆ ಯಾವುದೇ ಪಂಥ, ಸಿದ್ಧಾಂತ, ತತ್ವಗಳಿಗೆ ಅಂಟಿಕೊಳ್ಳದೆ ತಮ್ಮ ಜೀವನದಲ್ಲಾದ ಅನುಭವಗಳು, ಕಷ್ಟಸುಖಗಳು, ಸಮಾಜದಲ್ಲಿ ಬದಲಾಗುತ್ತಿರುವ ಚಿತ್ರಣಗಳನ್ನು ತಮ್ಮ ಕಥೆಯ ಮೂಲಕ ಅಭಿವ್ಯಕ್ತಗೊಳಿಸಿದ್ದಾರೆ. ಸಮಾಜದಲ್ಲಿ ನಡೆಯುತ್ತಿರುವ ಘಟನೆಗಳು ಒಳ್ಳೆಯ ಅಂಶಗಳು ಯಾವ ರೀತಿಯಲ್ಲಿ ಆಧುನಿಕತೆಯಿಂದ ಮರೆಯಾಗುತ್ತಿವೆ ಎಂಬುದನ್ನು ತಮ್ಮದೆಯಾದ ನೆಲೆಯಲ್ಲಿ ಚಿಂತಿಸಿ ಹಲವಾರು ಸಾಹಿತಿಗಳಿಂದ ಪ್ರೇರಣೆಗೊಂಡು ಹೊಸ ಚಿಂತನೆಯನ್ನು ಮಾಡಿರುವುದನ್ನು ತಿಳಿಯಬಹುದು.

ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರ ಕಥೆಗಳಲ್ಲಿ ಮುಖ್ಯವಾಗಿ ವಸ್ತು ವೈವಿಧ್ಯತೆಯನ್ನು ಕಾಣಬಹುದು. ಗ್ರಾಮೀಣ ಜೀವನ, ಹೆಣ್ಣಿನ ಬದುಕು, ಕೆಳವರ್ಗದವರ ಶೋಷಣೆ, ತಾರತಮ್ಯ, ಸಮಾಜದ ಸ್ಥಿತಿ, ರೈತನ ಬದುಕು, ಜಾತಿ, ಧರ್ಮ, ಮೊದಲಾದ ಅನೇಕ ವಿಚಾರಗಳನ್ನು ಕುರಿತು ಕಥೆ ರಚಿಸಿದ್ದಾರೆ. ಈ ನಿಬಂಧದಲ್ಲಿ ಮುಖ್ಯವಾಗಿ ಸಾಮಾಜಿಕ ಚಿತ್ರಣ, ಮತ್ತು ಕೌಟುಂಬಿಕ ಚಿತ್ರಣ, ಹೆಣ್ಣಿನ ಬದುಕು, ರೈತಾಪಿ ಬದುಕಿನ ಬಗ್ಗೆ ವಿಶೇಷವಾಗಿ ಚರ್ಚಿಸಿರುವುದನ್ನು ನೋಡಬಹುದಾಗಿದೆ.

ದೇಶದ ಬೆನ್ನಲುಬು ರೈತ. ಆತನೇ ದೇಶಕ್ಕೆ ಅನ್ನ ಕೊಡುವವನು. ಅವನನ್ನು ಉಳಿಸಿ ಬೆಳೆಸುವ ಪ್ರಯತ್ನವನ್ನು ತಮ್ಮದೇ ನೆಲೆಯಲ್ಲಿ ಎತ್ತಿ ಹಿಡಿದಿದ್ದಾರೆ. ಗ್ರಾಮೀಣರಲ್ಲಿ ಆಗುತ್ತಿರುವ ಬದಲಾವಣೆ ಅದರಿಂದಾಗುವ ಪರಿಣಾಮವನ್ನು ಸಮಾಜಕ್ಕೆ ಎತ್ತಿ ತೋರಿಸಿದ್ದಾರೆ. ಆಧುನಿಕತೆಯ ಪ್ರಭಾವದಿಂದ ಬದುಕಿನಲ್ಲಾಗುತ್ತಿರುವ ಸಮಸ್ಯೆಗಳ ಬಗ್ಗೆ ವಿಷಾದವನ್ನು ಸಹ ವ್ಯಕ್ತಪಡಿಸಿದ್ದಾರೆ. ಹಾಗೆಯೆ ಅದರಿಂದ ಹೊರ ಬರುವಂತೆ ಎಚ್ಚರಿಕೆಯ ಮಾತುಗಳನ್ನು ಮನುಷ್ಯ ಜೀವನದಲ್ಲಿ ತನ್ನ ಸ್ವಾರ್ಥತನದಿಂದ ಮತ್ತೊಬ್ಬರಿಗೆ ಕೆಡುಕನ್ನು ಬಯಸುವುದರಿಂದ ಒದಗುವ ಪರಿಣಾಮವನ್ನು ತಮ್ಮ ಕಥೆಗಳಲ್ಲಿ ಬಿತ್ತರಿಸಿದ್ದಾರೆ. ಸಮಾಜ ಮತ್ತು ಮನುಷ್ಯನ ಸಂಬಂಧ, ಭೂಮಿ ಮತ್ತು ಮನುಷ್ಯ ಸಂಬಂಧದ ಬಗ್ಗೆ ತಿಳಿಸಿದ್ದಾರೆ. ಮನುಷ್ಯ ಸಮಾಜಕ್ಕಾಗಿ ಅದರ ಏಳಿಗೆಗಾಗಿ ಬದುಕಬೇಕು. ಹಾಗೆಯೇ ಉತ್ತಮಸ್ಥಾನ ಮಾನಗಳಿಂದ, ವಂಚಿತರಾಗಿ ಅಧಿಕಾರದ ಮದದಲ್ಲಿ ಮೆರೆಯುವ ಮನುಷ್ಯ ಕೊನೆಗೆ ತಾನೇ ನಾಶವಾಗುವುದನ್ನು ಮುಖ್ಯವಾಗಿ ತಿಳಿಸಿದ್ದಾರೆ.

ಪ್ರತಿಯೊಬ್ಬರಲ್ಲೂ ತಾವು ಹುಟ್ಟಿದ ನೆಲೆ, ಮಾತಾನಾಡುವ ಭಾಷೆಯ ಬಗ್ಗೆ ಅಭಿಮಾನ ಕಡಿಮೆಯಾಗುತ್ತಿರುವುದು ಕೃಷ್ಣಪ್ಪ ಅವರ ಕಥೆಗಳಲ್ಲಿ ಕಂಡು ಬರುತ್ತದೆ. ತಾವು ಹುಟ್ಟಿ ಬೆಳೆದ ಊರಿನ ಬಗ್ಗೆ ಸಾಕಿ ಬೆಳೆಸಿದ ತಂದೆ-ತಾಯಿಗಳ ಬಗ್ಗೆ, ದುಡಿದು ತಿನ್ನುವ ಭೂಮಿ ತಾಯಿಯ ಬಗ್ಗೆ ಇರುವ ನಿರ್ಲಕ್ಷ್ಯದ ಮನೋಭಾವವನ್ನು ಮುಂದೆ ಅದರಿಂದ ಸಮಾಜಕ್ಕೆ ಆಗುವ ಹಾನಿಯನ್ನು ತಿಳಿಸಿದ್ದಾರೆ.

ಮುಖ್ಯವಾಗಿ ತಾವು ಹುಟ್ಟಿದ ಗ್ರಾಮೀಣ ಸೊಗಡಿನ ಭಾಷೆಯನ್ನು ತಮ್ಮ ಕಥೆಯಲ್ಲಿ ಬಳಸಿರುವುದು, ಅವರ ಸಾಹಿತ್ಯ ಲೋಕಕ್ಕೆ ಹೆಮ್ಮೆಯ ವಿಚಾರವಾಗಿದೆ. ಯಾವುದೇ ಕಥನ ತಂತ್ರಗಳಿಲ್ಲದೆ ನೇರವಾಗಿ ಅಲ್ಲಿನ ಸಂಗತಿಗಳನ್ನು ತಮ್ಮ ಕಥೆಗಳಲ್ಲಿ ವ್ಯಕ್ತಪಡಿಸಿರುವುದನ್ನು ಗುರುತಿಸಬಹುದಾಗಿದೆ. ಹಾಗೆಯೇ ಗ್ರಾಮೀಣ ಪ್ರದೇಶದಲ್ಲಿ ಆಗುತ್ತಿರುವ ಮೋಸ, ವಂಚನೆ, ಶೋಷಣೆ, ಕೊಲೆ, ಕೌಟುಂಬಿಕ ಕಲಹಗಳು ಮೊದಲದವುಗಳು ನಿಂತು ಉತ್ತಮವಾದ ಆರೋಗ್ಯಕರ ಸಮಾಜವನ್ನು ಕಾಣಲು ಬಯಸುವುದನ್ನು ಮುಖ್ಯವಾಗಿ ತಿಳಿಯಬಹುದು.

ಒಟ್ಟಾರೆಯಾಗಿ ಒಬ್ಬ ರೈತ ಕವಿಯಾಗಿ ತಾನು ಕಂಡ ಸುತ್ತಮುತ್ತಲಿನ ಎಲ್ಲಾ ವಿಚಾರಗಳನ್ನು ತಿಳಿಸುತ್ತ ಅವುಗಳು ಬದಲಾವಣೆಯಾಗುವ ದಾರಿಯಲ್ಲಿ ಹೋಗುವಂತೆ ತಮ್ಮ ಕಥೆಗಳಲ್ಲಿ ಆಶಿಸಿದ್ದಾರೆ. ಆದ್ದರಿಂದ ಎಲ್ಲಾ ಸಾಹಿತ್ಯ ಆಸಕ್ತರು ಜೊತೆಗೆ ಸಮಾಜದಲ್ಲಿರುವ ಪ್ರತಿಯೊಬ್ಬರು ತಿಳಿಯಬೇಕಾದ ವಿಚಾರಗಳು ಇವರ ಕಥೆಗಳಲ್ಲಿವೆ. ಅದನ್ನು ತಿಳಿದು ಬದಲಾವಣೆಗೊಂಡ ಸಮಾಜವನ್ನು ನೋಡುವ ಅವರ ಕಥೆಗಳನ್ನು ಮುಖ್ಯವಾಗಿ ಗುರುತಿಸಬಹುದಾಗಿದೆ.

ಬೊಮ್ಮನಾಯಕನಹಳ್ಳಿ ಕೃಷ್ಣಪ್ಪ ಅವರ ಕೃತಿಗಳು

೧. ಮಣ್ಣಿನ ಬದುಕು (ಕಥಾಸಂಕಲನ)
೨. ರಣಹದ್ದುಗಳು (ಕಥಾಸಂಕಲನ)
೩. ಹೊಸೂರಿನ ಹಳೆಯ ತಲೆಗಳು (ನೀಳ್ಗತೆ)
೪. ಒಂದು ಆತ್ಮಹತ್ಯೆಯ ಕಥೆ (ಕಥಾಸಂಕಲನ)
೫. ನೋವಂಚಿಕೊಂಡವರು (ಕವನ ಸಂಕಲನ)
೬. ಗಾಂಧೀಯ ನಾಡಲ್ಲಿ ಹುಟ್ಟಿದವರು (ಕಥಾಸಂಕಲನ)
೭. ಬೊಮ್ಮನಾಯಕನಹಳ್ಳಿ : ಒಂದು ಸಾಂಸ್ಕೃತಿಕ ಅಧ್ಯಯನ (ಸಂಶೋಧನೆ)
೮. ಮೂವರು ಪ್ರವಾಸಿಗಳು (ಮಕ್ಕಳ ಕಥೆಗಳು)
೯. ನಮ್ಮ ಹಳ್ಳಿ (ಮಕ್ಕಳ ಕವಿತೆಗಳು)
೧೦. ರೈತನ ಗೆಳೆಯರು (ಮಕ್ಕಳ ಕವಿತೆಗಳು)
೧೧. ಮಲ್ಲಿಗೆಮಂಟಪ (ಮಕ್ಕಳ ಶಿಶುಪ್ರಾಸ)
೧೨. ಸೂರ್ಯದೇವ ಮತ್ತು ಇತರೆ ಕಥೆಗಳು (ಮಕ್ಕಳ ಕಥೆಗಳು)
೧೩. ಬಯಲು ಸೀಮೆಯ ಕಥೆಗಳು (ಸಮಗ್ರ ಕಥೆಗಳು)

ಪರಾಮರ್ಶನ ಗ್ರಂಥಗಳು

೧. ಯುಗಧರ್ಮ ಹಾಗೂ ಸಾಹಿತ್ಯದರ್ಶನ : ಕೀರ್ತಿನಾಥ ಕುರ್ತುಕೋಟಿ - ೨೦೦೮
ಕುರ್ತುಕೋಟಿ ಮೆಮೋರಿಯಲ್ ಟ್ರಸ್ಟ್.

೨. ಶತಮಾನದ ಸಣ್ಣಕಥೆಗಳ ಸಮೀಕ್ಷೆ : ಕರೀಗೌಡ ಬೀಚನಹಳ್ಳಿ – ೨೦೦೩
ವಿ.ಎನ್. ಮಲ್ಲಿಕಾರ್ಜುನಸ್ವಾಮಿ ರಿಜಿಸ್ಟ್ರಾರ್,ಕರ್ನಾಟಕ ಸಾಹಿತ್ಯ ಆಕಾಡೆಮಿ.

೩. ಹೊಸಗನ್ನಡ ಸಾಹಿತ್ಯ ಚರಿತ್ರೆ : ಎಲ್,ಎಸ್.ಶೇಷಗಿರಿರಾವ್ – ೨೦೦೮
ಅಂಕಿತ ಪ್ರಕಾಶನ ಬೆಂಗಳೂರು.

೪. ಕನ್ನಡ ಸಾಹಿತ್ಯದಲ್ಲಿ ಸಣ್ಣಕಥೆಯ ಸ್ಥಾನ : ವರದರಾಜ ಹುಯಿಲಗೋಳ
ಪ್ರಕಟಣೆ – ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೫. ಸಮಗ್ರ ವಿಮರ್ಶಾ ಸಾಹಿತ್ಯ – ಎಲ್.ಎಸ್. ಶೇಷಗಿರಿರಾವ್ – ೨೦೧೦
ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು.

೬. ಆಧುನಿಕ ಮಹಿಳಾ ಸಾಹಿತ್ಯ ಇನ್ನಷ್ಟು ಪುಟಗಳು : ಡಾ.ಎಂ.ಉಷಾ–೨೦೦೭
ಪ್ರಕಾಶನ ಪ್ರೊ. ಮಲ್ಲೇಪುರಂ. ಜಿ.ವೆಂಕಟೇಶ್ ನಿರ್ದೇಶಕರು ಪ್ರಸಾರಾಂಗ ಹಂಪಿ.

೭. ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ — ಸಂ. ಎಚ್.ಎಸ್. ಶ್ರೀಮತಿ– ಪ್ರಸಾರಾಂಗ ಕನ್ನಡ ವಿಶ್ವ ವಿದ್ಯಾನಿಲಯ ಹಂಪಿ, — ೨೦೦೬

೮. ಹೆಣ್ಣು ಮತ್ತು ಭಾಷೆ — ಡಾ॥ ಎಚ್.ಎಸ್. ಶ್ರೀಮತಿ, ಕನ್ನಡ ವಿಶ್ವ ವಿದ್ಯಾನಿಲಯ ಹಂಪಿ, — ೨೦೦೬

೯. ಸಾಹಿತ್ಯ ವಿಮರ್ಶೆ — ಸಿ.ಎನ್. ರಾಮಚಂದ್ರನ್, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು — ೨೦೦೮

೧೦. ಸ್ತ್ರೀವಾದ — ಡಾ॥ ಬಿ.ಎನ್. ಸುಮಿತ್ರಬಾಯಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು — ೨೦೦೬

AKSHARA GRANTHALAYA
ACC.NO. 048872

048872